(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ವಿಧಾನಸಭೆ ನಡೆಯಬೇಕಾದಾಗ ಅದನ್ನು ತೀರ್ಮಾನ ಮಾಡಬೇಕಾಗಿರತಕ್ಕಂಥದ್ದು ಸರ್ಕಾರ. ಸಚಿವ ಸಂಪುಟದಲ್ಲಿ ಅನುಮೋದನೆ ಆಗಬೇಕು. ಸಚಿವ ಸಂಪುಟ ಕರೆದ ನಂತರ ರಾಜ್ಯಪಾಲರ ಒಪ್ಪಿಗೆ ಆಗಬೇಕು. ಆಗ ಸದನವನ್ನು ಕರೆಯಬೇಕು ಮಾನ್ಯ ಅಧ್ಯಕ್ಷರೆ, ನಾವು ನಿಮ್ಮನ್ನು ಆಕ್ಷೇಪಣೆ ಮಾಡುತ್ತಿಲ್ಲ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಒಂದು ಸಲ ನಮ್ಮನ್ನು ಆಕ್ಷೇಪ ಮಾಡುತ್ತೀರಿ, ಮತ್ತೊಂದು ಸಲ ಅವರ ಮೇಲೆ ನೀವು ಆಕ್ಷೇಪ ಮಾಡುತ್ತೀರಿ. ಯಾವುದು ಆಕ್ಷೇಪಣೆ ಎಂಬುದು ನಮಗೆ ಗೊತ್ತಾಗುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಚಿವ ಸಂಪುಟದಲ್ಲಿ ಒಪ್ಪಿಗೆ ಆದರೂ ಕೂಡ ಇದುವರೆಗೂ ತಮ್ಮ ಗಮನಕ್ಕೆ ಬರಲಿಲ್ಲವೆಂದರೆ ಕಾರಣ ಏನು? ಅಧ್ಯಕ್ಷರೆ ನಿಮ್ಮನ್ನಲ್ಲ, ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ. ಆಚಾರ್ಯರ ವರಿಗೆ ಅಗೌರವ ತರುವಂಥದ್ದು ಅವರ ಕಡೆಯಿಂದಲೇ, ಆ ಕಡೆಯಿಂದ ನಮ್ಮ ಕಡೆಯಿಂದಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸಂತಾಪ ಸೂಚನೆಗೆ ಸಹಕರಿಸಿ. ಈಗ ಸಂತಾಪ ಸೂಚನೆ.

2. ಸಂತಾಪ ಸೂಚನೆ :

ವಿಷಯ : ಉನ್ನತ ಶಿಕ್ಷಣ ಸಚಿವರಾದ
ಡಾ: ವಿ.ಎಸ್. ಆಚಾರ್ಯರವರ ನಿಧನದ ಬಗ್ಗೆ.

ಅಧ್ಯಕ್ಷರು : ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ: ವಿ.ಎಸ್. ಆಚಾರ್ಯ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ. ಡಾ: ವಿ.ಎಸ್. ಆಚಾರ್ಯ ಅವರು 6ನೇ ಜುಲೈ 1940 ರಂದು ಉಡುಪಿಯಲ್ಲಿ ಜನಿಸಿದ್ದು, ಬಿ.ಎಸ್ಸಿ, ಎಂಬಿಬಿಎಸ್ ಪದವಿಯನ್ನು ಪಡೆದವರಾಗಿದ್ದರು. ವೃತ್ತಿಯಲ್ಲಿ ವೈದ್ಯರಾಗಿದ್ದ ಶ್ರೀಯುತರು 1965 ರಿಂದ ವೈದ್ಯಕೀಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡವರಾಗಿದ್ದರು.

ಜನಸಂಘದ ಧೀಮಂತ ನಾಯಕರಾಗಿದ್ದ ದೀನದಯಾಳ್ ಉಪಾಧ್ಯಾಯರ ಪ್ರಭಾವಕ್ಕೆ ಒಳಗಾಗಿ 1967ರಲ್ಲಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ ದಿವಂಗತರು 1968 ರಲ್ಲಿ ಉಡುಪಿ ಪುರಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರಲ್ಲದೆ 1973 ರಲ್ಲಿ ಅದೇ ಪುರಸಭೆಗೆ ಎರಡನೇ ಬಾರಿಗೆ ಆಯ್ಕೆಯಾಗಿ ಅಧ್ಯಕ್ಷರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ. ಆ ಅವಧಿಯಲ್ಲಿ ಉಡುಪಿ ನಗರಕ್ಕೆ ನೀರು ಪೂರೈಸುವ ಸುವರ್ಣ ನದಿ ಯೋಜನೆಯನ್ನು ಜಾರಿಗೆ ತಂದಿರುತ್ತಾರಲ್ಲದೆ, ದೇಶದಲ್ಲಿಯೇ ಪ್ರಥಮ ಬಾರಿಗೆ ಮಲ ಹೊರುವ ಪದ್ಧತಿಗೆ ನಗರಸಭಾ ವ್ಯಾಪ್ತಿಯಲ್ಲಿ ನಿಷೇಧವನ್ನು ಜಾರಿಗೊಳಿಸುವ ನಿರ್ಣಯ ಕೈಗೊಳ್ಳುವ ಮೂಲಕ ಸಮಾಜೋದ್ಧಾರಕ ಎನಿಸಿಕೊಂಡಿದ್ದರು.

1975 ರಿಂದ 1976 ರವರೆಗೆ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದನ್ನು ವಿರೋಧಿಸಿ ಸುಮಾರು 19 ತಿಂಗಳುಗಳ ಕಾಲ ಬೆಂಗಳೂರಿನಲ್ಲಿ ಸೆರೆಮನೆ ವಾಸ ಅನುಭವಿಸಿದ್ದರು.

ದಿವಂಗತರು 1974 ರಿಂದ 1977 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಭಾರತೀಯ ಜನಸಂಘದ ಜಿಲ್ಲಾಧ್ಯಕ್ಷರಾಗಿ 1977 ರಿಂದ 1980 ರವರೆಗೆ ಜನತಾ ಪಕ್ಷದ ಜಿಲ್ಲಾಧ್ಯಕ್ಷರಾಗಿ 1980 ರಿಂದ 1983 ರವರೆಗೆ ಬಿ.ಜೆ.ಪಿ. ಜಿಲ್ಲಾಧ್ಯಕ್ಷರಾಗಿ 1984 ರಿಂದ ಇಪ್ಪತ್ತು ವರ್ಷಗಳ ಕಾಲ ಬಿಜೆಪಿ ರಾಜ್ಯ ಉಪಾಧ್ಯಕ್ಷರಾಗಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

1983 ರಲ್ಲಿ ಉಡುಪಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಗೊಂಡು ಸೇವೆ ಸಲ್ಲಿಸಿದ್ದ ಶ್ರೀಯುತರು ಆ ಅವಧಿಯಲ್ಲಿ ಭಾರತೀಯ ಜನತಾ ಪಕ್ಷದ ಶಾಸಕಾಂಗದ ನಾಯಕರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1996 ರಿಂದ 2002, 2002 ರಿಂದ 2008 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರಲ್ಲದೇ 2008ರಲ್ಲಿ ವಿಧಾನ ಪರಿಷತ್ತಿಗೆ ಪುನರಾಯ್ಕೆಗೊಂಡಿದ್ದರು.

2006 ರಿಂದ 2007 ಮತ್ತು 2008 ರಿಂದ ಬದುಕಿರುವವರೆಗೂ ರಾಜ್ಯದ ಸಂಪುಟ ದರ್ಜೆ ಸಚಿವರಾಗಿ, ವೈದ್ಯಕೀಯ ಶಿಕ್ಷಣ, ಉನ್ನತ ಶಿಕ್ಷಣ ಮತ್ತು ಗೃಹ ಖಾತೆಯ ಜೊತೆಗೆ ಹಲವಾರು ಮಹತ್ವದ ಖಾತೆಗಳ ಸಚಿವರಾಗಿ, ವಿಧಾನ ಪರಿಷತ್ತಿನ ಸಭಾನಾಯಕರಾಗಿ ದಕ್ಷತೆ ಮತ್ತು ಪ್ರಾಮಾಣಿ

ಕತೆಯಿಂದ ರಾಜ್ಯದ ಅಭಿವೃದ್ಧಿಗೆ ಸೇವೆ ಸಲ್ಲಿಸಿದ ಅಪರೂಪದ ರಾಜಕಾರಣಿ ಯಾಗಿದ್ದರು.

ದೇಶದ ಕಾನೂನಿನ ಬಗ್ಗೆ ಅಪಾರ ಗೌರವ, ಮನೋಭಾವನೆ ಹೊಂದಿದ್ದ ಬಹುಮುಖ ಪ್ರತಿಭೆಯ ಡಾ. ವಿ.ಎಸ್. ಆಚಾರ್ಯರು ಸರಳ, ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದರಲ್ಲದೆ ರಾಜಕೀಯದಲ್ಲಿ ಅಜಾತಶತ್ರು ಎನಿಸಿಕೊಂಡಿದ್ದರು.

ಡಾ. ವಿ.ಎಸ್. ಆಚಾರ್ಯ ಅವರು ದಿನಾಂಕ: 14.02.2012 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೇ, ಡಾ: ವಿ.ಎಸ್. ಆಚಾರ್ಯರವರ ಅಗಲಿಕೆ ನಮ್ಮನ್ನೆಲ್ಲಾ ಒಂದು ರೀತಿಯಲ್ಲಿ ತುಂಬಾ ಆತಂಕಕ್ಕೀಡು ಮಾಡುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ವೈಯಕ್ತಿಕವಾಗಿ ಅವರು ನನಗೆ ರಾಜಕಾರಣದಲ್ಲಿ ಗುರು, ನನ್ನ ಮಾರ್ಗದರ್ಶಕರು ಆಗಿದ್ದರು. ಅವರು ನಮ್ಮನ್ನು ಅಗಲಿರುವುದರಿಂದ ವೈಯಕ್ತಿಕವಾಗಿ ನನಗಂತೂ ತುಂಬಲಾರದ ನಷ್ಟವಾಗಿದೆ. ಪ್ರಾಯಶಃ ನನ್ನ ರಾಜಕಾರಣದ ಪ್ರವೇಶವೇ ಡಾ: ವಿ.ಎಸ್. ಆಚಾರ್ಯರವರು ಅಂದಿನ ಕಾಲದಲ್ಲಿ ಜನ ಸಂಘದ ನಮ್ಮ ಜಿಲ್ಲಾ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ. ಒಂದೇ ಮಾತಿನಲ್ಲಿ ಇದನ್ನು ಹೇಳಬಹುದಾದರೆ ಅವರು ಒಬ್ಬ ಪರಿಪೂರ್ಣ ವ್ಯಕ್ತಿತ್ವದ, ತುಂಬು ಕೊಡದಂತಿದ್ದ ಒಬ್ಬ ರಾಜಕಾರಣಿ. ನನಗೆ ಅವರು friend, philosopher, guide ಎಲ್ಲವೂ ಆಗಿದ್ದರು. 70ರ ದಶಕದಲ್ಲಿ ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ, ಆ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿದ್ದರು. ಆಗ ಅಂತರ ಜಿಲ್ಲಾ ಅಕ್ಕಿ ಸಾಗಾಟ ನಿರ್ಬಂಧವಿತ್ತು, ನಿಮ್ಮ ಜಿಲ್ಲೆಯಿಂದ ನಮ್ಮ ಜಿಲ್ಲೆಗೆ ಅಕ್ಕಿ ಬರುವುದಕ್ಕೆ ಬಿಡುತ್ತಿರಲಿಲ್ಲ, ನೀವೆಲ್ಲಾ ಸ್ವಲ್ಪ ಅಕ್ಕಿ ಜಾಸ್ತಿ ಬೆಳೆಯುತ್ತಿದ್ದಿರಿ ನಮ್ಮಲ್ಲಿ ಅಕ್ಕಿ ಬೇಕಾಗುತ್ತಿತ್ತು. ಅಂತರ ರಾಜ್ಯ ಅಕ್ಕಿ ಸಾಗಾಟಕ್ಕೆ ಕೂಡಾ ನಿರ್ಬಂಧ ಆದೇಶಗಳಿದ್ದವು. ಅಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಗೆ ಅಕ್ಕಿ ತರಬೇಕು ಎನ್ನುವ ಹೋರಾಟದಲ್ಲಿ ಸಂಪಾಜೇಯ ಅಕ್ಕಿ ಗೇಟ್ ಹಗರಣ ಎಂತಲೇ ಭಾರಿ ಪ್ರತೀತಿ ಇತ್ತು. ಆ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಹುಚ್ಚ ಮಾಸ್ತಿಗೌಡರು ಬರುವಂಥ ಸಂದರ್ಭ ಅವರ ವಿರುದ್ಧ ಪ್ರತಿಭಟನೆ ಮಾಡಿ, ಆ ಸಂಪಾಜೇಯ ಗೇಟ್ ಮುರಿದು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಗಿನಿಂದ

ಅಕ್ಕಿ ಬಂದ ದಿನ, 70ರ ದಶಕದಲ್ಲಿ ಆಗ ಅವರು ನಮ್ಮ ಜನಸಂಘದ ಅಧ್ಯಕ್ಷರಾಗಿದ್ದರು. ಅವರು ಅಂದು ಮಾಡಿದಂಥ ಒಂದು ಭಾಷಣ, ಅಂದು ಸುಳ್ಯದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಹೇಳಿದಂಥ ವಿಚಾರಗಳು ಇವತ್ತು ಕೂಡಾ ನನ್ನ ಮನಸ್ಸಿನಲ್ಲಿ ತುಂಬಿ ಬಿಟ್ಟಿದೆ. ರಾಜಕಾರಣ ಹೇಗೆ ಇರಬೇಕು ಅಂತ ಅವರು ಅಂದಿನ ದಿನಗಳಲ್ಲೇ ಹೇಳಿದ್ದರು, ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದನೆ ಮಾಡುವಂಥ ವ್ಯವಸ್ಥೆಯನ್ನು ಯಾವ ರಾಜಕೀಯ ಪಕ್ಷಗಳು ಅನುಷ್ಠಾನ ಮಾಡುತ್ತವೆಯೋ, ಯಾವಾಗ ಅದು ಒಂದು ರೀತಿಯಲ್ಲಿ ಸಮಾಜದಿಂದ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ, ಆಗ ಎಲ್ಲವೂ ಸರಿ ಹೋಗುತ್ತದೆ, ಸಮಾಜದ ವ್ಯವಸ್ಥೆಗಳು ಸರಿಯಾಗುತ್ತದೆ ಎಂದು ಅಂದು ಅವರು ಆ ಮಾತನ್ನು ಹೇಳಿದ್ದರು. ಅಂಥ ಅದ್ಭುತ ವ್ಯಕ್ತಿ, ಅಜಾತಶತ್ರು ಅವರು. ಬರೀ ಬಿಜೆಪಿಯವರಿಗೆ ಮಾತ್ರ ಅವರು ಗೌರವಕ್ಕೆ ಪಾತ್ರವಾಗಿರಲಿಲ್ಲ, ಎಲ್ಲಾ ಪಕ್ಷಗಳ ಗೌರವಕ್ಕೆ ಪಾತ್ರರಾಗಿದ್ದರು. ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಪ್ರಾಯಶಃ ನಮ್ಮ ಗೋಪಾಲ ಭಂಡಾರಿಯವರು ಮತ್ತು ಉಳಿದವರು ಇಲ್ಲೇ ಉಪಸ್ಥಿತರಿದ್ದಾರೆ. ಅವರು ಶ್ರೀ ಗೋಪಾಲ ಭಂಡಾರಿಯವರ ಅತ್ಯಂತ ಆತ್ಮೀಯರು. ಅವರು ಮೊನ್ನೆ ತೀರಿಕೊಂಡಾಗ ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳ ಎಲ್ಲಾ ಕಾಂಗ್ರೆಸ್ ಕಛೇರಿಗಳಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದಂಥ ಒಂದು ಅಪರೂಪದ ಘಟನೆ ರಾಜಕೀಯ ಇತಿಹಾಸದಲ್ಲಿ ನಡೆದಿದೆ. ಪ್ರಾಯಶಃ ಕಾಂಗ್ರೆಸ್ ಕಛೇರಿಗಳಲ್ಲಿ. ಬೇರೆ ಕಡೆಗಳಲ್ಲಿ ಅಲ್ಲ ನಾನು ನೋಡಿದ್ದೇನೆ, ಅವರು ತೀರಿಕೊಂಡ ದಿವಸ, ಶ್ರೀ ವೀರಪ್ಪ ಮೊಯಿಲಿಯವರು, ಶ್ರೀ ಆಸ್ಕರ್ ಫರ್ನಾಂಡೀಸ್ ಅವರು, ಶ್ರೀ ಜನಾರ್ಧನ ಪೂಜಾರಿಯವರು ರಾತ್ರಿ 1 ಗಂಟೆಯವರೆಗೆ ಅವರ ಅಂತಿಮ ಸಂಸ್ಕಾರ ಆಗುವವರೆಗೂ ನಮ್ಮ ಜೊತೆ ಉಪಸ್ಥಿತರಿದ್ದರು. ಸಾಧಾರಣವಾಗಿ ಇವತ್ತೆಲ್ಲಾ ನಾಮಕಾವಸ್ಥೆಗೆ ಯಾರಾದರೂ ತೀರಿಕೊಂಡರೆ ಬರುತ್ತಾರೆ. ಅದೂ ಪ್ರತಿಪಕ್ಷ ಎಂದು ಹೇಳಿದರೆ ಅಲ್ಲೂ ಕೂಡಾ ಅದನ್ನು ನೋಡುವಂಥದ್ದು ಆಗಿರುತ್ತದೆ. ಡಾ: ವಿ.ಎಸ್. ಆಚಾರ್ಯ ಅವರ ವ್ಯಕ್ತಿತ್ವ ಎಷ್ಟರಮಟ್ಟಿಗೆ ಹೋಗಿತ್ತು ಎಂದು ಹೇಳಿದರೆ ಸಾಮಾನ್ಯ ಪ್ರತಿಯೊಬ್ಬ ವ್ಯಕ್ತಿ ಕೂಡಾ ಅವರನ್ನು ಅತ್ಯಂತ ಪ್ರೀತಿಯಿಂದ ಸ್ವೀಕಾರ ಮಾಡುತ್ತಿದ್ದರು. ಪ್ರಾಯಶಃ ಇವತ್ತಿನ ರಾಜಕಾರಣಕ್ಕೆ ಡಾ: ವಿ.ಎಸ್.ಆಚಾರ್ಯ ಅವರ ವಿಚಾರಧಾರೆ ಎಷ್ಟು ಸೂಕ್ತ ಎನ್ನುವಂಥದ್ದು, ಅದನ್ನು ನಾನು ಇಲ್ಲಿ ಭಾಷಣದಲ್ಲಿ ಹೇಳಬಹುದು, ಆದರೆ ಅಂತಃಕರಣ ಸಾಕ್ಷಿಯಾಗಿ ಇದನ್ನು

ನಾವು ಅನುಷ್ಠಾನ ಮಾಡಿಕೊಂಡರೆ ಪ್ರಾಯಶಃ ಯಾವುದಕ್ಕೂ ತೊಂದರೆ ಆಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಅಂಥ ಒಂದು ಅದ್ಭುತವಾದಂಥ ವ್ಯಕ್ತಿತ್ವ ಅವರದ್ದು. ಅವರು ಸುಮಾರು 1967 ರಲ್ಲಿ ಸಾರ್ವಜನಿಕ ಜೀವನಕ್ಕೆ, ಈ ರಾಜಕೀಯ ಜೀವನಕ್ಕೆ ಪ್ರವೇಶ ಮಾಡಿದರು ಎನ್ನುವುದನ್ನು ನಾನು ಕೇಳಿದ್ದೇನೆ. ವಿಶೇಷವಾಗಿ ನಮ್ಮ ಜನಸಂಘದ ಧೀಮಂತ ನಾಯಕರಾಗಿದ್ದ ಶ್ರೀ ಧೀನದಯಾಳ್ ಉಪಾಧ್ಯರ ವಿಚಾರಧಾರೆಗೆ ಪ್ರಭಾವಿತರಾಗಿ ಅವರು ಸಾರ್ವಜನಿಕ ಜೀವನ ಪ್ರವೇಶ ಮಾಡಿದರು. 1968 ಮತ್ತು 1973 ರಲ್ಲಿ ಎರಡು ಬಾರಿ ಉಡುಪಿ ಪುರಸಭೆ ಅಧ್ಯಕ್ಷರಾಗಿ ಕೆಲಸ ನಿರ್ವಹಣೆ ಮಾಡಿದರು. ಆಗ ಡಿವಿಜನ್ ಮಟ್ಟದ ಪ್ರಶಸ್ತಿ ಇತ್ತು ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಇತ್ತು. ಪ್ರತಿ ವರ್ಷವೂ ಕೂಡಾ ಉಡುಪಿಗೆ ಡಿವಿಜನ್ ಮತ್ತು ರಾಜ್ಯ ಮಟ್ಟದ ಪ್ರಸಸ್ತಿಗಳು ಅವರು ಇದ್ದಾಗಲೆಲ್ಲ ಸಿಕ್ಕಿತ್ತು ಮತ್ತು ಉಡುಪಿಯ ಪುರಸಭೆ ಎಂದು ಹೇಳಿದರೆ ಅದು ಇಡೀ ರಾಜ್ಯಕ್ಕೆ ಒಂದು ಆದರ್ಶ ಮತ್ತು ಮಾದರಿ ಪುರಸಭೆ ಆಗಿದ್ದನ್ನು ನಾವು ಕಂಡಿದ್ದೇವೆ. ಅವರು ಹಲವಾರು ಉನ್ನತ ಕ್ರಮಗಳನ್ನು ತಾವು ಈಗಾಗಲೇ ಪ್ರಸ್ತಾಪ ಮಾಡಿದ ರೀತಿಯಲ್ಲಿ ಈ ದೇಶದಲ್ಲೇ ಮೊದಲ ಬಾರಿಗೆ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ಅವರು ನಿಷೇಧ ಮಾಡಿದ್ದೇ ಅವರ ಪ್ರಗತಿಪರ ನಿಲುವಿಗೆ ಸಾಕ್ಷಿ ಎಂದು ತಿಳಿದುಕೊಂಡಿದ್ದೇನೆ. ಕುಡಿಯುವ ನೀರಿನ ಯೋಜನೆ, ಅವರು ಅಧ್ಯಕ್ಷರಾಗಿ ಮಾಡಿದಂಥ ಸುವರ್ಣ ನದಿ ಕುಡಿಯುವ ನೀರಿನ ಯೋಜನೆ ಇವತ್ತು ಕೂಡಾ ನಮಗೆ ಬೇರೆ ಬೇರೆ ಕಡೆಗಳಲ್ಲಿ ಅದ್ಭುತವಾದಂಥ ಒಂದು ದಾರಿ ದೀಪವನ್ನು ಹಾಕಿ ಕೊಟ್ಟಿದೆ. ನಾನು ಅವರ ಇನ್ನೊಂದು ವಿಶೇಷತೆಯನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಇವತ್ತೆಲ್ಲಾ ನಡೆಯುವ ವಿದ್ಯಮಾನ ಗಳನ್ನು ನೋಡುತ್ತಿದ್ದೇವೆ. ಅವರ ಮನೆ ಖರ್ಚು, ಅವರು ಮಂತ್ರಿಯಾಗಿ ಯಾವ ತಿಂಗಳಲ್ಲೂ ಕೂಡಾ ರೂ.25,000/– ಕ್ಕಿಂತ ಮೀರಿ ಹೋಗಿಲ್ಲ. ಒಬ್ಬ ಮಂತ್ರಿಯಾಗಿ ಅಂದರೆ ಇದರ ಅರ್ಥ ಏನು? ಪ್ರಾಯಶಃ ನಾವು ಅರ್ಥ ಮಾಡಿಕೊಳ್ಳಬೇಕು, ಒಂದು ರೀತಿಯಲ್ಲಿ 25,000/– ಅವರು ಖರ್ಚು ಕಡಿಮೆ ಮಾಡಲು, ಹಲವಾರು ಜನರಿಗೆ ಕಾಣಬಹುದು ಒಂದು ಮಂತ್ರಿಯಾಗಿ ಇಷ್ಟೇ ಖರ್ಚು ಮಾಡುತ್ತಾರಾ ಎಂದು? ಇದು ಒಂದು ಸಾರ್ವಜನಿಕರ ಹಣ ಎಂದು ಹೇಳುವ ಭಾವನೆ ಅವರಲ್ಲಿತ್ತು. ಅವರು ಖರ್ಚು ಮಾಡುತ್ತಿದ್ದ ಒಂದು ನಯಾ ಪೈಸೆ ಕೂಡಾ ಇದು ಸರ್ಕಾರದ ದುಡ್ಡು, ಸರ್ಕಾರದ ದುಡ್ಡನ್ನು ಹೇಗೆ ವ್ಯಯ ಮಾಡಬೇಕು ಎಂದು ಹೇಳುವುದಕ್ಕೆ ಪ್ರಾಯಶಃ

ಡಾ: ವಿ.ಎಸ್. ಆಚಾರ್ಯ ಅವರು ಎಷ್ಟು ಮಿತವ್ಯಯ ಮಾಡುತ್ತಿದ್ದರು ಎನ್ನುವುದು ಅತ್ಯಂತ ಅದ್ಭುತವಾದಂಥದ್ದು. ಪ್ರತಿ ತಿಂಗಳು ಕೇವಲ ರೂ.23,500/–ಗಳಿಗೆ limit ಮಾಡುತ್ತಿದ್ದರು. ರೂ.25,000/– ಕ್ಕಿಂತ ಮೇಲೆ ಹೋಗಿಲ್ಲ ಎನ್ನುವುದು ನಾನು ತಿಳಿದು ಕೊಂಡಿರುವಂಥ ಸತ್ಯಗಳು. ನಾವು ಇವತ್ತು ಇದನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಭಾರತೀಯ ಜನಸಂಘದ ಜಿಲ್ಲಾ ಅಧ್ಯಕ್ಷರಾಗಿ 1974 ರಿಂದ 1977 ರವರೆಗೆ, ಸುಮಾರು 1977 ರಿಂದ 1980 ರವರೆಗೆ ಅವಿಭಾಜಿತ ಉಡುಪಿ ಮತ್ತು ದಕ್ಷಿಣ ಕನ್ನಡ ಎರಡೂ ಜಿಲ್ಲೆಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿ, 1980 ರಿಂದ 1983ರವರೆಗೆ ಬಿಜೆಪಿಯ ಜಿಲ್ಲಾ ಅಧ್ಯಕ್ಷರು ಅಂದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಅಧ್ಯಕ್ಷರಾಗಿ, ಸುಮಾರು 1974 ರಿಂದ 20 ವರ್ಷಗಳ ಕಾಲ ಅವರು ರಾಜ್ಯ ಬಿಜೆಪಿಯ ಉಪಾಧ್ಯಕ್ಷರಾಗಿ ಮತ್ತು ರಾಷ್ಟ್ರೀಯ ಬಿಜೆಪಿ ಕಾರ್ಯಕಾರಿಣಿ ಸಭೆ ಸದಸ್ಯರಾಗಿ ಅವರು ಕೆಲಸ ಮಾಡಿದ್ದಾರೆ. ನನಗೆ ಇವತ್ತು ಕೂಡಾ ನೆನಪಾಗುತ್ತಿದೆ, ಭಾರತೀಕರಣ ರ‍್ಯಾಲಿ ಎಂದು ಕೇರಳದ ಕಣ್ಣಾನೂರಿನಲ್ಲಿ ಒಂದು ರ‍್ಯಾಲಿಯನ್ನು ನಮ್ಮ ಪಕ್ಷ ಸಂಯೋಜನೆ ಮಾಡಿತ್ತು. ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ಅದನ್ನು ಉದ್ಘಾಟನೆ ಮಾಡುವುದಕ್ಕೆ ಬಂದಿದ್ದರು. ಅವರು ಮಂಗಳೂರಿನಲ್ಲಿ ವಿಮಾನ ಇಳಿದು ಮಂಗಳೂರಿನಿಂದ ಕಣ್ಣಾನೂರಿಗೆ ಪ್ರಯಾಣ ಮಾಡುವಂಥದ್ದು. ನಾನು ಆಗ ಬಿಜೆಪಿ ಯುವ ಮೋರ್ಚಾದ ರಾಜ್ಯದ ಕಾರ್ಯದರ್ಶಿಯಾಗಿದ್ದೆನು. ಡಾ: ಆಚಾರ್ಯರು ಆ ಕಾರಿನ ಡ್ರೈವರ್ ಆಗಿ, ಅಟಲ್ ಬಿಹಾರಿ ವಾಜಪೇಯಿಯವರ ಎದುರು ಸೀಟಿನಲ್ಲಿ ಡಾಕ್ಟರ್ ಪಕ್ಕದಲ್ಲಿ ಕುಳಿತುಕೊಂಡರು, ನಾನು ಅದೇ ಕಾರಿನಲ್ಲಿ ಹಿಂದೆ ಕುಳಿತುಕೊಂಡೆನು. ಮಂಗಳೂರಿನಲ್ಲಿ ಕಣ್ಣಾನೂರಿಗೆ ಮತ್ತು ಕಣ್ಣಾನೂರಿನಿಂದ ಮಂಗಳೂರಿಗೆ ವಾಜಪೇಯಿಯವರಿಗೆ ಅವರೇ ಡ್ರೈವರ್ ಆಗಿ ಕರೆದುಕೊಂಡು ಹೋದದ್ದು ಈಗಲೂ ಕೂಡಾ ನನ್ನ ಕಣ್ಣೆದುರು ನಿಲ್ಲುತ್ತಿದೆ. ಡಾ:ಆಚಾರ್ಯರು ಬಾರಿ ಸಣ್ಣ ಸ್ವಭಾವದವರು ಎನ್ನುವುದನ್ನು ನಾವೆಲ್ಲರೂ ಕೂಡಾ ಒಪ್ಪಿಕೊಳ್ಳುತ್ತೇವೆ. ಆದರೆ ಅವರ ಕೆಲಸ ಕಾರ್ಯದಲ್ಲಿ ಎಷ್ಟೊಂದು ಕ್ಷಮತೆ ಇತ್ತು ಎಂದರೆ, ಅವರು ಯುವಕರಾಗಿದ್ದಾಗ ಅವರ ಬಳಿ ಒಂದು ಸ್ಕೂಟರ್ ಇತ್ತು. ಅವರು ಬೆಳಗಾಂಗೆ, ಬಿಜಾಪುರಕ್ಕೆ 300–400 ಕಿ.ಮೀ. ಸ್ಕೂಟರಿನಲ್ಲಿ ಹೋಗಿ ಪಕ್ಷದ ಸಂಘಟನೆ ಮಾಡಿದಂಥ ಅದ್ಭುತವಾದ ವ್ಯಕ್ತಿ. ಅಷ್ಟೇ

forcible ಆಗಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದರು. ಇಲ್ಲಿ ಸದನದಲ್ಲಿ ಕುಳಿತವರು ಹೇಳಬಹುದು ಯಾರಾದರು, ಆಚಾರ್ಯರು ಕೋಪ ಮಾಡಿಕೊಂಡದ್ದನ್ನು ಯಾರಾದರೂ ನೋಡಿದ್ದೀರಾ? ನೋಡಿದ್ದರೆ ಹೇಳ ಬಹುದು. ಒಬ್ಬ ರಾಜಕಾರಣಿ ಸಾಧಾರಣವಾಗಿ ಒತ್ತಡದ ಮಧ್ಯೆ ಮತ್ತೊಂದರ ಮಧ್ಯೆ ಎಷ್ಟು ನಗುತ್ತಿದ್ದರೂ ಒಮ್ಮೊಮ್ಮೆ ಕೋಪ ಬಂದು ಬಿಡುತ್ತದೆ. ಆದರೆ ಡಾ: ಆಚಾರ್ಯರಿಗೆ ಜೀವನದಲ್ಲಿ ಕೊಪ ಬಂದಿರಲಿಕ್ಕಿಲ್ಲ. ತಮ್ಮ ಮೇಲೆ ಏನಾದರೂ ಕೋಪ ಮಾಡಿಕೊಂಡಿದ್ದರಾ ಸಿದ್ಧರಾಮಯ್ಯನವರೇ? ಸಾಧ್ಯವೇ ಇಲ್ಲ. ತಮ್ಮ ಮೇಲೆ ಕೋಪ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ನಿಮ್ಮ ಮೇಲೆ ಎಲ್ಲರೂ ಕೋಪ ಮಾಡಿಕೊಳ್ಳುತ್ತಾರೆ. ಆದರೆ ಆಚಾರ್ಯರು ಖಂಡಿತ ವಾಗಿ ಕೋಪ ಮಾಡಿಕೊಂಡಿರಲಿಕ್ಕೆ ಇಲ್ಲ. ಏಕೆಂದರೆ ನೀವು ಪ್ರಭಾವಿಯಾಗಿ, ಉಗ್ರವಾಗಿ ಮಾತನಾಡುವ ಹಾಗೂ ಪ್ರತಿಭಟನೆ ಮಾಡುವಂಥ ಸಂದರ್ಭ, ನೀವು ನೇರವಾಗಿ ಮಾತನಾಡುವಾಗ, ಸಾಧಾರಣವಾಗಿ ಇಲ್ಲಿ ಕೂತವರಿಗೇ ಸ್ವಲ್ಪ ಕೋಪ ಬಂದಂತೆ ಆಗುತ್ತದೆ. ನನಗೇ ನಿಮ್ಮ ಮೇಲೆ ಕೋಪ ಆಗುತ್ತದೆ, ಆದರೂ ಇಲ್ಲಿ ಕೋಪ ಮಾಡಿಕೊಂಡಿಲ್ಲ. ಆದರೆ ಡಾ: ವಿ.ಎಸ್. ಆಚಾರ್ಯ ರದ್ದು ನಿಶ್ಚಯವಾಗಿ ಯಾರಲ್ಲೂ ಕೂಡಾ ಕೋಪ ಮಾಡಿಕೊಳ್ಳದಂಥ ಒಂದು ಅದ್ಭುತ ವ್ಯಕ್ತಿತ್ವ, ಅಂಥ ವ್ಯಕ್ತಿತ್ವ ಯಾರಿಗೂ ಬರಲಿಕ್ಕೆ ಸಾಧ್ಯವೇ ಇಲ್ಲ. ಪ್ರಾಯಶಃ ಎಲ್ಲಾ ರಾಜಕಾರಣಿಗಳು ಇವತ್ತು ಕೋಪವನ್ನೇನಾದರೂ ಬಿಟ್ಟರೆ ದೇಶ ಬಾರಿ ಚೆನ್ನಾಗಿ ಆಗುತ್ತದೆ ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಈ ರೀತಿಯಾಗಿ ಆಗಬೇಕಾದಂಥ ಸಂಗತಿಗಳಿವೆ. ನಾನು ಇನ್ನೂ ಒಂದು ಅವರ ವಿಶೇಷವಾದಂಥ ಗುಣವನ್ನೂ ಪ್ರಸ್ತಾಪವನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ಎಂ.ಎಲ್.ಸಿ. ಆಗಿದ್ದರು.

ಡಾ: ವಿ.ಎಸ್. ಆಚಾರ್ಯರವರು ಉಡುಪಿ ನಗರವನ್ನು ಶುಚಿತ್ವವಾಗಿ ಇಡಬೇಕೆಂಬ ಒಂದು ಸಭೆಗೆ ಹೋಗಿ ಬರುತ್ತಿದ್ದರು. ಉಡುಪಿ ಯಲ್ಲಿ ಕೃಷ್ಣ ಮಠದ ಬಳಿ ಗೀತಾಂಜಲಿ ಥಿಯೇಟರ್ ಎಂದು ಇದೆ. ಅದರ ಬಳಿ ಒಂದು ಲಾಟರಿ ಅಂಗಡಿ ಇದೆ. ಇದವರು ಅಲ್ಲಿ ನಡೆದು ಹೋಗುವ ಸಂದರ್ಭದಲ್ಲಿ ಒಬ್ಬ ಲಾಟರಿ ಆಡುವ ವ್ಯಕ್ತಿ ತನಗೆ ಲಾಟರಿ ನಂಬರ್ ಬರುತ್ತಿಲ್ಲವೆಂಬ ಕೋಪದಲ್ಲಿ ಲಾಟರಿ ಟಿಕೇಟನ್ನು ಹರಿದು ಹಾಕಿ ನಡೆದು ಕೊಂಡು ಹೋಗುತ್ತಿದ್ದ. ಇದನ್ನು ನೋಡಿದ ಡಾ: ವಿ.ಎಸ್.ಆಚಾರ್ಯರವರು ಒಬ್ಬ ಎಂ.ಎಲ್.ಸಿ. ಯಾಗಿದ್ದು, ಆ ವ್ಯಕ್ತಿ ಹರಿದು ಬಿಸಾಡಿದ್ದ ಟಿಕೇಟ್‌ಗಳನ್ನು ಹೆಕ್ಕಿಕೊಂಡು ಹೋಗಿದ್ದಾರೆ. ಇದನ್ನು ಮಾಧ್ಯಮದವರು ಸೆರೆ ಹಿಡಿದು

ಪತ್ರಿಕೆಗಳಲ್ಲಿಯೂ ಕೊಟ್ಟಿದ್ದಾರೆ. ಅವರಿಗೆ ತಮ್ಮ ವಿಚಾರಗಳ ಬಗ್ಗೆ ಎಷ್ಟು commitment ಇತ್ತೆಂದರೆ ತಾವು ಒಬ್ಬ MLC ಎಂಬುದನ್ನು ಮರೆತು ಜವಾಬ್ದಾರಿಯುತ ವ್ಯಕ್ತಿ ಎಂದು ಹರಿದು ಬಿಸಾಡಿದ್ದ ಲಾಟರಿ ಚೂರುಗಳನ್ನು ಹೆಕಿಕ್ಕೊಂಡು ಹೋಗುವ ಅದ್ಭುತ ಕೆಲಸ ಮಾಡಿದ್ದನ್ನು ನಾವು ಕೇಳಿದ್ದೇವೆ. ಈ ರೀತಿ ಅವರು ವಿಚಾರ ಬದ್ಧತೆಯಿಂದ ಕೆಲಸ ಮಾಡಿದ್ದಾರೆ. ಸುಮಾರು 20 ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿರುವುದು. 1996 ರಿಂದ 2002, 2002 ರಿಂದ 2008 ರವರೆಗೆ ಹಾಗೂ 3ನೇ ಬಾರಿಗೆ 2008 ರಿಂದ ವಿಧಾನ ಪರಿಷತ್ ಸದಸ್ಯರಾಗಿ, ರಾಜ್ಯ ಸಚಿವ ಸಂಪುಟದಲ್ಲಿ ಗೃಹ, ವೈದ್ಯಕೀಯ, ಉನ್ನತ ಶಿಕ್ಷಣದಂತಹ ಮಹತ್ವದ ಖಾತೆಗಳಲ್ಲಿ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದನ್ನು ಕಂಡಿದ್ದೇವೆ. ಇನ್ನೊಂದು ಅವರ ವಿಶೇಷತೆ ಎಂದರೆ, ಅವರ ಅಪಾರವಾದ ಜ್ಞಾನ. ಯಾವುದೇ ಸಮಯದಲ್ಲಿ ಯಾವುದೇ ವಿಷಯದ ಬಗ್ಗೆಯಾದರೂ ನಿಖರವಾಗಿ ಮಾತನಾಡುವ ಸರಳ ಸಜ್ಜನಿಕೆಯ ನಾಯಕ. ಎಂತಹ ಸಂದಿಗ್ಧ ಸನ್ನಿವೇಶ ಬರಲಿ, ಸರ್ವಸಮ್ಮತವಾದ, ಯೋಗ್ಯ ವಾದ ಪರಿಹಾರವನ್ನು ಸೂಚಿಸುವ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಆಗಿನ ದಿನಗಳಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ ಅತ್ಯಂತ, ಅತ್ಯಂತ ಅಚ್ಚುಮೆಚ್ಚಿನ ಕರ್ನಾಟಕದ ರಾಜಕಾರಣಿ ಡಾ: ವಿ.ಎಸ್. ಆಚಾರ್ಯ ಆಗಿದ್ದರು ಎಂಬುದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ. ಇನ್ನೊಂದು ವಿಶೇಷ, ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ, ಅದು ಯಾವುದೇ ಪ್ರಣಾಳಿಕೆ ಇರಬಹುದು, Local bodies ಇರಬಹುದು, ಜಿಲ್ಲಾ ಪಂಚಾಯಿತಿಯದ್ದು ಇರಬಹುದು, ರಾಜ್ಯದ್ದು ಇರಬಹುದು, ಕೇಂದ್ರಕ್ಕೆ ಚುನಾವಣಾ ಪ್ರಣಾಳಿಕೆ ಕಳುಹಿಸಿಕೊಡ ಬೇಕೆಂದರೂ ಕೂಡಾ ಡಾ: ವಿ.ಎಸ್. ಆಚಾರ್ಯರವರು ತಯಾರು ಮಾಡುತ್ತಿದ್ದರು. ಅವರೇ ಯಾವಾಗಲೂ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ ಮಾಡುತ್ತಿದ್ದುದನ್ನು ನಾವು ನೋಡಿದ್ದೇವೆ. ಮಿಷನ್ 20–20, ಕರ್ನಾಟಕ ಸರ್ಕಾರದಲ್ಲಿ ಈಗ ಹಲವಾರು ನೂತನ ಉಪಕ್ರಮಗಳನ್ನು ಜಾರಿ ಮಾಡಲು ಅವರೇ ಕಾರಣ. ಅವರು ಸಚಿವರಾಗಿದ್ದ ಸಂದರ್ಭದಲ್ಲಿ ತಾವು ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದ ಎಲ್ಲಾ ಇಲಾಖೆಗಳಿಗೂ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ. ಉದಾಹರಣೆಗೆ ಮಂಗಳೂರಿನಲ್ಲಿ Police Commissionerate ಆಗಬೇಕೆಂದು ಅವರ ಮನಸ್ಸಿನಲ್ಲಿತ್ತು. ಸುಮಾರು 20 ವರ್ಷಗಳ ನಂತರ Police Commissionerate ಕರ್ನಾಟಕದಲ್ಲಿ

ಆಗಿರುವುದು. ಕೇವಲ 3 ತಿಂಗಳಿನಲ್ಲಿ ಪ್ರಾರಂಭ ಮಾಡುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಇವತ್ತು ಎಲ್ಲರಿಗೂ ಗೊತ್ತಿಗೆ. ಉಡುಪಿ ಹೊಸ ಜಿಲ್ಲೆ. ಉಡುಪಿಯ ಜಿಲ್ಲಾಡಳಿತ ಕಚೇರಿಯ campus ಮಾದರಿ ಕೇವಲ ರಾಜ್ಯದಲ್ಲಿ ಅಲ್ಲ. ಇಡೀ ದೇಶದಲ್ಲಿ ಇಲ್ಲ. ಅಂತಹ ಅದ್ಭುತ ಪರಿಕಲ್ಪನೆಯ ಒಂದು campus. ಎಲ್ಲಾ ಇಲಾಖೆಗಳೂ ಒಂದೇ ಕಡೆ ಇರುವುದು. ಇದನ್ನು ಮಾಡಿರುವುದು ವಿ.ಎಸ್. ಆಚಾರ್ಯರವರು. ವಿ.ಎಸ್. ಆಚಾರ್ಯರವರ ಇನ್ನೊಂದು ವಿಶೇಷತೆ ಎಂದರೆ ಅವರು ತಮ್ಮ ಜನ್ಮ ಭೂಮಿಗೆ ಅದರಲ್ಲೂ ವಿಶೇಷವಾಗಿ ಉಡುಪಿ ಜಿಲ್ಲೆಯನ್ನು ಯಾವುದೇ ಮಾತನಾಡಲಿ, ಯಾವುದೇ ಭಾಷಣ ಮಾಡಲಿ ಉಡುಪಿಯನ್ನು ಉದಾಹರಣೆಯಾಗಿ ಕೊಟ್ಟು ಭಾಷಣ ಮುಗಿಸುತ್ತಿದ್ದರು. ಇದು ಅವರಿಗೆ ತಮ್ಮ ಮಣ್ಣಿನ ಮೇಲಿದ್ದಂತಹ ಪ್ರೀತಿ, commitment ತೋರಿಸುವ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಇವತ್ತು ಇಂತಹ ಅದ್ಭುತ ವ್ಯಕ್ತಿ, ನನಗಂತೂ ಅವರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ಸಿದ್ಧರಾಮಯ್ಯನವರೆ, ನಾನು ಮುಖ್ಯಮಂತ್ರಿಯಾದ ಪ್ರಾರಂಭದ 15 ದಿನ ಅವರು ನನ್ನ ಜೊತೆಯೇ ಇದ್ದರು. ಎಲ್ಲಾ ಇಲಾಖೆಗಳ review ಮಾಡುವ ಸಂದರ್ಭದಲ್ಲಿ ಎಲ್ಲಾ ಸಂದರ್ಭದಲ್ಲಿಯೂ ನನ್ನ ಜೊತೆ ಇದ್ದು, ಎಲ್ಲೆಲ್ಲಿ, ಏನೇನು ಮಾಡಬೇಕು, ಹೇಗೆ ನಡೆದುಕೊಳ್ಳಬೇಕೆಂದು ತಿಳಿಸಿ ಕೊಟ್ಟರು. ನಂತರ ಕೂಡಾ ಪ್ರತಿ ವಾರ ಏನಾಗಿದೆ, ಯಾವ ಇಲಾಖೆ, ಏನು ಎಂದು ಸೂಕ್ಷ್ಮವಾಗಿ ಗಮನಿಸಿ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದರು. ಅವರನ್ನು ಇಂದು ನಾವು ಕಳೆದುಕೊಂಡು ಇಡೀ ಕರ್ನಾಟಕ ಒಬ್ಬ ದೊಡ್ಡ ವ್ಯಕ್ತಿಯನ್ನು ಕಳೆದು ಕೊಂಡಂತಾಗಿದೆ. ಅವರು ಕರ್ತವ್ಯ ನಿರ್ವಹಣೆ ಮಾಡುವಾಗ ನಮ್ಮನ್ನು ಅಗಲಿರುವುದು ತುಂಬಾ ನೋವನ್ನು ತಂದಿದೆ. Budget preparation ಸಂದರ್ಭದಲ್ಲಿ ಅವರ ಸಹಕಾರ ಕೋರಿದಾಗ ಅವರು ಅಗಲುವ 2 ದಿನ ಮೊದಲು ನನಗೆ ಹೇಳಿದ್ದರು. ಸರ್ ನನಗೆ 10–15 ದಿನ ಸಮಯ ಕೊಡಬೇಕೆಂದು ಕೇಳಿದ್ದರು. ಹಿಂದಿನ ದಿನ Phone ಮಾಡಿ ನಾಳೆ ನಾನು ಬರುತ್ತೇನೆ. ನನ್ನ ಇಲಾಖೆಯ ಕೆಲಸ ಕಾರ್ಯಗಳನ್ನು ಮುಗಿಸಿ ಹೋಗಿ 4–5 ದಿನ rest ತೆಗೆದುಕೊಂಡು ಮತ್ತೆ ಬಂದು 10–15 ದಿನ ನಿಮ್ಮ ಜೊತೆಯಲ್ಲಿಯೇ ಇರುತ್ತೇನೆಂದಿದ್ದರು. ಆದರೆ ಮರುದಿನ ಬಂದವರೇ ನಮ್ಮನ್ನು ಅಗಲಿದ್ದಾರೆ. ಒಂದು ರೀತಿಯಲ್ಲಿ ಅವರ ಅಗಲುವಿಕೆ ನನಗಂತೂ ದೊಡ್ಡ ಶಾಕ್. ಇಂತಹ ಒಬ್ಬ ಅದ್ಭುತ ವ್ಯಕ್ತಿ, ಅಜಾತ ಶತ್ರು,

ರಾಜಕೀಯ ರಂಗದಲ್ಲಿ ಎಲ್ಲಾ ವಿಚಾರಗಳನ್ನು ಅತ್ಯಂತ ಸೂಕ್ಷ್ಮ ಸಮಯದಲ್ಲಿ ಸೂಕ್ತವಾಗಿ ಪ್ರತಿಪಾದಿಸಬಲ್ಲ ರಾಜಕಾರಣಿ ಯಾವುದೇ ಪಕ್ಷದಲ್ಲಿಯೂ ಇಲ್ಲ. ಅಟಲ್ ಬಿಹಾರಿ ವಾಜಪೇಯಿಯವರು ಕೇಂದ್ರದಲ್ಲಿದ್ದರೆ, ರಾಜ್ಯದಲ್ಲಿ ವಿ.ಎಸ್. ಆಚಾರ್ಯರವರು ಅವರ ಸರಿಸಮಾನವಾಗಿ ನಿಲ್ಲಬಲ್ಲಂತಹ ರಾಜಕಾರಣಿಯಾಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಮತ್ತೊಮ್ಮೆ ಭಗವಂತನಲ್ಲಿ ಪ್ರಾರ್ಥಿಸಿ ತಾವು ಮಂಡಿಸಿದಂತಹ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತೇನೆ.

ಶ್ರೀ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕರು : ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯ ಏನಿದೆ ಅದನ್ನು ಬೆಂಬಲಿಸಿ ಡಾ: ವಿ.ಎಸ್. ಆಚಾರ್ಯ ರವರ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಡಾ:ವಿ.ಎಸ್. ಆಚಾರ್ಯರವರು ನನಗೆ ವೈಯಕ್ತಿ ಕವಾಗಿ ಜನತಾ ಪಕ್ಷ ಪ್ರಾರಂಭವಾದಾಗಿನಿಂದ 1977 ರಿಂದ ಗೊತ್ತಿದ್ದರು. ಅವರು 1983 ರಲ್ಲಿ ಇಲ್ಲಿಗೆ ಸದಸ್ಯರಾಗಿ ಬಂದರು. ನಾನು ಅದೇ ವರ್ಷ ಪಕ್ಷೇತರ ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೆ. ಆ ಬಾರಿ ಬಿ.ಜೆ.ಪಿ. ಪಕ್ಷದ 18 ಜನ ಶಾಸಕರು ಗೆದ್ದಿದ್ದರು. ರಾಮಕೃಷ್ಣ ಹೆಗಡೆ ಯವರು ಮುಖ್ಯಮಂತ್ರಿ ಯಾಗಿದ್ದರು. ಜನತಾ ಪಕ್ಷ ಸರ್ಕಾರವಿದ್ದಾಗ ಅವರು ಇಲ್ಲಿ ಕುಳಿತು ಕೊಳ್ಳುತ್ತಿದ್ದರು. ಅಧಿಕೃತ ವಿರೋಧ ಪಕ್ಷದ ನಾಯಕರಾಗಿರಲಿಲ್ಲ. ಆದರೂ ಕೂಡಾ ಆ ಹೊತ್ತಿಗೆ The biggest opposition party ಆಗಿತ್ತು. ಜೊತೆಗೆ ಜನತಾ ಸರ್ಕಾರಕ್ಕೆ ಬಿ.ಜೆ.ಪಿ. ಬಾಹ್ಯ ಬೆಂಬಲ ಕೊಟ್ಟಿತ್ತು. ಅವರು ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಅವರನ್ನು ನಾನು ಅವತ್ತಿನಿಂದ ಇವತ್ತಿನವರೆಗೆ ನೋಡಿದ್ದೇನೆ. ಇಲ್ಲಿ ಈ ಮನೆಯಲ್ಲಿ ಶಾಸಕರಾಗಿ, ಅಲ್ಲಿ ಮೇಲ್ಮನೆ ಸದಸ್ಯರಾಗಿ ನೋಡಿದ್ದೇನೆ. ಒಂದು ಇವತ್ತು ನಾವು ಡಾ.ವಿ.ಎಸ್. ಆಚಾರ್ಯ ರವರಲ್ಲಿ ಗುರುತಿಸಬೇಕಾದ ಬಹಳ ಮುಖ್ಯವಾದ Character ಎಂದರೆ ಸಾಮಾನ್ಯವಾಗಿ ನಾನು 1994 ರಲ್ಲಿ Finance Minister ಆಗಿದ್ದೆ. ಅವರೂ ಕೂಡಾ 1994 ರಿಂದ 1999 ರವರೆಗೆ Upper House ನಲ್ಲಿ ಸದಸ್ಯರಾಗಿದ್ದರು. ಬಹುಶಃ ಬಜೆಟ್‌ನಲ್ಲಿ ಭಾಗವಹಿಸಿ ಬಹಳ relevant ಆಗಿ, ಆರೋಗ್ಯಕರವಾಗಿ criticize ಮಾಡಿ ಸಲಹೆ ಕೊಡುತ್ತಿ ದ್ದವರು ಇವರೊಬ್ಬರೆ ಎಂದರೆ ಅತಿಶಯೋಕ್ತಿ ಆಗಲಾರದೆಂದು ನನ್ನ ಭಾವನೆ. ಅವರು ವೃತ್ತಿಯಲ್ಲಿ ವೈದ್ಯರಾದರೂ ಕೂಡಾ, he was not an

economist. ನಾನು economist ಏನಲ್ಲ. ವಕೀಲಿ ವೃತ್ತಿ ಮಾಡುತ್ತಿದ್ದೆ. By profession he was a medical doctor. ಆದರೆ ಈ ರಾಜ್ಯದ economy ಬಗ್ಗೆ ಬಹಳ ತಿಳಿದುಕೊಂಡಿದ್ದರು. ಮತ್ತೆ ನಾವು ಬಜೆಟ್‌ನಲ್ಲಿ ಏನೇನು ದೋಷಗಳಿವೆ, ಬಜೆಟ್‌ನಲ್ಲಿ ಏನೇನು, ರಾಜ್ಯಕ್ಕೆ ಸಂಬಂಧಪಟ್ಟ ಬೆಳವಣಿಗೆಗೆ ಪೂರಕವಾಗಿಲ್ಲ ಎಂಬುದನ್ನು ಗುರುತಿಸಿ ಮಾತನಾಡುವ ಸಾಮರ್ಥ್ಯ ಅವರಿಗೆ ಇತ್ತು.

ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಿಂದ ಒಂದು ಮಾತು ಹೇಳುತ್ತೇನೆ. ಹೇಳುವುದನ್ನು of course ನಮ್ಮ ತರಹ ಸ್ವಲ್ಪ ಕೋಪವಾಗಿ, ಒರಟಾಗಿ ಹೇಳುತ್ತಿರಲಿಲ್ಲ. ಬಹಳ ಸೌಮ್ಯವಾಗಿ ಹೇಳಬೇಕಾದುದನ್ನು ಪರಿಣಾಮಕಾರಿಯಾಗಿ ಹೇಳುತ್ತಿದ್ದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಮನುಷ್ಯನಿಗೆ ಕೋಪ ಬರಬೇಕು. ಕೋಪ ಬರದೇ ಹೋದರೆ ಅವನು ಮನುಷ್ಯನಾಗುವುದಕ್ಕೆ ಆಗುವುದಿಲ್ಲ. ಹಾಗಾದರೆ ಏನಾದರೂ ಅನಾಹುತ ಆಗಿ ಬಿಡುತ್ತದೆ. ಇದ್ದಕ್ಕಿದ್ದ ಹಾಗೆ ಆಗಿಬಿಡುತ್ತದೆ. ನಾವೇನು ಯೇಸುಕ್ರಿಸ್ತನಾ? ಮಹಾತ್ಮಾ ಗಾಂಧೀಜಿಯವರಾ? ಒಂದು ಕಪಾಳಕ್ಕೆ ಹೊಡೆದ ಮೇಲೆ ಇನ್ನೊಂದು ಕಪಾಳಕ್ಕೆ ಹೊಡಿ ಎಂದು ಈ ಕಾಲದಲ್ಲಿ ಹೇಳುವುದಕ್ಕೆ ಆಗುತ್ತದಾ? ಅದು ಆ ಕಾಲ ಬೇರೆ, ಈ ಕಾಲ ಬೇರೆ. ಹಾಗೆ ಹೇಳುವುದಕ್ಕೆ ಆಗುತ್ತದಾ ಮಾನ್ಯ ಅಧ್ಯಕ್ಷರೆ, ನೀವು ಒಪ್ಪಿಕೊಳ್ಳುತ್ತೀರಾ? ಹೇಳಿ ನೋಡೋಣ ಅವರು ಹೇಳುವುದನ್ನು ನೀವು ಒಪ್ಪಿಕೊಳ್ಳುತ್ತೀರಾ? ಕೋಪ ಸ್ವಲ್ಪ ಇರಬೇಕು. ಆ ಕೋಪ ಅಮಾನುಷವಾಗಬಾರದು ಅಷ್ಟೇ. ಕೆಟ್ಟದಾಗಿ ಪರಿವರ್ತನೆ ಆಗಬಾರದು. ಕೋಪ ಇರಲೇಬೇಕಾಗುತ್ತದೆ. ಇಲ್ಲದೇ ಹೋದರೆ ಈ ಸಮಾಜದಲ್ಲಿ ಬದುಕುವುದೇ ಕಷ್ಟ. ಆಮೇಲೆ ಯಾವಾಗಲೂ ಈ ಶೂದ್ರರಿಗೆ ಜಾಸ್ತಿ ಕೋಪ ಬರುತ್ತದೆ. ಇದು sociology. ಈಗ ಬಾಬಾ ಸಾಹೇಬ ಅಂಬೇಡ್ಕರ್ ಅವರಿಗೆ ಇದ್ದಂತಹ ಕೋಪ, ಆ ನೋವು ಬೇರೆಯವರಿಗೆ ನೋಡುವುದಕ್ಕೆ ಕಷ್ಟ ಆಗುತ್ತದೆ. ಏಕೆಂದರೆ ಅವರು ಅದನ್ನು ಅನುಭವಿ ಸಿದ್ದರು. ಹಾಗೆಯೇ ನಾವು ಅನ್ಯಾಯಗಳನ್ನು ಅನುಭವಿಸಿರುವವರು, ಶೋಷಣೆ ಅನುಭವಿಸಿರುವವರಿಗೆ ಕೋಪ ಬಂದು ಬಿಡುತ್ತದೆ. ಅದು ವ್ಯವಸ್ಥೆ ವಿರುದ್ಧ ಸಾತ್ವಿಕ ಕೋಪ ಬರುತ್ತದೆ. ಕೆಲವರಿಗೆ ಇದನ್ನೆಲ್ಲಾ ಅನುಭವಿಸದೇ ಇದ್ದವರಿಗೆ ಸುಮ್ಮ ಸುಮ್ಮನೇ ಕೋಪ ಏಕೆ ಬರುತ್ತದೆ? ಅಂಕಿಯವರಿಗೆ ಕೋಪ ಬಂದರೆ ಕೋಪ ಬರಬಾರದು ಎಂದು ಹೇಳಬೇಕು. ನಿಮಗ್ಯಾಕೆ

ಕೋಪ? ಆಚಾರ್ಯರವರಿಗೆ ಏಕೆ ಕೋಪ ಬರಬೇಕು? ಬರಬಾರದು, ಅವರಿಗೆ ಕೋಪ ಬಂದಿಲ್ಲವಾದ್ದರಿಂದ he is a good man. ಅವರಿಗೆ ಕೋಪ ಬಂದು ಬಿಟ್ಟಿದ್ದರೆ ನಾವು ಅದನ್ನೂ ಸರಿ ಇಲ್ಲ ಎಂದು ಹೇಳಬೇಕಾಗಿತ್ತೇನೋ? ಈಗ ಕೋಪ ಬರದೇ ಇರುವುದರಿಂದ ಅವರು ಬಹಳ ಒಳ್ಳೆಯ ವ್ಯಕ್ತಿ. ಸರಳ ಸಜ್ಜನಿಕೆಯ ವ್ಯಕ್ತಿ. ಸಭ್ಯ ನಡವಳಿಕೆ ಇದ್ದಂತಹ ವ್ಯಕ್ತಿ ಎಂದು ಹೇಳಿ ಇವತ್ತು ನಾವು ಅವರನ್ನು ಹೇಳಬೇಕಾಗುತ್ತದೆ. ನಾನು ಯಾವತ್ತೂ ಕೂಡ ವಿಧಾನ ಸಭೆಯಲ್ಲಿ ಆಗಲೀ ಅಥವಾ ವಿಧಾನ ಪರಿಷತ್ತಿನಲ್ಲಿ ಆಗಲೀ ಅವರು ಕೋಪದಿಂದ ಯಾವಾಗಲೂ ನಡೆದು ಕೊಂಡಿರಲಿಲ್ಲ. ಅವತ್ತು ಒಂದೇ ಒಂದು ದಿನ ಅವರ ಬಿಲ್ ಮೂವ್ ಮಾಡಿದರಲ್ಲ Endowment and Religious Bill move ಮಾಡಿದರಲ್ಲ, ಅದು ಬಿದ್ದು ಹೋದಾಗ ಸ್ವಲ್ಪ ಮುಜುಗರಕ್ಕೆ ಒಳಗಾಗಿದ್ದರು.

ಅಧ್ಯಕ್ಷರು : ಮಧ್ಯೆ ಮಾತನಾಡಬೇಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಂಪಂಗಿಯವರೇ ಕುಳಿತುಕೊಳ್ಳಿ, ಆಮೇಲೆ ಹೋಗುವಿರಂತೆ. ಅದರಿಂದ ಮಾನ್ಯ ಆಚಾರ್ಯರವರಿಗೆ ಕೋಪ ಯಾವತ್ತೂ ಬರುತ್ತಿರಲಿಲ್ಲ ಎನ್ನತಕ್ಕದ್ದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಏನೆಂದರೆ ಯಾವುದೇ ವಿಷಯ ಇರಬಹುದು, ಅದನ್ನು ಆಳವಾಗಿ ಅಧ್ಯಯನ ಮಾಡಿಕೊಂಡು ಬಂದು ಅದನ್ನು ಪ್ರೆಸೆಂಟ್ ಮಾಡುವುದು ಇತ್ತಲ್ಲ, ಅದು ಮುಖ್ಯ. ಯಾವಾಗಲೂ ಬಹಳ ಮುಖ್ಯವಾದುದು ಪ್ರೆಸೆಂಟೇಷನ್. ಆ ಪ್ರೆಸೆಂಟೇಷನ್ ಕೇಳುವವರಿಗೆ, ಬೇರೆಯವರನ್ನು ಆಕರ್ಷಣೆ ಮಾಡುತ್ತದೆ. ಒಳ್ಳೆಯ ಪ್ರೆಸೆಂಟೇಷನ್ ಇದ್ದರೆ ಕೇಳಬೇಕು ಎನ್ನಿಸುತ್ತದೆ. ವಿಷಯ ಇದ್ದರೆ ಕೇಳಬೇಕು ಎನಿಸುತ್ತದೆ. ಅದನ್ನು ಅವರು ಮೈಗೂಡಿಸಿಕೊಂಡಿದ್ದಂತಹ ವ್ಯಕ್ತಿ ಆಗಿದ್ದರು. ಇವತ್ತು ಒಬ್ಬ ಸಭ್ಯ ರಾಜಕಾರಣಿಯನ್ನು ಕರ್ನಾಟಕ ರಾಜ್ಯ ಕಳೆದುಕೊಂಡಿದೆ. ಕರ್ನಾಟಕದ ರಾಜಕೀಯ ಕ್ಷೇತ್ರಕ್ಕೆ ನಷ್ಟ ಆಗಿದೆ ಎನ್ನತಕ್ಕದ್ದನ್ನು ಒಪ್ಪಿಕೊಳ್ಳುತ್ತಾ ಭಾರತೀಯ ಜನತಾ ಪಕ್ಷದವರಿಗೆ ಒಬ್ಬ ಬುದ್ಧಿವಂತ ರಾಜಕಾರಣಿಯನ್ನು ಕಳೆದು ಕೊಂಡಿದ್ದು ಬಹಳ ಕಷ್ಟ, ಏಕೆಂದರೆ ಅವರಷ್ಟು ಬುದ್ಧಿ ಇದ್ದದ್ದು, ಮತ್ತೆ advice ಮಾಡತಕ್ಕಂತಹದು ಮತ್ತು ಬಜೆಟ್‌ನಲ್ಲಿ ಎಲ್ಲಾ ಸಲಹೆಗಳನ್ನು ಕೊಡುತ್ತಿದ್ದುದ್ದು ಅವರ ಹಾಗೆ ಇನ್ನೊಬ್ಬರು ಅವರಿಗೆ ಇಲ್ಲ. ಅಷ್ಟರಮಟ್ಟಿಗೆ ಅವರಿಗೆ ಬಹಳ ದೊಡ್ಡ ನಷ್ಟ ಆಗಿದೆ. ಮತ್ತೆ ಅವರು ಉಡುಪಿಯಲ್ಲಿ

ಅಧ್ಯಕ್ಷರಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಬಹಳ ಒಳ್ಳೆಯ ಕೆಲಸ ಮಾಡಿದರು. ಜನತಾ ಪಾರ್ಟಿ ಬರುವ ಮೊದಲು ಜನಸಂಘ ಇದ್ದಾಗಲೇ ಅಧ್ಯಕ್ಷರಾಗಿ ಒಳ್ಳೆಯ ಕೆಲಸ ಮಾಡಿದರು. ಶ್ರೀ ಬಿ.ಆರ್. ಶೆಟ್ಟರ್ ಎಂಬುವರು ದುಬೈನಲ್ಲಿದ್ದಾರೆ. ಅವರೂ ಇವರೂ ಒಟ್ಟಿಗೆ ಅಧ್ಯಕ್ಷರು, ಉಪಾಧ್ಯಕ್ಷರಾಗಿದ್ದರಂತೆ. ಅವರು ನಾನು ದುಬೈಗೆ ಹೋಗಿದ್ದಾಗ ಅವರು ನನಗೆ ಒಂದು ಸಾರಿ ಹೇಳುತ್ತಿದ್ದರು. ನಾವು ಆಚಾರ್ಯರೂ ಒಟ್ಟಿಗೇ ಇದ್ದೆವು. ಅವರು ಅಧ್ಯಕ್ಷರಾಗಿದ್ದರು, ನಾನು ಉಪಾಧ್ಯಕ್ಷನಾಗಿದ್ದೆ ಎಂದು ಹೇಳಿದರು. ಅವರು ಈಗ ಒಬ್ಬ ದೊಡ್ಡ industrialist ಆಗಿದ್ದರೆ. ಅವರು ಇವರ ಬಗ್ಗೆ ಹೇಳುತ್ತಿದ್ದರು, ಬಹಳ ಒಳ್ಳೆಯ ಮನುಷ್ಯರು. ಅಧ್ಯಕ್ಷರಾಗಿ ಎಲ್ಲರನ್ನೂ ಬಹಳ ವಿಶ್ವಾಸಕ್ಕೆ ತೆಗೆದು ಕೊಂಡು ಹೋಗತಕ್ಕಂತಹ, ಉಡುಪಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದರು. ಅನೇಕ ಸಾರಿ ಬಹುಮಾನಗಳು ಬಂದಿತ್ತು, ಒಳ್ಳೆಯ ಕೆಲಸ ಮಾಡಿದ್ದಾರೆ ಎಂತೆಲ್ಲಾ ಹೇಳಿದರು. ನಾನು ಏಕೆ ಹೇಳುತ್ತಿದ್ದೇನೆಂದರೆ ಅವರಿಗೆ commitment ಇತ್ತು. ಸಮಾಜದ ಬಗ್ಗೆ ಕಳಕಳಿ ಇತ್ತು. ಕಳಕಳಿ ಇದ್ದುದ ರಿಂದ ಅವೆಲ್ಲಾ ಆಗಲಿಕ್ಕೆ ಸಾಧ್ಯ ಆಯಿತು. ಆ commitment ಇಲ್ಲದೇ ಇದ್ದವರಿಗೆ ಬಹಳ ಕಷ್ಟ. ರಾಜಕೀಯ ಕ್ಷೇತ್ರದಲ್ಲಿ ಯಾರಿಗೆ ಸಾಮಾಜಿಕ ಕಳಕಳಿ ಮತ್ತು ಬದ್ಧತೆ ಇರುವುದಿಲ್ಲ ಅವರು ಒಳ್ಳೆಯದು ಮಾಡುವುದು ಬಹಳ ಕಷ್ಟ. ಇವರಿಗೆ commitment ಇದ್ದುದರಿಂದ ಒಳ್ಳೆಯ ಕೆಲಸ ಮಾಡುತ್ತಿದ್ದರು. ಅಷ್ಟರ ಮಟ್ಟಿಗೆ ಒಳ್ಳೆಯ ವ್ಯಕ್ತಿ. ಏಕೆಂದರೆ ಗುಣಕ್ಕೆ ಮಾತ್ಸರ್ಯ ಇರಬಾರದು. ಅವರು ಯಾವುದೇ ಪಕ್ಷದವರು ಆಗಿರಲಿ, ಅವರು ಯಾವುದೇ ರಂಗ ದಲ್ಲಿರಲಿ, ಆದರೆ right man in the wrong Party ಅಷ್ಟೇ. ನಾನು ಒಳ್ಳೆಯದನ್ನು ಹೇಳಿದರೆ ನೀವು ಹೀಗೇಕೆ ಹೇಳುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : Right man in the right party ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : ಅದನ್ನು ನೀವು ಹೇಳಿಕೊಳ್ಳಿ, ನನಗೆ ಗೊತ್ತಿಲ್ಲ, ನಾನು ಹೇಳುವುದು right man in the wrong party ಎಂದು.

ಶ್ರೀ ವೀರಣ್ಣ ಎಸ್.ಚರಂತಿಮಠ್ : ಇದು ನಿಮಗೂ ಅನ್ವಯ ವಾಗುತ್ತದೆ, right man in wrong party ನಿಮಗೂ ಅನ್ವಯವಾಗುತ್ತದೆ.

ಅಧ್ಯಕ್ಷರು : ಇದು ಸಂತಾಪ ಸೂಚನೆ ನಿರ್ಣಯ, ಮಧ್ಯೆ ಏಕೆ interfere ಆಗುವುದು?

ಶ್ರೀ ಸಿ.ಟಿ. ರವಿ : ನಿಮ್ಮನ್ನು ನೀವು ಚೆನ್ನಾಗಿ ವಿಶ್ಲೇಷಣೆ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಚಿಕ್ಕಮಗಳೂರಿನಲ್ಲಿ ಈಗ ಸೋಲುತ್ತಿದ್ದೀರಿ ಗೊತ್ತಾಯಿತಾ?

(ಸದನದಲ್ಲಿ ನಗು)

ಶ್ರೀ ಸಿದ್ದರಾಮಯ್ಯ : ಆದ್ದರಿಂದ ಮಾನ್ಯ ಅಧ್ಯಕ್ಷರೆ, ಮಾನ್ಯ ಆಚಾರ್ ಅವರ ಬಗ್ಗೆ ನಾನು ವೈಯಕ್ತಿಕವಾಗಿ ಅಪಾರವಾದ ಗೌರವವನ್ನು ಇಟ್ಟು ಕೊಂಡಿದ್ದೆ. ನಾನು ಭಾರತೀಯ ಜನತಾ ಪಾರ್ಟಿಯಲ್ಲಿರತಕ್ಕಂತಹ ಅನೇಕ ಸದಸ್ಯರ ಬಗ್ಗೆ ವೈಯಕ್ತಿಕ ಗೌರವ ಇದೆ. ವೈಯಕ್ತಿಕವಾಗಿ ನಮಗೆ ಯಾರ ಬಗ್ಗೆನೂ ದ್ವೇಷ ಇಲ್ಲ. ಆದರೆ ಅವರ ಪಕ್ಷದ ಸಿದ್ಧಾಂತ, ಅವರ ಕಾರ್ಯಕ್ರಮ ಅದರ ಬಗ್ಗೆ ನಮ್ಮ ವಿರೋಧ ಇದೆ ಅಷ್ಟೇ. ಅದನ್ನು ನಾವು ಒಪ್ಪುವುದಿಲ್ಲ, ಅದು ಬೇರೆ ವಿಚಾರ. ಆದರೆ ಆಚಾರ್ ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರು ಒಳ್ಳೆಯ ವ್ಯಕ್ತಿ ಇದ್ದರು, ಒಳ್ಳೆಯ ಮನುಷ್ಯ ಇದ್ದರು. ಮತ್ತೆ ಸದನಕ್ಕೆ ಉಪಯೋಗ ಆಗುತ್ತಿತ್ತು. ಯಾವುದೇ ಸರ್ಕಾರದಲ್ಲಿದ್ದರೂ ಸಹ ಸರ್ಕಾರಕ್ಕೆ ಉಪಯೋಗ ಆಗುತ್ತಿತ್ತು, that is very important ಮತ್ತೆ ಸಮಾಜಕ್ಕೂ ಉಪಯೋಗ ಆಗುತ್ತಿತ್ತು. ಅಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರಿಂದ ಸಮಾಜಕ್ಕೂ ನಷ್ಟ ಆಗಿದೆ. ರಾಜ್ಯಕ್ಕೆ ನಷ್ಟ ಆಗಿದೆ ಮತ್ತೆ ಒಬ್ಬ ಮೇಧಾವಿ ಸಲಹೆ ಕೊಡುತ್ತಿದ್ದಂತಹ ವ್ಯಕ್ತಿ. ಯಾವಾಗಲೂ ಕೂಡ ಜ್ಞಾನ ಸುಮ್ಮ ಸುಮ್ಮನೇ ಬರುವುದಿಲ್ಲ. ಅಧ್ಯಯನದಿಂದ, ಅನುಭವ ದಿಂದ ಬರತಕ್ಕಂತಹದು ಜ್ಞಾನ. ಅವರು ಸಾಕಷ್ಟು ಓದಿಕೊಂಡಿದ್ದರು. ಅನುಭವನೂ ಇತ್ತು. ಹಾಗಾಗಿ ಅವರಿಗೆ ಈ ರಾಜ್ಯದ ಬಗ್ಗೆ, ರಾಜ್ಯದ ಸಮಸ್ಯೆಗಳ ಬಗ್ಗೆ, ಅದಕ್ಕೆ ಪರಿಹಾರಗಳನ್ನು ಮಾಡುವುದು ಇವೆಲ್ಲವೂ ಕೂಡ ಇರುತ್ತಿತ್ತು. ಅವರು ಹೇಳುತ್ತಿದ್ದರು. Manifesto ಎಲ್ಲವನ್ನೂ ಅವರ ಕೈಯಲ್ಲೇ ಬರೆಸುತ್ತಿದ್ದೇವೆಂದು ಅವರು ಹೇಳಿದರು. ಒಂದೊಂದು ಸಾರಿ exaggerate ಆಗಿ ಬರೆದುಬಿಡುತ್ತಿದ್ದರು ಅಷ್ಟೇ. Implement ಮಾಡುವುದಕ್ಕೆ ಆಗದೇ ಇರುವುದನ್ನು ಸಹ ಬರೆದು ಬಿಡುತ್ತಿದ್ದರು. ಕೆಲವು implement ಆಗುವುದನ್ನು ಬರೆಯುತ್ತಿದ್ದರು. Of course political ಆಗಿ ಬರೆಯುತ್ತಿದ್ದರು,

ಬಿಡಿ, ಅದೇನೇ ಇರಲಿ. ಆ ಜ್ಞಾನ ಇತ್ತು ಅವರಿಗೆ. ರಾಜ್ಯದ ಬಗ್ಗೆ, ರಾಜ್ಯದ ಸಮಸ್ಯೆಗಳ ಬಗ್ಗೆ, ಅವುಗಳ ಪರಿಹಾರಗಳ ಬಗ್ಗೆ ಅವರಿಗೆ ಜ್ಞಾನ ಇತ್ತು ಎನ್ನತಕ್ಕದ್ದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಅಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದು ಕೊಂಡಿದ್ದೇವೆ. ಪಾಪ function ಹೋಗಿದ್ದರು. ಕಳೆದ ಸದನದಲ್ಲಿದ್ದರು, ಈ ಸದನದಲ್ಲಿಲ್ಲ ಎಂದರೆ ಎಷ್ಟು ನೋವಾಗುತ್ತದೆ ಹೇಳಿ. ಕಳೆದ ಸದನದಲ್ಲಿ ಅವರು ಇದ್ದರು. ನಾನು ಅವತ್ತು ಬಂದಿರಲಿಲ್ಲ. ಅವತ್ತು Bill move ಮಾಡಿ ಪಾಸ್ ಮಾಡಿಕೊಂಡರು. ನಾವು ಅವತ್ತು ಬಹಳ ತೀವ್ರವಾಗಿ ವಿರೋಧ ಮಾಡುತ್ತಿದ್ದೆವು. Endowment Bill ಬಂದಿತ್ತಲ್ಲ, ಅದನ್ನು ನಾವು ವಿರೋಧ ಮಾಡುತ್ತಿದ್ದೆವು.

ಶ್ರೀ ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು) : ನಿಮ್ಮ Deputy leader ಅವರು ವಿರೋಧ ಮಾಡಿದರು.

ಶ್ರೀ ಸಿದ್ದರಾಮಯ್ಯ : ಇರಲಿ, ನಾನು ಇದ್ದರೆ ತೀವ್ರ ವಿರೋಧ ಮಾಡುತ್ತಿದ್ದೆ. ಮಾನ್ಯ ಜಯಚಂದ್ರ ಅವರೂ ವಿರೋಧ ಮಾಡಿದ್ದಾರೆ, ಆದರೆ ನೀವು ಅವರ ವಿರೋಧವನ್ನು ಲೆಕ್ಕಕ್ಕೆ ಹಾಕಿಕೊಂಡಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು) : ವಿರೋಧವನ್ನು ಚೆನ್ನಾಗಿ ನಿಭಾಯಿಸಿದರು.

ಶ್ರೀ ಸಿದ್ದರಾಮಯ್ಯ : ನನಗಿಂತ ಚೆನ್ನಾಗಿ ನಿಭಾಯಿಸುತ್ತಾರೆ. ಅದರಿಂದ ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿದ್ದವರು ಈ ಸದನದಲ್ಲಿ ಇಲ್ಲ ಎಂದರೆ ಬಹಳ ನೋವಾಗುತ್ತದೆ. ಬಹಳ ವೈಯಕ್ತಿಕವಾಗಿ ಕೂಡ ದುಃಖ ಆಗುತ್ತದೆ. ನಮಗೇ ಇಷ್ಟು ನೋವು ದುಃಖ ಆಗಬೇಕಾದರೆ ಅವರ ಕುಟುಂಬ ವರ್ಗದವರಿಗೆ ಎಷ್ಟು ಆಗಬಹುದು? ಆದರೆ ಇನ್ನೊಂದು ವಿಶೇಷ ಎಂದು ನಾನು ಈಗ ಪೇಪರ್‌ನಲ್ಲಿ ಓದಿದೆ. ನನಗೆ ಗೊತ್ತಿರಲಿಲ್ಲ. ಅವರು love marriage ಆಗಿದ್ದರಂತೆ. Love with arranged Marriage, ಎರಡೂ ಆಗಿ ಪಾಪ Valentine Day ಎಂದು ನಾವೇನು ಪ್ರಣಯಿಗಳ ದಿನ ಎಂದು ಕರೆಯುತ್ತೇವೆ. ಅವತ್ತೇ ಪಾಪ ಅವರು ಸತ್ತು ಹೋಗಿದ್ದಾರೆ. ನೋಡಿ ಕಾಕತಾಳೀಯ ಹೇಗೆ ಆಗಿದೆ. Love marriage ಆಗಿ ಆ love marriage ಆಚರಣೆ ಮಾಡಿಕೊಳ್ಳುವ ದಿನ, ಪ್ರಣಯಿಗಳ ದಿನವನ್ನು ಆಚರಣೆ ಮಾಡಿ

ಕೊಳ್ಳುವ ದಿನ, ಅವತ್ತೇ ಸಾವನ್ನಪ್ಪಿದ್ದಾರೆಂದರೆ ಒಂದು ರೀತಿ ದುರಂತವೇ ಸರಿ ಎಂದು ಅನಿಸುತ್ತದೆ. ಆದ್ದರಿಂದ ಅವರ ಆತ್ಮಕ್ಕೆ ಚಿರಶಾಂತಿಯು ದೊರಕಲಿ, ಅವರ ಕುಟುಂಬ ವರ್ಗದವರಿಗೆ, ಅವರ ಸ್ನೇಹಿತರಿಗೆ, ಅವರ ಬಂಧು ಬಳಗದವರಿಗೆ, ಅವರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ಕೊಡಲಿ ಎಂದು ಹೇಳುತ್ತೇನೆ. ಯಾವುದೋ ಮೊಟ್ಟೆ ತಿಂದರು ಎಂಬ ಲೇಖನಗಳು ಬಂದವು. ಅವರು ಬಹಳ ಚೆನ್ನಾಗಿ ಉತ್ತರ ಕೊಟ್ಟರು. ನಾನು ಡಾಕ್ಟರ್ ಆಗಿ ಮೊಟ್ಟೆ ತಿನ್ನದೇ ಹೋದರೆ ಬೇರೆಯವರಿಗೆ ಮೊಟ್ಟೆ ತಿನ್ನಿ ಎಂದು ನಾನು ಹೇಗೆ ಹೇಳಲಿ ಎಂದರು. ಮೊಟ್ಟೆ ತಿನ್ನುವುದು, ಮಾಂಸ ತಿನ್ನುವುದು ಏನೂ ಅಪರಾಧವಲ್ಲ. ಅದು ಮೈಲಿಗೆನೂ ಅಲ್ಲ. ಈಗ ಎಲ್ಲಾ ಜಾತಿಯವರೂ ತಿನ್ನುತ್ತಾರೆ. It is a food habit ಅಷ್ಟೇನೆ. ಅವರು ಸುಮ್ಮಸುಮ್ಮನೇ ಗೋ ಹತ್ಯೆ ವಿಚಾರ ತೆಗೆದುಕೊಂಡು ಬಂದು ವಿರೋಧ ಮಾಡಿದರು ಅಷ್ಟೇ.

ಮಾಂಸವನ್ನು ಎಲ್ಲರೂ ತಿನ್ನುತ್ತಾರೆ. ಅದನ್ನು ಎಲ್ಲಾ ಜಾತಿಯವರೂ ತಿನ್ನುತ್ತಾರೆ. ಮಾನ್ಯ ಸದಾನಂದಗೌಡರು 'ನಾನು non-veg ತಿನ್ನುವುದಿಲ್ಲ' ಎಂದು ಹೇಳಿಬಿಡಲಿ ನೋಡೋಣ. ಅವರು ನನ್ನ ಎದುರಿಗೇ ತಿಂದಿದ್ದಾರೆ. ಆದರೆ ನಾನು ಮಾನ್ಯ ಸುರೇಶ್ ಕುಮಾರ್‌ರವರು ತಿಂದಿದ್ದನ್ನು ನೋಡಿಲ್ಲ. ಸುಮ್ಮನೆ ಆ ಬಗ್ಗೆ ಏನೂ ಹೇಳಬಾರದು. ಆದರೆ ಮಾನ್ಯ ಆಚಾರ್ಯರವರೂ ಸಹ ತಿನ್ನುತ್ತಿರಲಿಲ್ಲ. ಅವರು ಮೊಟ್ಟೆಯನ್ನು ಮಾತ್ರವೇ ತಿಂದಿದ್ದಾರೆ. ಮಾನ್ಯ ಕಾರಜೋಳರವರೆ, ನೀವೇನು ಮಾಡುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ನಾವು ತಿನ್ನಬೇಕಾದ ಎಲ್ಲಾ ಪ್ರಾಣಿಗಳನ್ನೂ ತಿನ್ನುತ್ತೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಸರಿ. ನೀವು ಸದ್ಯಕ್ಕೆ ಚೈನಾ ದೇಶಕ್ಕೆ ಸೇರಿದವರಲ್ಲ ಅಷ್ಟೆ. ಏಕೆಂದರೆ, ಚೈನಾ ದೇಶದವರು ಮನುಷ್ಯನ ಕಾಲುಗಳನ್ನು ಬಿಟ್ಟು, ಕಾಲುಗಳಿರುವ ಎಲ್ಲಾ ಪ್ರಾಣಿಗಳನ್ನೂ ತಿನ್ನುತ್ತಾರಂತೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಇವರು ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದು, ನಾವು ಎಲ್ಲವನ್ನೂ ತಿನ್ನುತ್ತೇವೆ ಎನ್ನುತ್ತಿದ್ದಾರಲ್ಲಾ? ಇದು ಇವರಿಗೆ ಸೂಕ್ತವೇ?

ಶ್ರೀ ಸಿದ್ದರಾಮಯ್ಯ : ಮಾನ್ಯ ಕಾರಜೋಳರವರು ಸತ್ಯ ಹೇಳಿದ್ದಾರೆ. ಅವರಿಗೆ ಅದರ ಬಗ್ಗೆ ಒಳಗೊಳಗೇ ವಿರೋಧವಿತ್ತು. ಆದರೆ ಪಕ್ಷದ

ಸಿದ್ಧಾಂತಕ್ಕೆ ಬದ್ಧರಾಗಿದ್ದರಿಂದ, ಅಂದು ಅವರಿಗೆ ವಿರೋಧ ಮಾಡಲಿಕ್ಕಾಗಿರಲಿಲ್ಲ. ಅಲ್ಲವೇ ಕಾರಜೋಳರವರೇ? ನೀವೇ ಹೇಳಿ.

ಅಧ್ಯಕ್ಷರು : ಸಂತಾಪ ಸೂಚನೆ ಮೇಲೆ ತಮ್ಮ ಮಾತು ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನೂ ನಿಮ್ಮ ಜೊತೆಯಲ್ಲಿದ್ದೇನೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಹೇಳಿ, ಅವರಿಗೆ ನನ್ನ ಗೌರವವನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಮಾನ್ಯ ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಡಾ: ವಿ.ಎಸ್. ಆಚಾರ್ಯರವರು ನಿಧನ ಹೊಂದಿರುವುದು ತಿಳಿದು ವಿಷಾದವಾಯಿತು. ಮಾನ್ಯ ಅಧ್ಯಕ್ಷರು ತಂದಿರುವ ಈ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಡಾ: ವಿ.ಎಸ್. ಆಚಾರ್ಯರವರು ತಮ್ಮ ಸುಮಾರು 40 ವರ್ಷಗಳ ರಾಜಕೀಯ ಜೀವನದಲ್ಲಿ ಪುರಸಭೆಯ ಅಧ್ಯಕ್ಷರಾಗಿದ್ದರು ಮತ್ತು ವಿಧಾನ ಸಭೆ ಸದಸ್ಯರಾಗಿದ್ದರು. ದಿವಂಗತರು 1996 ರಿಂದ 2002ರವರೆಗೆ, 2002 ರಿಂದ 2008 ರವರೆಗೆ, 2006ರಿಂದ 2007 ರವರೆಗೆ ಮತ್ತು 2008 ರಿಂದ 2012ರ ಫೆಬ್ರವರಿವರೆಗೆ ನಾಲ್ಕು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಶ್ರೀಯುತರು ವೈದ್ಯಕೀಯ ಶಿಕ್ಷಣ, ಉನ್ನತ ಶಿಕ್ಷಣ ಮತ್ತು ಗೃಹ ಖಾತೆಯ ಜೊತೆಗೆ ಹಲವಾರು ಮಹತ್ವದ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಇಂತಹ ವ್ಯಕ್ತಿಯ ಅಗಲಿಕೆಗೆ ನಾವು ದುಃಖವನ್ನು ವ್ಯಕ್ತಪಡಿಸಬೇಕಾಗುತ್ತದೆ. ಅವರು 1975 ರಿಂದ 1977 ರವರೆಗಿನ ತುರ್ತು ಪರಿಸ್ಥಿತಿಯ ಅವಧಿಯಲ್ಲಿ 19 ತಿಂಗಳುಗಳ ಕಾಲ ಜೈಲು ವಾಸವನ್ನು ಅನುಭವಿಸಿದ್ದರು. ಅದರ ಜೊತೆಗೆ ದಿವಂಗತರು 1974 ರಿಂದ 1977 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಭಾರತೀಯ ಜನಸಂಘದ ಜಿಲ್ಲಾಧ್ಯಕ್ಷರಾಗಿ, 1977 ರಿಂದ 1980 ರವರೆಗೆ ಜನತಾ ಪಕ್ಷದ ಜಿಲ್ಲಾಧ್ಯಕ್ಷರಾಗಿ, 1980 ರಿಂದ 1983 ರವರೆಗೆ ಬಿ.ಜೆ.ಪಿ. ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 1983ರಲ್ಲಿ ಉಡುಪಿಯಿಂದ ವಿಧಾನ ಸಭೆಗೆ ಪ್ರಥಮ ಬಾರಿಗೆ ಆಯ್ಕೆಗೊಂಡು ಬಿಜೆಪಿ ಶಾಸಕಾಂಗದ ನಾಯಕರಾಗಿಯೂ ಸಹ ಅವರು ಕಾರ್ಯನಿರ್ವಹಿಸಿರುತ್ತಾರೆ. ಅವರ ಬಗ್ಗೆ ನಾವು ಇವತ್ತು ಎಷ್ಟು ಹೇಳಿದರೂ ಸಾಲದು. ಮುಜರಾಯಿ ಬಿಲ್ ಅನ್ನು ಮಂಡಿಸಬೇಕೆಂದು ಅವರದೊಂದು ಆಸೆ ಇತ್ತು. ಕಳೆದ ಸಾರಿ ಸದನದಲ್ಲಿ ಅದು ಒಮ್ಮೆ ಬಿದ್ದು ಹೋಗಿ ನಂತರ ಅಂಗೀಕಾರವಾಯಿತು.

ದೇವರ ಬಗ್ಗೆ ಅವರಿಗೆ ಅಷ್ಟೊಂದು ಗೌರವವಿತ್ತು. ಅವರ ಬಗ್ಗೆ ನಮಗೆ ಹೆಚ್ಚಿಗೆ ಮಾತನಾಡುವ ಶಕ್ತಿ ಇಲ್ಲ. 1983ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಆ ಸಂದರ್ಭದಲ್ಲಿ ನಾನು ಉಡುಪಿಗೆ ಹೋಗಿ ಬಂದಾಗ, ಅವರಿಗೆ ಅವರದೇ ಆದಂತಹ ವ್ಯಕ್ತಿತ್ವ ಇದ್ದದ್ದನ್ನು ಕಂಡಿದ್ದೆ. ಅದರ ಬಗ್ಗೆ ನಾವು ಎಷ್ಟು ಹೇಳಿದರೂ ಸಾಲದು. ದೇಶದ ಕಾನೂನಿನ ಬಗ್ಗೆ ಅಪಾರ ಗೌರವವಿದ್ದ ಅವರು ಒಬ್ಬ ಪ್ರಾಮಾಣಿಕ ವ್ಯಕ್ತಿ ಮತ್ತು ರಾಜಕಾರಣಿಯಾಗಿದ್ದರು ಎಂದರೆ ತಪ್ಪಾಗಲಾರದು. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರಿ, ಮಾನ್ಯ ಸಭಾಧ್ಯಕ್ಷರು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಡಾ: ವಿ.ಎಸ್. ಆಚಾರ್ಯರವರ ನಿಧನದ ಕುರಿತು ತಾವು ಸಂತಾಪ ಸೂಚನಾ ನಿರ್ಣಯ ವನ್ನು ತಂದಿದ್ದೀರಿ. ಡಾ: ಆಚಾರ್ಯರ ಬಗ್ಗೆ ಹೇಳುವುದಾದರೆ, ಅವರೊಬ್ಬ ಅಜಾತಶತ್ರು ಎಂದು ಹೇಳಬಹುದು. ಹಿಂದೆ 1983 ರಲ್ಲಿ ಅವರು ವಿಧಾನ ಸಭೆಗೆ ಆಯ್ಕೆಯಾಗಿ ಬಂದಂತಹ ಸಂದರ್ಭದಲ್ಲಿ, ಅವತ್ತು ಭಾರತೀಯ ಜನತಾ ಪಾರ್ಟಿಯ 18 ಜನ ಶಾಸಕರು ಆರಿಸಿ ಬಂದಿದ್ದರು. ಆ 1 ಜನ ಶಾಸಕರ Legislature Partyಯ ನಾಯಕರಾಗಿ ಅವತ್ತು ಡಾ:ವಿ.ಎಸ್. ಆಚಾರ್ಯರವರು ಆಯ್ಕೆಯಾಗಿ ಕೆಲಸವನ್ನು ಮಾಡಿದರು. ಅವತ್ತಿನ ಸಂದರ್ಭದಲ್ಲಿ ಶ್ರೀಯುತ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿದ್ದರು. 1983ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಹುಶಃ first time ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಗುವಂತಹ ಸಂದರ್ಭ ಒದಗಿ ಬಂದಿತು. ಹೀಗಾಗಿ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ದೆಹಲಿಯಿಂದಲೇ ಭಾರತೀಯ ಜನತಾ ಪಾರ್ಟಿಯ 18 ಜನ ಶಾಸಕರ un-conditional support ಅನ್ನು ಘೋಷಣೆ ಮಾಡಿದರು. ಅವತ್ತು ಬೆಂಬಲ ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಆಚಾರ್ಯರವರು ಭಾರತೀಯ ಜನತಾ ಪಾರ್ಟಿಯ floor leader ಆಗಿದ್ದರು. ಆ ಸಂದರ್ಭದಲ್ಲಿ, ಪ್ರಥಮ

ಬಾರಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಸರ್ಕಾರವೊಂದು ಬರಲಿ ಎಂಬ ಉದ್ದೇಶದಿಂದ ಮಾನ್ಯ ವಾಜಪೇಯಿಯವರ ಆ ನಿರ್ಧಾರವನ್ನು ಕೈಗೊಂಡಿದ್ದರು. ಅವತ್ತು ಪ್ರಾರಂಭ ಆಗಿದ್ದು, ಮುಂದೆ ಬಹುಶಃ ಜನತಾ ಪರಿವಾರದವರು 2–3 ಸಲ ಅಧಿಕಾರಕ್ಕೆ ಬರಲಿಕ್ಕೆ ಅದೊಂದು base ಆಯಿತು ಎಂದು ನಾನು ಹೇಳಬಯಸುತ್ತೇನೆ. 1994 ಇರಬಹುದು, 2004 ಇರಬಹುದು, ಈ ರೀತಿ 2–3 ಸಲ ಜನತಾ ಪರಿವಾರದವರು ಇಲ್ಲಿ ಅಧಿಕಾರ ಬರಲಿಕ್ಕೆ ಅದೊಂದು base ಆಯಿತು ಎನ್ನಬಹುದು. ಡಾ: ಆಚಾರ್ಯರವರು ಆ ಸಂದರ್ಭದಲ್ಲಿ co-ordination ಕೆಲಸವನ್ನು ಚೆನ್ನಾಗಿ ಮಾಡಿದ್ದರು. ಭಾರತೀಯ ಜನತಾ ಪಾರ್ಟಿಯನ್ನು ಹೊರತುಪಡಿಸಿ, ಬೇರೆ ಪಕ್ಷಗಳ ಜೊತೆ ಬೆಂಬಲ ಕೊಡಬೇಕೆಂದಾಗ ಯಾವ ರೀತಿಯಲ್ಲಿ co-ordination ಮಾಡಬೇಕೋ, ಆ co-ordination ಅನ್ನು ಡಾ: ಆಚಾರ್ಯರವರು ಚೆನ್ನಾಗಿ ಮಾಡಿದರು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯ ಸುತ್ತಿದ್ದೇನೆ. ಜನಸಂಘದ ಹಿನ್ನೆಲೆಯಿಂದ ಬಂದಂತಹ ವ್ಯಕ್ತಿ ಅವರಾಗಿದ್ದರು. ಇವತ್ತು ನೇರವಾಗಿ ವಿಧಾನ ಸಭೆಗೆ ಜನಪ್ರತಿನಿಧಿಯಾಗಿ ಬರುವವರು ಬಹಳ ಜನರಿದ್ದಾರೆ. ನೇರವಾಗಿ ಲೋಕಸಭೆಗೆ ಆಯ್ಕೆಯಾಗುವವರೂ ಸಹಾ ಬಹಳ ಜನರಿದ್ದಾರೆ. ಆದರೆ ಡಾ: ವಿ.ಎಸ್. ಆಚಾರ್ಯರವರು ಕೆಳ ಹಂತದ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖರಾಗಿ ಮೇಲ್ಪಟ್ಟದ ಆಡಳಿತ ವ್ಯವಸ್ಥೆಗೆ ಬಂದವರಾ ಗಿದ್ದರು. ಇವತ್ತು ಉಡುಪಿ ನಗರಸಭೆ ಏನಿದೆ, ಆ ನಗರಸಭೆಗೆ ಪ್ರಥಮ ಅಧ್ಯಕ್ಷರಾಗಿ ಮತ್ತು ಆ ನಗರಸಭೆಯನ್ನು ದೇಶದಲ್ಲೇ ಮಾದರಿಯಾದಂತಹ ನಗರಸಭೆಯನ್ನಾಗಿ ಮಾಡಿದವರು ಡಾ: ವಿ.ಎಸ್. ಆಚಾರ್ಯರು ಎಂದರೆ ತಪ್ಪಾಗಲಾರದು. ಹೀಗಾಗಿ ಅವರಿಗೆ ಕೆಳಹಂತದ ಆಡಳಿತವೂ ಗೊತ್ತು ಮತ್ತು ಮೇಲಿನ ಹಂತದ ಆಡಳಿತವೂ ಗೊತ್ತಿತ್ತು. ಆ ರೀತಿಯ ಜನಪ್ರತಿನಿಧಿಯಾಗಿ ಅವರು ಕೆಲಸ ಮಾಡಿದವರಾಗಿದ್ದರು. ಇನ್ನೊಂದು ಹೇಳಬೇಕೆಂದರೆ, ಯಾವುದೇ ಸಂದರ್ಭದಲ್ಲಿ, ಹಿಂದೆ ನಗರಸಭೆಯ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದಂತಹ ಸಂದರ್ಭದಲ್ಲಿ ಉತ್ತಮ ಆಡಳಿತವನ್ನು ಹೇಗೆ ಕೊಡಬೇಕು ಎನ್ನುವುದನ್ನು ಅವರು ತೋರಿಸಿಕೊಟ್ಟರು. ನಂತರ ಶ್ರೀಯುತರು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ, Medical Education ಮಂತ್ರಿಗಳಾಗಿ ಮತ್ತು Higher Education ಮಂತ್ರಿಗಳಾಗಿ ಇವತ್ತು ಯಾವ ರೀತಿಯಾಗಿ ಆ ಇಲಾಖೆಗೆ ಒಂದು ನ್ಯಾಯವನ್ನು ಕೊಡಬೇಕಾಗಿತ್ತೋ, ಪ್ರಾಮಾಣಿಕವಾಗಿ

ಕೆಲಸವನ್ನು ಮಾಡಬೇಕಾಗಿತ್ತೋ, ಆ ಕೆಲಸವನ್ನು ಡಾ: ಆಚಾರ್ಯರವರು ಮಾಡಿದರು. ಬಹಳ ಉತ್ತಮವಾದಂತಹ ಆಡಳಿತವನ್ನು ಕೊಟ್ಟರು, ಉತ್ತಮ ವಾದಂತಹ ನಿರ್ಣಯಗಳನ್ನು ತೆಗೆದುಕೊಂಡರು. ಬಹಳ ಮುಖ್ಯವಾಗಿ ಆಡಳಿತ ನಿರ್ವಹಣೆ ಮಾಡುವಂತಹ ಸಂದರ್ಭದಲ್ಲಿ decision making is very important. ಆ decision making ಅನ್ನು ತೀವ್ರಗತಿಯಿಂದ ಮಾಡುವಂತಹ ಕೆಲಸವನ್ನು ಡಾ: ಆಚಾರ್ಯರವರು ಮಾಡುತ್ತಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಒಬ್ಬ ಉತ್ತಮ ಆಡಳಿತಗಾರರಾಗಿ ಮತ್ತು ಉತ್ತಮ ಸಂಘಟಕರಾಗಿ ಇವತ್ತು ಭಾರತೀಯ ಜನತಾ ಪಾರ್ಟಿಯನ್ನು ಬೆಳೆಸುವಂತಹ ಕೆಲಸವನ್ನು ಅವರು ಮಾಡಿದ್ದರು. ಉಡುಪಿಯಂತಹ ಜಿಲ್ಲೆಯಲ್ಲಿ, ಇಡೀ ಅಖಂಡ ಮಂಗಳೂರು ಜಿಲ್ಲೆ ಇದ್ದಂತಹ ಸಂದರ್ಭದಲ್ಲಿ, ಆ ಇಡೀ ಜಿಲ್ಲೆಯಲ್ಲಿ ಇವತ್ತು ಭಾರತೀಯ ಜನತಾ ಪಾರ್ಟಿ ಬಹಳಷ್ಟು ಉತ್ತಮವಾಗಿ ಸಂಘಟಿತವಾಗಿ ಬೆಳೆದಿದ್ದರೆ, ಅದಕ್ಕೆ ಮೂಲ ಕಾರಣಕರ್ತರೆಂದರೆ ಡಾ: ವಿ.ಎಸ್. ಆಚಾರ್ಯರವರು. ಅಂತಹ ಒಂದು ವ್ಯಕ್ತಿತ್ವವನ್ನು ಅವರು ಪಡೆದುಕೊಂಡಿದ್ದರು ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಅವತ್ತು ನಾನು Revenue Minister ಆಗಿದ್ದೆ. ಉಡುಪಿ ಹೊಸದಾಗಿ ಜಿಲ್ಲೆಯಾಗಿತ್ತು. ಉಡುಪಿ ಹೊಸದಾಗಿ ಜಿಲ್ಲೆಯಾದಂತಹ ಸಂದರ್ಭದಲ್ಲಿ ಆ ಜಿಲ್ಲೆಯ District Complex ಅನ್ನು ಯಾವ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತೋ, ಆ land ಬಗ್ಗೆ ಬಹಳಷ್ಟು disputes ಇತ್ತು. ನಾನು ಅಲ್ಲಿಗೆ visit ಮಾಡಿದಾಗ, ಅವರು ನನ್ನನ್ನು ಅಲ್ಲಿಗೆ ಕರೆದು ಕೊಂಡು ಹೋದರು. ಆ ಜಾಗವನ್ನು ನನಗೆ ತೋರಿಸಿದರು. ಇಲ್ಲಿ District Complex ನಿರ್ಮಾಣವಾದಲ್ಲಿ ಬಹಳ ಚೆನ್ನಾಗಿ ಆಗುತ್ತದೆ ಎಂದು ಅವರು ಹೇಳಿದಾಗ, ಅದಕ್ಕೆ ನನ್ನ ಇಲಾಖೆ ಮುಖಾಂತರ ಏನೇನು ಸಹಕಾರವನ್ನು ಕೊಡಬೇಕೋ, ಅದನ್ನು ನಾನು ಕೊಟ್ಟೆ. ಅಲ್ಲಿ ಕೆಲವೊಂದು ಸಮಸ್ಯೆಗಳೇ ನಿದ್ದವು, ಅವುಗಳನ್ನು ಅವರು ಬಗೆ ಹರಿಸಿದರು. ಹೀಗಾಗಿ ಇವತ್ತು ಉಡುಪಿ ಜಿಲ್ಲೆಯ ಎಲ್ಲಾ ಕಛೇರಿಗಳು District Complex ಕಟ್ಟಡದಲ್ಲಿ ಕಾರ್ಯನಿರ್ವ ಹಿಸುತ್ತಿವೆ, ಅವತ್ತು ಅಲ್ಲಿನ land ಬಗ್ಗೆ 15–20 ವರ್ಷಗಳಿಂದ dispute ಇತ್ತು. ಯಾರಿಂದಲೂ ಆ dispute ಅನ್ನು ಬಗೆಹರಿಸಲಿಕ್ಕೆ ಆಗಿರಲಿಲ್ಲ. ಆ

dispute ಅನ್ನು ನಮ್ಮ Revenue ಇಲಾಖೆ ಸಹಕಾರ ತೆಗೆದುಕೊಂಡು ಅವರು ಬಗೆಹರಿಸಿದರು. ಅದು ಇವತ್ತು ಅತ್ಯುತ್ತಮವಾದ ಕಟ್ಟಡವಾಗಿದೆ. ಬಹುಶಃ ನಮ್ಮ ರಾಜ್ಯದಲ್ಲಿ ಅಲ್ಲ, ಆ District Complex ಅನ್ನು ಯಾರಾದರೂ ನೋಡಿಕೊಂಡು ಬಂದರೆ, ಅಲ್ಲಿನ Art, ಕಲೆ ಏನಿದೆಯೋ, ಆ ಹಿನ್ನೆಲೆ ಇಟ್ಟುಕೊಂಡು ಮತ್ತು ಉತ್ತಮವಾದಂತಹ ವಿನ್ಯಾಸದ ಹಿನ್ನೆಲೆ ಯಿಂದ, ಇವತ್ತು ಆ District Complex ಅನ್ನು ನೋಡಿದರೆ, ಅದು ಇಡೀ ದೇಶದಲ್ಲೇ ಒಂದು ಮಾದರಿಯಾದಂತಹ District Complex ಎಂದು ನಾವು ಹೇಳಬೇಕಾಗುತ್ತದೆ. ನಂತರ ಆ ಕಟ್ಟಡದ inauguration ಬಗ್ಗೆ ಹೇಳಬೇಕಾದರೆ, ಅವತ್ತು ನಾನು ರೆವಿನ್ಯೂ ಇಲಾಖೆಯ Minister ಆಗಿದ್ದಾಗ, ಆ land dispute ಬಗ್ಗೆ ಏನೊಂದು ಸಹಕಾರವನ್ನು ಇಲಾಖೆ ಯಿಂದ ಕೊಟ್ಟಿದ್ದೆನೋ, ಅದನ್ನು ಅವರೆಂದೂ ಮರೆಯಲಿಲ್ಲ. ಆ District Complex ಕಟ್ಟಡ ಉದ್ಘಾಟನೆ ಸಂದರ್ಭದಲ್ಲಿ ಅವರು ಹತ್ತಾರು ಸಾರಿ ನನಗೆ ಫೋನ್ ಮಾಡಿದರು. 'ಜಗದೀಶ್ ಶೆಟ್ಟರ್‌ರವರೆ, ನೀವು ಈ ಒಂದು ಕಾರ್ಯಕ್ರಮಕ್ಕೆ ಬರಲೇಬೇಕು' ಎಂದು ನನಗೆ ಹೇಳಿದರು. 'ನಾನು ಸದರಿ ಕಾರ್ಯಕ್ರಮಕ್ಕೆ ಬಂದೇ ಬರುತ್ತೇನೆ. ಆ ಬಗ್ಗೆ ನಮ್ಮ TP ಯಲ್ಲಿ note ಮಾಡಿಕೊಂಡಿದ್ದೇನೆ, ಆ ಕಾರ್ಯಕ್ರಮಕ್ಕೆ ನಾನು definite ಆಗಿ ಬರುತ್ತೇನೆ' ಎಂದು ಅವರಿಗೆ ಹೇಳಿದ್ದೆ. ಆದರೂ ಆ ಬಗ್ಗೆ 2–3 ದಿವಸಕ್ಕೊಮ್ಮೆ ಅವರು ನನಗೆ ಆ ಬಗ್ಗೆ ನೆನಪು ಮಾಡುತ್ತಿದ್ದರು. ನಾಳೆ ಕಾರ್ಯಕ್ರಮವಿದೆ ಎನ್ನುವಾಗ, ಅದರ ಹಿಂದಿನ ದಿವಸ ನೆನಪು ಮಾಡಿದರು. 'ನೀವು ಯಾವಾಗ ಬರುತ್ತಿದ್ದೀರಿ? ಎಲ್ಲಿಗೆ ಬರುತ್ತಿದ್ದೀರಿ? ನೀವು ಸದರಿ ಕಾರ್ಯಕ್ರಮಕ್ಕೆ ಬರಲೇಬೇಕು? ನಿಮ್ಮನ್ನು ಬಿಟ್ಟು ನಾವು ಕಾರ್ಯಕ್ರಮವನ್ನು ಮಾಡುವುದೇ ಇಲ್ಲ' ಎಂದೆಲ್ಲಾ ಅವರು ಹೇಳಿದ ಮೇಲೆ, ನಾನು ಹೋಗಲೇಬೇಕಾಯಿತು. ಆ District Complex ಅನ್ನು ನೋಡಿ ನನಗೆ ಬಹಳಷ್ಟು ಸಂತೋಷ ವಾಯಿತು. ಅಂದರೆ ಯಾರು ಸಹಾಯ ಮಾಡಿರುತ್ತಾರೋ, ಅದನ್ನು recognition ಮಾಡುವಂತಹ ಕೆಲಸವನ್ನು ಡಾ: ಆಚಾರ್ಯರವರು ಮಾಡುತ್ತಿದ್ದರು. ಆ ಒಂದು ನಿಷ್ಠುರತೆ ಮತ್ತು ಆ ಒಂದು ಪ್ರಾಮಾಣಿಕತನ ಅವರಲ್ಲಿ ಇತ್ತು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅವರು ಒಂದು ಪಕ್ಷಕ್ಕೆ ಆಸ್ತಿಯಾಗಿದ್ದರು, ಇವತ್ತು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಅಂಥ ಹಿರಿಯರು, ಅಂಥ ಮಾರ್ಗದರ್ಶಕ ರಾಗಿದ್ದರು. ಅವರು Higher Education Minister ಆಗಿರಬಹುದು Medical Education Minister ಆಗಿರಬಹುದು, ಬಹುಶಃ ಅವರನ್ನು ಯಾವುದೇ ವಿಚಾರವಾಗಿ ಕೇಳಿದರೆ, ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಹೇಳುವಂಥ ಕೆಪಾಸಿಟಿ ಅವರಲ್ಲಿತ್ತು. ಇವತ್ತು ಕ್ಯಾಬಿನೆಟ್‌ನಲ್ಲಿ ಹಲವಾರು ಕ್ಲಿಷ್ಟವಾದ ಸಮಸ್ಯೆಗಳು ಬಂದಾಗ ಅಥವಾ ಪಕ್ಷದಲ್ಲಿ ಯಾವುದೇ ಸಂದರ್ಭದಲ್ಲಿ ಒಂದು ಡಿಸಿಷನ್ ತೆಗೆದುಕೊಳ್ಳುವಂಥ ಸಂದರ್ಭ ಬಂದಾಗ ಅದಕ್ಕೆ ಸರಿಯಾದ ರೀತಿಯ ಮಾರ್ಗದರ್ಶನ ಕೊಡುವಂಥ ಶಕ್ತಿ ಡಾ: ವಿ.ಎಸ್. ಆಚಾರ್ಯರವರಿಗಿತ್ತು. ವಿಧಾನ ಪರಿಷತ್ತಿನಲ್ಲಂತು, ಅವರು ಮತ್ತು ದಿ:ಡಾ: ಎಂ.ಆರ್. ತಂಗಾರವರ ಅವರದೊಂದಿಗೆ ಟೀಂ ಇತ್ತು, ಬಹಳ ಉತ್ತಮವಾದ ಡಿಬೇಟ್ ಅನ್ನು ಮಾಡಿದ್ದು ನಮಗೆಲ್ಲಾ ನೆನೆಪಿದೆ. ಅಂಥ ಒಬ್ಬ ಉತ್ತಮ ವಾಗ್ಮಿ, ಉತ್ತಮ ಆಡಳಿತಗಾರರು, ಒಬ್ಬ ಶಾಸಕರು ಯಾವ ರೀತಿ ಇರಬೇಕೆನ್ನುವುದಕ್ಕೆ ಮಾರ್ಗದರ್ಶಕರಾಗಿದ್ದವರು, ತಾಳ್ಮೆ ಇಟ್ಟುಕೊಂಡು ಹೋದಂಥವರು ಮತ್ತು ಯಾವುದೇ ಒಂದು ಪೊಸಿಷನ್ ಇರಲಿ ಅದಕ್ಕೆ ರೆಸ್ಪೆಕ್ಟ್ ಕೊಟ್ಟಂಥವರು ಡಾ: ವಿ.ಎಸ್. ಆಚಾರ್ಯರವರು. ನಾನು ರಾಜ್ಯ ಬಿಜೆಪಿ ಅಧ್ಯಕ್ಷನಾಗಿದ್ದೆ, ಅವರು ಹಿರಿಯರು, ಹಿಂದೆ ಜನ ಸಂಘ ಕಾಲ ದಿಂದಲೂ 24 ವರ್ಷ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂಥವರು. ನಾನು ರಾಜ್ಯಾಧ್ಯಕ್ಷನಾದ ಸಂದರ್ಭದಲ್ಲಿ ನನ್ನದು ಕಿರಿಯ ವಯಸ್ಸು, ಆಗ ನಾನು ಉಡುಪಿಗೆ ಹೋಗಿದ್ದೆ, ನಾನು ಎಲ್ಲಿ ಉಡುಪಿನಲ್ಲಿ ಎಂಟ್ರಿಯಾಗುತ್ತಿದ್ದೆ ಅಲ್ಲಿಯವರೆಗೆ ಸ್ವತಃ ಬಂದು ನನ್ನನ್ನು ರಿಸಿವ್ ಮಾಡಿ ಕೊಂಡು ಕರೆದುಕೊಂಡು ಹೋದರು. ನೀವು ಹಿರಿಯರಿದ್ದೀರಿ, ಕಚೇರಿಯಲ್ಲಿ ಕುಳಿತಿದ್ರೆ, ನಾನು ಅಲ್ಲಿಗೆ ಬರುತ್ತಿದ್ದೆ, ಇಲ್ಲಿಯವರೆಗೆ ನೀವು ಏತಕ್ಕೆ ಬಂದಿರಿ, ನಿಮ್ಮ ಪದಾಧಿಕಾರಿಗಳನ್ನು ಕಳುಹಿಸಬಹುದಾಗಿತ್ತಲ್ಲ ಎಂದು ಹೇಳಿದೆ. ಇಲ್ಲ, ಇಲ್ಲ, ರಾಜ್ಯ ಬಿಜೆಪಿ ಅಧ್ಯಕ್ಷರು ಬಂದಿದ್ದಾರೆಂದರೆ, ನೀವು ಎಲ್ಲರಿಗಿಂತ ದೊಡ್ಡವರು, ನಿಮ್ಮ ಪೊಸಿಷನ್‌ಗೆ ನಾನು ಮಹತ್ವ ಕೊಡುತ್ತಿದ್ದೇನೆ, ಅದಕ್ಕಾಗಿ ಸ್ವತಃ ನಾನು ಬಾರ್ಡರ್‌ಗೆ ಬಂದು ನಿಮ್ಮನ್ನು ರಿಸಿವ್ ಮಾಡಿಕೊಂಡು ಹೋಗುತ್ತಿದ್ದೇನೆಂದು, ಆ ಗೌರವ ತೋರಿಸುವಂಥ ಸೌಜನ್ಯತೆ ಇದೆಯಲ್ಲಾ, ಬಹುಶಃ ಯಾರಿಗೂ ಬರುವುದಕ್ಕೆ ಸಾಧ್ಯವಿಲ್ಲ, ಆ ಸಿನಿಯಾರಿಟಿ

ಇದ್ದಂಥವರಿಗೆ ಬರುವುದಕ್ಕೆ ಸಾಧ್ಯವಿಲ್ಲ, ಅಂಥ ವ್ಯಕ್ತಿತ್ವ ಡಾ: ವಿ.ಎಸ್. ಆಚಾರ್ಯರವರದು. ಹೀಗಾಗಿ ಅವರು ನಮಗೆ ಆದರ್ಶವಾಗಿದ್ದಾರೆ. ಕಳೆದ ಅಧಿವೇಶನದಲ್ಲೇ ನಾವೆಲ್ಲಾ ಜೊತೆಗೆ ಕೆಲಸ ಮಾಡಿದ್ದೇವೆ, ಬಹಳಷ್ಟು ವಿಷಯಗಳಿಗೆ ಅವರು ಇಲ್ಲಿ ಕುಳಿತು ಉತ್ತರವನ್ನು ಹೇಳಿದ್ದಾರೆ. ಅವರು ಅನಾರೋಗ್ಯವಿದ್ದಾಗಲೂ ಸಹ ಇಲ್ಲಿ ಬಂದು ಉತ್ತರ ನೀಡುವ ಉತ್ಸಾಹ, ಇಲ್ಲಿ ಕೇಳುವುದು, Public grievance ಕೇಳುವುದು, ಇದು ಬಹಳ ಜನರಿಗೆ ಸಾಧ್ಯವಿಲ್ಲ. ಅಂಥ ವ್ಯಕ್ತಿತ್ವವಿದ್ದ ಡಾ: ವಿ.ಎಸ್. ಆಚಾರ್ಯರವರು ಇಷ್ಟು ಬೇಗ ನಮ್ಮನ್ನಗಲಿ ಹೋಗುತ್ತಾರೆಂದು ನಾವು ಕಲ್ಪನೆ ಮಾಡಿರಲಿಲ್ಲ. ಅದರಿಂದ ಇವತ್ತು ಭಾರತೀಯ ಜನತಾ ಪಾರ್ಟಿಗೆ ನಷ್ಟ ಮಾತ್ರವಲ್ಲ, ಇಡೀ ನಮ್ಮ ರಾಜ್ಯಕ್ಕೆ ಇವತ್ತು ನಷ್ಟವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಹೀಗಾಗಿ ಡಾ: ವಿ.ಎಸ್.ಆಚಾರ್ಯರವರ ಆತ್ಮಕ್ಕೆ ಶಾಂತಿಯನ್ನು ಕೋರಿ, ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಹಿರಿಯ ರಾಜಕಾರಣಿಗಳು, ನಾಯಕರಾಗಿದ್ದಂಥ, ಸಚಿವರೂ ಕೂಡ ಆಗಿದ್ದಂಥ ಡಾ: ವಿ.ಎಸ್. ಆಚಾರ್ಯರವರ ಅಕಾಲಿಕ ನಿಧನದ ಸಂತಾಪ ನಿರ್ಣಯದ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸುದೀರ್ಘವಾಗಿ ತಮ್ಮ 10–20 ವರ್ಷಗಳ ರಾಜಕೀಯ ಒಡನಾಟ, ಮಾರ್ಗದರ್ಶನ ಮತ್ತು ರಾಜಕೀಯದಲ್ಲಿ ಬಹಳ ಪ್ರೇರೆಪಣೆ ಯಾಗಿದ್ದಂಥ ಡಾ: ವಿ.ಎಸ್. ಆಚಾರ್ಯರವರ ಬಗ್ಗೆ ಅವರು ತಮ್ಮ ಸಂತಾಪ ಸೂಚಕವನ್ನು ವ್ಯಕ್ತಪಡಿಸಿದ್ದಾರೆ, ವಿರೋಧ ಪಕ್ಷದ ನಾಯಕರೂ ಕೂಡ ಈಗಾಗಲೇ ಮಾತನಾಡಿದ್ದಾರೆ. ಸಿ.ಟಿ. ರವಿಯವರು ಹೇಳಿದಂತೆ ಡಾ: ವಿ.ಎಸ್. ಆಚಾರ್ಯರವರು ಒಬ್ಬ ಸಾತ್ವಿಕ ರಾಜಕಾರಣಿ. ನಾನು ಕಳೆದ 4 ವರ್ಷಗಳಿಂದಲೂ ಈ ಸದನದಲ್ಲಿ ನೋಡುತ್ತಿದ್ದೇನೆ. ಅವರು ಯಾವುದೇ ಸಮಯದಲ್ಲಿ ಉದ್ವೇಗಕ್ಕೆ ಒಳಗಾಗುತ್ತಿರಲಿಲ್ಲ, ಕೋಪವಿರಲಿಲ್ಲ, ಸಿಟ್ಟು ಇರಲಿಲ್ಲ, ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಳ್ಳುತ್ತಿದ್ದರು. ನಮ್ಮ ಪ್ರಜಾ ಪ್ರಭುತ್ವದಲ್ಲಿ ಯಾವ ರೀತಿಯಾಗಿ ಒಂದು ಸಮತೋಲನವನ್ನು ಕಾಪಾಡಿಕೊಳ್ಳ

ಬೇಕೆನ್ನುವುದನ್ನು ಅವರು ಬಹಳ ಬುದ್ಧಿವಂತಿಕೆಯಿಂದ ಸದನದಲ್ಲಿ ನಡೆದು ಕೊಳ್ಳುವುದರ ಮೂಲಕ ಕಾಣಬಹುದಾಗಿತ್ತು. ವಿಶೇಷವಾಗಿ ಡಾ: ವಿ.ಎಸ್. ಆಚಾರ್ಯರವರು ನನ್ನ ನೆನಪಿನಲ್ಲಿ, 1977 ರಲ್ಲಿ ಜನತಾ ಪಕ್ಷದಿಂದ ನಾವು ಪಾರ್ಲಿಮೆಂಟಿಗೆ ಕಾಂಟೆಸ್ಟ್ ಮಾಡಿದ್ದೆವು. ಅವರು ಉಡುಪಿಗೆ ನಿಂತಿದ್ದರು, ನಾನು ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ನಿಂತಿದ್ದೆ. ಅವರು ನನಗೆ ಬಹಳ ಆತ್ಮೀಯವಾಗಿದ್ದವರು, ಬಹಳ ಒಡನಾಟವನ್ನು ಇಟ್ಟುಕೊಂಡಿದ್ದವರು. ಅವರು 1967 ರಲ್ಲಿ ಪಂಡಿತ್ ದೀನ ದಯಾಳ ಉಪಾಧ್ಯರಿಂದ ಸ್ಫೂರ್ತಿ ಪಡೆದು ರಾಜಕೀಯವನ್ನು ಪ್ರವೇಶ ಮಾಡಿದವರು. ಅದಕ್ಕಿಂತಲೂ ಹಿಂದೆ ಸಂಘದಿಂದ ಅವರಿಗೆ ಸಂಸ್ಕಾರ ಕೂಡ ಆಗಿತ್ತು. 1968 ರಲ್ಲೇ ಅವರು ಉಡುಪಿ ಪುರಸಭಾ ಅಧ್ಯಕ್ಷರಾದರು. ಎರಡು ಸಾರಿ ಉಡುಪಿ ಪುರಸಭಾ ಅಧ್ಯಕ್ಷರಾಗಿದ್ದರು, ಅವತ್ತು ಭಾರತೀಯ ಜನಸಂಘ ಇಡೀ ಕರ್ನಾಟಕದಲ್ಲಿ ಉಡುಪಿಯಲ್ಲೇ ಎದ್ದು ಕಾಣುತ್ತಿದ್ದದ್ದು, ಇನ್ನು ಗ್ರಾಮೀಣ ಪ್ರದೇಶದಲ್ಲೆಲ್ಲೂ ಅಷ್ಟು ಜನಸಂಘ ಬೆಳೆದಿರಲಿಲ್ಲ, ಬೆಂಬಲವೂ ಇರಲಿಲ್ಲ, ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಒಂದು ಪಕ್ಷವಾಗಿತ್ತು, ಉಡುಪಿಯಲ್ಲಿ ಬಹುಮತ ಪಡೆದಿದ್ದಕ್ಕೆ ಅವತ್ತು ಆಶ್ಚರ್ಯವಾಯಿತು. ಏಕೆಂದರೆ 1968ರಲ್ಲಿ undivided Congress ಇದ್ದದ್ದು, ಇನ್ನು ಕಾಂಗ್ರೆಸ್ ಇಭ್ಭಾಗವಾಗಿರಲಿಲ್ಲ, ದೊಡ್ಡ ರಾಷ್ಟ್ರೀಯ ಪಕ್ಷವಾಗಿ ಅವತ್ತು ಇದ್ದಂಥ ಸಂದರ್ಭದಲ್ಲಿ ಜನಸಂಘದಿಂದ ಜನಸಂಘದಿಂದ ಬಹುಮತ ಗಳಿಸಿ ಪುರಸಭೆ ಅಧ್ಯಕ್ಷರಾದದ್ದು ಮತ್ತು ಒಬ್ಬ ಅಧ್ಯಕ್ಷರಾಗಿ ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂದು ಮಾದರಿಯನ್ನಿಟ್ಟಿದ್ದಾರೆ. ಆಡಳಿತ ನಡೆಸುವ ಸರ್ಕಾರದವರು ಮೆಚ್ಚತಕ್ಕ ರೀತಿಯಲ್ಲಿ ಅವರು 1967 ರಲ್ಲಿ ಉಡುಪಿ ಪುರಸಭಾ ಅಧ್ಯಕ್ಷರಾಗಿ ಮಲ ಹೊರುವುದನ್ನು ನಿಷೇಧ ಮಾಡಿದರು ಅಥವಾ ಕುಡಿಯುವ ನೀರಿನ ಸೌಲಭ್ಯ ಕೊಡುವ ರೀತಿಯಲ್ಲಿ ಕೆಲಸ ಮಾಡಿದರು. ಇನ್ನು ಕೂಡ ತಾವು ಕುಳಿತಿದ್ದೀರಿ, ಶೆಟ್ಟರ್ ಅವರು ಕೂಡ ಇಲ್ಲಿದ್ದಾರೆ. ಏಕೆಂದರೆ, 1967ರಲ್ಲಿ ಭಾರತೀಯ ಜನಸಂಘ ಬಂದ ಮೊಟ್ಟ ಮೊದಲಿಗೆ ಈ ಸದನಕ್ಕೆ 4 ಸದಸ್ಯರು ಆಯ್ಕೆಯಾದರು, ಅಲ್ಲಿಯವರೆಗೆ 1952, 1957, 1962 ರಲ್ಲಿ ಜನಸಂಘದಿಂದ ಒಬ್ಬರೂ ಆಯ್ಕೆ ಯಾಗಿರಲಿಲ್ಲ. ಆಯ್ಕೆಯಾದವರಲ್ಲಿ ಕಾರ್ಕಳದಿಂದ ಗುಳರಘುರಾಂ ಶೆಟ್ಟಿ 1967ರಲ್ಲಿ ಆಯ್ಕೆಯಾಗಿದ್ದರು, ಇವರ ಪಕ್ಕದ ಕ್ಷೇತ್ರದವರು, ಹಾಗಾಗಿ ಜನಸಂಘ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದವರು. ತಮ್ಮ ಸಂಬಂಧಿ ಕರಾದ ಎಸ್. ಆರ್. ಶೆಟ್ಟಿಯ 1967ರಲ್ಲಿ ಹುಬ್ಬಳ್ಳಿಯಿಂದ ಆಯ್ಕೆಯಾಗಿದ್ದರು.

ಅದೇ ರೀತಿ ಸ್ಪೀಕರ್ ಅವರು ಪ್ರತಿನಿಧಿಸುವಂಥ ವಿರಾಜಪೇಟೆ ಕ್ಷೇತ್ರ, 1967 ರಲ್ಲೇ ಲೋಕಯ್ಯ ನಾಯಕ್ ಎನ್ನುವವರು ಜನಸಂಘದಿಂದ ಆಯ್ಕೆಯಾಗಿದ್ದರು. ಇನ್ನೊಬ್ಬರು ಬೀದರ್‌ನಿಂದ ಚಂದ್ರಕಾಂತ ಸಿಂದೋಳ್ ಎನ್ನುವವರು ಆಯ್ಕೆಯಾಗಿದ್ದರು ಹೀಗೆ ನಾಲ್ಕೇ ಜನರು ಅವತ್ತು ಆಯ್ಕೆಯಾಗಿ ಬಂದಂಥವರು. ನಾನು ಏಕೆ ಹೇಳುತ್ತಿದ್ದೇನೆಂದರೆ, ಡಾ: ವಿ.ಎಸ್. ಆಚಾರ್ಯರವರು ಕೂಡ ಅವರು ಪಕ್ಕದ ಕಾರ್ಕಳದ ಉಡುಪಿಯಲ್ಲಿ, ಅವತ್ತು ಜನಸಂಘದ ಒಂದು ಸಂಘಟನೆಯಲ್ಲಿ ತೊಡಗಿಸಿಕೊಂಡಿದಂಥವರು ಕೂಡ, ಆ ಕಾಲದಲ್ಲಿ ಕಾರ್ಕಳದಿಂದಲೂ ಅವರು ಆಯ್ಕೆಯಾಗುವಂಥ ರೀತಿಯಲ್ಲಿ ಜನಸಂಘದಲ್ಲಿ ತೊಡಗಿಸಿಕೊಂಡಿದ್ದರು. ನಾವು ಅವರಲ್ಲಿ ತುಂಬಾ ಇಷ್ಟಪಡುವುದು, ಸಾತ್ವಿಕ ರಾಜಕಾರಣಿಯಾಗಿ. ನಿಜ, ನಾವು ತಾತ್ವಿಕವಾಗಿ ಸೈದ್ಧಾಂತಿಕವಾಗಿ ಬೇರೆ ಬೇರೆಯಾಗಿರುತ್ತೇವೆ. ನಾನು ಬಹಳ ಸೂಕ್ಷ್ಮವಾಗಿ ಡಾ: ವಿ.ಎಸ್. ಆಚಾರ್ಯರವರನ್ನು ನೋಡಿದಂಥ ಸಂದರ್ಭದಲ್ಲಿ Political enmity ಬೇರೆ ಬೇರೆ ಪಕ್ಷದಲ್ಲಿ ಇರಲಿ, ತಮ್ಮ ಪಾರ್ಟಿನಲ್ಲಿ ಜ್ವಾಲಾಮುಖಿ ಬುಗಿಲೆದ್ದಿದೆ ಎನ್ನುವುದನ್ನು ಯೋಚನೆ ಮಾಡಿದರೆ ಆಚಾರ್ಯರು ಮುಂದೆ ಬರಬೇಕಾಗಿತ್ತು. ನಿಜ ಆಚಾರ್ಯರು ಅವರು ನಂಬಿದಂಥ ಒಂದು ಸಿದ್ಧಾಂತ, ಒಂದು ತಾತ್ವಿಕ ನೆಲೆಗಟ್ಟಿನ ಮೇಲೆ ರಾಜಕೀಯ ಮಾಡಿಕೊಂಡು ಬಂದಂಥವರು. ಅವರು ಕೊನೆಯವರೆಗೂ ಕೂಡ ಹಿಂದುತ್ವದ ಸ್ಟೀಲ್ ಫ್ರೇಂನಿಂದ ಹೊರಗೆ ಬರಲೇ ಇಲ್ಲ, ನಂಬಿಕೆ ಇಟ್ಟಿದಂಥವರು, ಆ ಸ್ಟೀಲ್ ಫ್ರೇಂನಿಂದ ಹೊರಗೆ ಬರಲಿಲ್ಲ. ಹಾಗಾಗಿ ನಾವು ತಾತ್ವಿಕವಾಗಿ ಆ ಹಿಂದುತ್ವ ಅಥವಾ ಹಿಂದುಯಿಸಂ ಅನ್ನು ತಾತ್ವಿಕ ಒಂದು ನೆಲೆಗಟ್ಟನ್ನು ಕಳೆದುಕೊಂಡ ಮೇಲೆ ಬಂದಂಥ ಒಂದು ರಾಜಕೀಯ ಪಕ್ಷದ ಸಿದ್ಧಾಂತವನ್ನು ವಿರೋಧ ಮಾಡಬಹುದಾಗಿತ್ತು, ಅರ್ಥತ್ we are not political enemies, but we are political opponents ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಶತೃಗಳಲ್ಲ, ಶತೃತ್ವಕ್ಕೆ ಅವಕಾಶವೇ ಕೊಡಬಾರದು, ತಾತ್ವಿವಾದ, ಸೈದ್ಧಾಂತಿ ನೆಲೆಗಟ್ಟಿನ ಮೇಲೆ ನಾವು ರಾಜಕೀಯ ವಿರೋಧಿಗಳಾಗಿದ್ದಂತವರು. ಪರಸ್ಪರ ಸೈದ್ಧಂತಿಕ ನೆಲೆಗಟ್ಟಿನ ಮೇಲೆ ನಮ್ಮ ಭಿನ್ನಾಭಿಪ್ರಾಯಗಳನ್ನು ನಮ್ಮ ಪರ ಮತ್ತು ವಿರೋಧಗಳನ್ನು ವ್ಯಕ್ತಪಡಿಸುವುದು ಇರುವುದು. ಹಾಗಾಗಿ ಇವತ್ತು ಡಾ: ವಿ.ಎಸ್. ಆಚಾರ್ಯರನ್ನು ನೋಡಿದಾಗ ಆ ಎನಿಮಿಟಿ, ಶತೃತ್ವ ಎನ್ನುವುದೇ ಬರಬಾರದು.

ಬಹುಶಃ ಆ ನೆಲೆಗಟ್ಟಿನ ಮೇಲೆ ತಮ್ಮ ಜೀವವನ್ನೆ ಸವೆಸಿದಂಥ ಪಕ್ಷದಲ್ಲಿ ಇವತ್ತು ಏನಾಗಿದೆ ಎನ್ನುವುದರಿಂದ ಮನಸ್ಸಿಗೆ ತುಂಬಾ ನೋವಾಗುತ್ತದೆ. ಸಂತಾಪ ಸೂಚಕ ನಿರ್ಣಯ ಸಂದರ್ಭದಲ್ಲಿ ತಮ್ಮ 45 ವರ್ಷಗಳ ಸುದೀರ್ಘ ರಾಜಕೀಯದಲ್ಲಿ ಜನತಾ ಪಕ್ಷದಲ್ಲೂ ಪ್ರಮುಖವಾಗಿದ್ದಂಥವರು. ಜನಸಂಘ ವಿಲೀನವಾಗಿ ಜನತಾ ಪಕ್ಷದ ಮೇಲೆ 1979 ರಲ್ಲಿ ಅದೂ ಒಡೆದ ಮೇಲೆ 1979ರಲ್ಲಿ ಬಿಜೆಪಿಯಾದಾಗ ಕರ್ನಾಟಕದಲ್ಲಿ ಬಿಜೆಪಿಯ ಸಂಘಟನೆಯ ಜವಾಬ್ದಾರಿಯನ್ನು ಹೊತ್ತಿದ್ದಂಥವರು ಅವರಾಗಿದ್ದರು. ಅದಾದ ಮೇಲೆ ರಾಜಕೀಯ ಬೆಳವಣಿಗೆಗಳು ಬಿಜೆಪಿಯಲ್ಲಿ ಬೆಳೆದುಕೊಂಡು ಬಂದಿರುವುದು 1978 ರಲ್ಲೂ ಕೂಡ ಅವರು ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದರು. 1972 ರಲ್ಲಿ ಪಾರ್ಲಿಮೆಂಟು ಚುನಾವಣೆಯಲ್ಲಿ ಸೋತಿದ್ದರು ಕೂಡ, 1978 ರಲ್ಲೂ ಕೂಡ ಅವರು ಅಸೆಂಬ್ಲಿಗೆ ಆಯ್ಕೆಯಾಗುವುದಕ್ಕಾಗಲಿಲ್ಲ. ಆದರೆ ಅವರು 1983 ರಲ್ಲಿ ಈ ಸದನದ ಸದಸ್ಯರಾಗಿದ್ದಂಥವರು, ಶಾಸಕಾಂಗ ಪಕ್ಷದ ನಾಯಕರಾಗಿದ್ದವರು, ಅವರು ಯಾವುದೇ ಪಕ್ಷಕ್ಕೆ ಬಹುಮತವಿರಲಿಲ್ಲ. 1983 ರಲ್ಲಿ ಕಾಂಗ್ರೆಸ್ ಪಕ್ಷ ಮೊಟ್ಟ ಮೊದಲಿಗೆ ಈ ರಾಜ್ಯದಲ್ಲಿ ಅಧಿಕಾರವನ್ನು ಕಳೆದುಕೊಂಡಿತು. ಅವರು ಕ್ರಾಂತಿರಂಗ ಮತ್ತು ಜನತಾ ಪಕ್ಷ, ಇತರೆ ಪಕ್ಷಗಳು ಸೇರಿ, ಸಿದ್ದರಾಮಯ್ಯನವರು ಕೂಡ ಪಕ್ಷೇತರಾಗಿ ಆಯ್ಕೆಯಾಗಿ ಬಂದಂತವರು, ರಾಮಕೃಷ್ಣ ಹೆಗಡೆಯವರು ಸರ್ಕಾರ ರಚನೆ ಮಾಡುವುದಕ್ಕೆ ಅವರು ಬೆಂಬಲವನ್ನು ಕೊಟ್ಟಿದ್ದಂಥವರು. ಅದರಲ್ಲಿ ಬಹಳ ಪ್ರಮುಖ ಪಾತ್ರ ವಹಿಸಿದವರು, 18 ಜನ ಬಿಜೆಪಿ ಸದಸ್ಯರು ಆಯ್ಕೆಯಾದವರು unconditional support, ಬೇಷರಾತ್ ಬೆಂಬಲವನ್ನು ಕೊಟ್ಟು, ಅವತ್ತು ಕಾಂಗ್ರೆಸೇತರ ಒಂದು ಸರ್ಕಾರವನ್ನು ರಚನೆ ಮಾಡುವಲ್ಲಿ ಪ್ರಮುಖವಾದ ರೀತಿಯಲ್ಲಿ ಒಂದು ಜವಾಬ್ದಾರಿಯನ್ನು ನಿರ್ವಹಿಸಿದ್ದಂಥವರಲ್ಲಿ ಡಾ: ವಿ.ಎಸ್. ಆಚಾರ್ಯರವರು ಕೂಡ ಒಬ್ಬರಾಗಿದ್ದರು. ಹಾಗಾಗಿ ಯಾವ ಒಂದು ಸಿದ್ಧಾಂತ, ತತ್ವ ನೆಲೆಗಟ್ಟಿನ ಮೇಲೆ ಒಬ್ಬ ಸಾತ್ವಿಕ ರಾಜಕಾರಣಿಯಾಗಿ, ಪ್ರಾಮಾಣಿಕ ರಾಜಕಾರಣಿಯಾಗಿ ನಮ್ಮೆಲ್ಲರ ನೆನಪಿನಲ್ಲಿ ಉಳಿಯುವಂಥ ಒಬ್ಬ ರಾಜಕಾರಣಿ ಡಾ: ವಿ.ಎಸ್. ಆಚಾರ್ಯರವರು. ಅಂಥವರು ಕಟ್ಟಿ, ಸಂಘಟನೆ ಮಾಡಿ ಬೆಳೆಸಿದಂಥ ಒಂದು ಪಕ್ಷ 45 ವರ್ಷಗಳಲ್ಲಿ ತಮ್ಮ ಜೀವವನ್ನೆ ಸವೆಸಿದಂಥ ಕರ್ನಾಟಕ ರಾಜಕೀಯದಲ್ಲಿ ಏನಾಗುತ್ತಿದೆ? ಅವರ ಕನಸು ನನಸಾಗತಕ್ಕಂಥ ಕಾಲದಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗುತ್ತಿದೆ ನೋಡಿ. ನಾನು ನಿಮ್ಮ ಸ್ನೇಹಿತರಿಗೆ ಹೇಳುತ್ತಿದ್ದೆ, ಇವತ್ತು ಮಾನ್ಯ

ಆಚಾರ್ಯರವರು ಬದುಕಿದಿದ್ದಿರೆ ಏನಾಗುತ್ತಿತ್ತೆಂದು ಹೇಳುತ್ತಿದ್ದೆ. ಎಲ್ಲರ ಕಣ್ಣೆದುರಿನಲ್ಲಿಯೇ ಇವತ್ತು ನಡೆಯುತ್ತಿರತಕ್ಕಂಥ ರಾಜಕೀಯ ಬೆಳವಣಿಗೆಗಳೇನಿವೆ, ಅದರ ಬಗ್ಗೆ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಎಂಥ ಪರಿಸ್ಥಿತಿ ಬಂದಿದೆ ನೋಡಿ. ಎಲ್ಲಿಯೂ enmity ಇರಬಾರದು, ಶತ್ರುತ್ವವೇ ಇರಬಾರದು, ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಬಹಳ ಮುಖ್ಯವಾಗಿ ನಾನು ವಿ.ಎಸ್. ಆಚಾರ್ಯರವರಿಗೆ ಸಹಕಾರ ಕೊಡುತ್ತಿದ್ದೇನೆಂದರೆ, ಅವರು ಹಿಂದುತ್ವದ ಬಗ್ಗೆ ಹೇಳುತ್ತಿದ್ದ ಮಾತುಗಳು. ಏಕೆಂದರೆ, ಹಿಂದೆ ಸದನದಲ್ಲಿ ಹಿಂದು ಧಾರ್ಮಿಕ ದತ್ತಿ ವಿಧೇಯಕಕ್ಕೆ ತಿದ್ದುಪಡಿ ತಂದಾಗ, ಆ ವಿಚಾರದಲ್ಲಿ ತಮ್ಮ ಅನುಮತಿ ಪಡೆದು ಚರ್ಚೆ ಮಾಡುವಂಥ ಸಂದರ್ಭದಲ್ಲಿ ನಾನು ಮಡೆ ಸ್ನಾನದ ಬಗ್ಗೆ ಬಹಳ ಖಾರವಾಗಿಯೇ ಮಾತನಾಡಿದೆ. ಆದರೂ ಕೂಡ ಮಾನ್ಯ ಆಚಾರ್ಯರು ಸಿಟ್ಟು ಮಾಡಿಕೊಳ್ಳಲಿಲ್ಲ. ಅಂದು ಹಿಂದು ಧಾರ್ಮಿಕ ದತ್ತಿ ವಿಧೇಯಕವನ್ನು ಒಂದು ಮತದಿಂದ ಬೀಳಿಸಿದೆವು. ಆದರೂ ಕೂಡ ಅವರು ಯಾವುದೇ ರೀತಿಯಲ್ಲಿಯೂ ಬೇಜಾರು ಮಾಡಿಕೊಳ್ಳಲಿಲ್ಲ. ಇದೇ ವಿಧೇಯಕವನ್ನು ಮತ್ತೊಂದು ಸಾರಿ ಸದನದಲ್ಲಿ ಮಂಡಿಸಿದ ಮೇಲೆ ನಾವೆಲ್ಲರೂ ಕೂಡ ಆ ವಿಧೇಯಕಕ್ಕೆ ಬೆಂಬಲವನ್ನು ಕೊಟ್ಟೆವು. ಇನ್ನೂ ಕೂಡ ನನ್ನ ನೆನಪಿನಲ್ಲಿದೆ, ಮಡೆ ಸ್ನಾನದ ಬಗ್ಗೆ ನಾವೆಲ್ಲರೂ ಕೂಡ ಬಹಳ ಖಾರವಾಗಿ ಮಾತನಾಡಿದರೂ ಕೂಡ ಅದರ ಬಗ್ಗೆ ಬೇಜಾರು ಮಾಡಿಕೊಳ್ಳದೆ, ವಿಚಾರದ ಬಗ್ಗೆ ಟ್ಯಾಕಲ್ ಮಾಡದೆ ನಮ್ಮೆಲ್ಲರಿಗೂ convince ಆಗುವ ರೀತಿಯಲ್ಲಿ ಯಾವ ರೀತಿಯಾಗಿ ಉತ್ತರವನ್ನು ಕೊಟ್ಟರು ಎಂಬುದು ಇನ್ನೂ ಕೂಡ ನನ್ನ ನೆನಪಿನಲ್ಲಿದೆ. ಅದಾದ ಮೇಲೆ ಮಡೆ ಸ್ನಾನದ ಬಗ್ಗೆ ಯಾವ ರೀತಿಯಾಗಿ ಕಾರ್ಯವನ್ನು ಮಾಡಬೇಕು, ಈ ಮಡೆಸ್ನಾನ ಯಾವ ರೀತಿಯಾಗಿ ಬಂದಿದೆ, ಅದಕ್ಕೆ ನಾವು ಕಾರಣವೋ ಅಥವಾ ಯಾರು ಕಾರಣರು, ಈ ರೀತಿಯಾದ ಒಂದು ಅಮಾನುಷವಾದ ಪದ್ಧತಿ ಬಂದಿರುವುದಕ್ಕೆ ಏನು ಕಾರಣ, ಇದನ್ನು ಯಾವ ರೀತಿಯಾಗಿ ನಿಲ್ಲಿಸಬೇಕು ಎಂಬ ಬಗ್ಗೆ ತುಂಬಾ ಚೆನ್ನಾಗಿ ಮಾರ್ಮಿಕವಾಗಿ ನಮ್ಮಗೆಲ್ಲರಿಗೂ convince ಆಗುವ ಹಾಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಆದುದರಿಂದ ಹಿಂದೆ ಸದನದಲ್ಲಿ ಈ ವಿಚಾರದ ಚರ್ಚೆಯ ಸಂದರ್ಭದಲ್ಲಿ ಅವರು ಭಾಗವಹಿಸಿ ಮಾತನಾಡಿರುವುದು ನನಗೆ ಇನ್ನೂ ಕೂಡ ನೆನಪಿನಲ್ಲಿದೆ. ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಭಾರತೀಯ

ಜನತಾ ಪಕ್ಷದ ಒಬ್ಬ ಮುಖಂಡರಾಗಿ, ಹಿರಿಯ ನಾಯಕರಾಗಿ, ಮಾರ್ಗ ದರ್ಶಕರಾಗಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ನಾವೆಲ್ಲರೂ ಕೂಡ ಅನುಕರಣೆ ಮಾಡಬಹುದಾದಂಥ ಒಬ್ಬ ರಾಜಕಾರಣಿಯಾಗಿದ್ದರು, ಮುಖಂಡರಾಗಿದ್ದರು. ಇಂಥವರು ಅಕಾಲಿಕ ಮರಣವನ್ನು ಹೊಂದಿದ್ದಾರೆ. ಅವರ ಆರೋಗ್ಯ ಸರಿ ಇಲ್ಲದಿದ್ದರೂ ಕೂಡ ಅವರು ಇನ್ನೂ ಹೆಚ್ಚು ದಿನ ರಾಜಕೀಯವಾಗಿ ಸಕ್ರಿಯವಾಗಿ ಇಂಥ ಕಾಲದಲ್ಲಿ ತಮಗೆಲ್ಲರಿಗೂ ಹೆಚ್ಚು ಮಾರ್ಗದರ್ಶನವನ್ನು ಕೊಡುತ್ತಿದ್ದರು ಎಂಬುದನ್ನು ಎಲ್ಲರೂ ನಿರೀಕ್ಷಿಸು ತ್ತಿದ್ದರು. ಆದರೆ ನಾವು ಹೇಳುವ ಹಾಗೆ ಹುಟ್ಟು ಆಕಸ್ಮಿಕ, ಆದರೆ ಸಾವು ನಿಶ್ಚಿತ. Birth is an accident, but death is certain ಎಂದು ಹೇಳುತ್ತೇವೆ. ನಾವು ಹುಟ್ಟಿದ ದಿನವೇ ಸಾವು ಯಾವಾಗಲಾದರು ಬರುತ್ತದೆ ಎಂಬುದು ಗೊತ್ತಿರುತ್ತದೆ. ಆದರೆ ಅದು ಯಾವಾಗ ಬರುತ್ತದೆ, ಯಾವ ರೂಪದಲ್ಲಿ ಬರುತ್ತದೆ ಎಂಬುದು ಯಾರಿಗೂ ತಿಳಿದಿರುವುದಿಲ್ಲ. ಆದರೆ ಆ ಹುಟ್ಟು ಮತ್ತು ಸಾವಿನ ನಡುವೆ ನಾವು ಮಾಡತಕ್ಕಂಥ ಕಾರ್ಯಗಳು, ನಮ್ಮ ಚಿಂತನೆಗಳು, ನಮ್ಮ ಸಾಧನೆಗಳು, ನಮ್ಮ ಕೊಡುಗೆಗಳೇನಿರುತ್ತವೆಯೋ ಅವುಗಳೇ ಬಹಳ ಮುಖ್ಯವಾಗಿರತಕ್ಕಂಥವುಗಳು. ಆ ರೀತಿಯಲ್ಲಿ ನಾವು ಯೋಚನೆ ಮಾಡಿದಾಗ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಒಬ್ಬ ಸಾತ್ವಿಕ ರಾಜಕಾರಣಿಯಾಗಿ, ಅವರು ನಂಬಿದ್ದಂಥ ಸಿದ್ಧಾಂತ ತತ್ವಗಳಿಗೆ ಬದ್ಧರಾಗಿ ಕೊನೆಯವರೆಗೂ, ಜೀವಿತದ ಕೊನೆಯ ಉಸಿರಿರುವವರೆಗೂ ಕೂಡ ಆ ತತ್ವ ಸಿದ್ಧಾಂತಗಳನ್ನು ಅನುಸರಿಸಿ ಹೋರಾಟ ಮಾಡಿದ ಸಾತ್ವಿಕ ರಾಜಕಾರಣಿಯಾಗಿದ್ದಂಥ ದಿವಂಗತ ಡಾ: ವಿ.ಎಸ್. ಆಚಾರ್ಯರವರ ಅಕಾಲಿಕ ನಿಧನದಿಂದ ಇವತ್ತು ಕರ್ನಾಟಕ ರಾಜ್ಯದ ರಾಜಕೀಯಕ್ಕೆ ಅಪಾರವಾದಂಥ ನಷ್ಟವಾಗಿದೆ ಮತ್ತು ನಮಗೆಲ್ಲರಿಗೂ ಬಹಳ ನೋವಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಿ ಅಗಲಿದ ಆ ನಾಯಕರಿಗೆ, ಸಾತ್ವಿಕ ರಾಜಕಾರಣಿಗೆ ನನ್ನ ಒಂದು ಅಶ್ರುತರ್ಪಣವನ್ನು ಅರ್ಪಿಸುತ್ತಾ, ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಡಾ: ಆಚಾರ್ಯರವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ ಕೂಡ ಪ್ರವೃತ್ತಿಯಲ್ಲಿ ಬಹಳ ದೊಡ್ಡ ಸಾಂಸ್ಕೃತಿಕ ನಿಧಿಯಾ ಗಿದ್ದರು. ಅಂಥ ವಿ.ಎಸ್. ಆಚಾರ್ಯರವರನ್ನು ನಾವು ಕಳೆದುಕೊಂಡಿದ್ದೇವೆ.

ನಾನು ಸ್ವತಃ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿ ಹೇಳುವುದಕ್ಕೆ ಬಯಸುತ್ತೇನೆ, ಡಾ: ವಿ.ಎಸ್. ಆಚಾರ್ಯರವರಿಗೆ ಇರತಕ್ಕಂಥ ಅಪಾರವಾದಂಥ ಜ್ಞಾನವಿತ್ತು. ಕನ್ನಡ ಸಂಸ್ಕೃತಿ ಬಗ್ಗೆ, ಭಾರತ ದೇಶದ ಸಂಸ್ಕೃತಿ ಬಗ್ಗೆ ಬಹಳ ಆಳವಾದಂಥ ಅಧ್ಯಯನವನ್ನು ಮಾಡಿದ್ದರು. ಅಂಥವರು ಈ ಸರ್ಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದರೆ ಬಹಳ ಯೋಗ್ಯವಾಗಿರುತ್ತಿತ್ತು. ಇದನ್ನು ನಾನು ಬಹಳ ಗೌರವದಿಂದ ಮತ್ತು ಅವರ ಬಗ್ಗೆ ಅಭಿಮಾನದಿಂದ ಹೇಳುವುದಕ್ಕೆ ಬಯಸುತ್ತೇನೆ. ಡಾ: ಆಚಾರ್ಯರವರು ಕೇವಲ ವೈದ್ಯಕೀಯ ವೃತ್ತಿಯನ್ನಷ್ಟೇ ನಂಬಿದಂಥವರಲ್ಲ. ಸಾಮಾಜಿಕ ಕ್ಷೇತ್ರದಲ್ಲಿ ಅವರು ಮಾಡಿರತಕ್ಕಂಥ ಸಾಧನೆ, ಶಿವರಾಮ ಕಾರಂತರವರ ಜೊತೆಯಲ್ಲಿ, ಹು.ಶಿ. ಭಟ್‌ರವರ ಜೊತೆಯಲ್ಲಿ ಸೇರಿ ಯಕ್ಷಗಾನದ ಬಗ್ಗೆ ಬಹಳ ಅಧ್ಯಯನವನ್ನು ಮಾಡಿದ್ದರು. ಘಟ್ಟದ ಮೇಲೆ ಮತ್ತು ಘಟ್ಟದ ಕೆಳಗೆ ಇರತಕ್ಕಂಥ ಯಕ್ಷಗಾನದ ನಾಲ್ಕಾರು ಒತ್ತುಗಳ ಬಗ್ಗೆ ಬಹಳಷ್ಟು ತಿಳಿದುಕೊಂಡಂಥವರಾಗಿದ್ದರು. ಇದಷ್ಟೇ ಅಲ್ಲದೆ, ಸಂಶೋಧನೆ ಮಾಡಿ ಅವುಗಳ ಬಗ್ಗೆ ಸಮಾಜಕ್ಕೆ ತಿಳಿಸಿಕೊಟ್ಟಂಥವ ರಾಗಿದ್ದರು. ಡಾ: ಆಚಾರ್ಯರವರು ಕೇವಲ ಒಬ್ಬ ರಾಜಕಾರಣಿಯಾಗಿ ಕೆಲಸವನ್ನು ಮಾಡಲಿಲ್ಲ. ಡಾ:ಆಚಾರ್ಯರವರು ಸಾರ್ವಜನಿಕರ ಆರೋಗ್ಯದ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಳಷ್ಟು ಪ್ರಬಂಧಗಳನ್ನು ಮಂಡಿಸಿದ್ದರು. ಅಂಥ ಆಚಾರ್ಯರ ಅಗಲಿಕೆಯಿಂದ ಇವತ್ತು ಇಡೀ ರಾಜ್ಯಕ್ಕೆ ತುಂಬಲಾರದಂಥ ನಷ್ಟವಾಗಿದೆ. ಅವರ ಕುಟುಂಬದವರಿಗೆ ಆಗಿರುವಂಥ ನೋವಿನಲ್ಲಿ, ದುಃಖದಲ್ಲಿ ನಾವೆಲ್ಲರೂ ಕೂಡ ಭಾಗಿಯಾಗಿದ್ದೇವೆ. ಡಾ: ಆಚಾರ್ಯರವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೇಶ್ ಭಟ್ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲ ವನ್ನು ನೀಡುತ್ತೇನೆ. ಡಾ: ವಿ.ಎಸ್. ಆಚಾರ್ಯರವರಂಥ ಒಬ್ಬ ಮೇರು ವ್ಯಕ್ತಿತ್ವದ ಮುತ್ಸದ್ಧಿಯನ್ನು ಕಳೆದುಕೊಂಡು ನಾವೆಲ್ಲರೂ ದುಃಖದಲ್ಲಿದ್ದೇವೆಂ ಬುದನ್ನು ಈ ದಿನ ನಾನು ದಾಖಲಿಸುತ್ತಿದ್ದೇನೆ. 1984 ರಲ್ಲಿ ನಾನು ಮಹಾ ನಗರಪಾಲಿಕೆ ಸದಸ್ಯನಾಗಿ ಆಯ್ಕೆಯಾದಂಥ ಸಂದರ್ಭದಲ್ಲಿ, ಬಹುಶಃ ನನಗೆ ಈ ಆಡಳಿತ ವ್ಯವಸ್ಥೆ ಮತ್ತು ಪ್ರತಿ ಪಕ್ಷದವರಿಗಿರಬೇಕಾದ ಜವಾಬ್ದಾರಿಕೆ ಬಗ್ಗೆ

ಬಹಳ ಮಹತ್ವಪೂರಿತವಾದ ಮಾಹಿತಿಗಳನ್ನು ನನಗೆ ನೀಡಿ ಒಂದು ರೀತಿಯಲ್ಲಿ ಉತ್ತಮವಾದ ತರಬೇತಿಯನ್ನು ನೀಡಿದ ಆ ಸಂದರ್ಭಗಳನ್ನು, ಘಟನೆಗಳನ್ನು ಈ ಸಂದರ್ಭದಲ್ಲಿ ಸ್ಮರಣೆ ಮಾಡಿಕೊಳ್ಳುತ್ತಿದ್ದೇನೆ. ಬಹುಶಃ ಎಲ್ಲ ಹಂತಗಳಲ್ಲಿಯೂ ಕೂಡ ಜನಹಿತಾಸಕ್ತಿಯನ್ನು ಕಾಪಾಡುವಂಥ ನಿಟ್ಟಿನಲ್ಲಿ, ಅಭಿವೃದ್ಧಿ ಕೇಂದ್ರೀಕೃತವಾಗಿರತಕ್ಕಂಥ ಯೋಚನೆಗಳು, ಯೋಜನೆ ಗಳನ್ನು ಜಾರಿಗೆ ತರಬೇಕು ಎನ್ನುವಂಥ ನಿಟ್ಟಿನಲ್ಲಿ ಅವರ ಚಿಂತನೆಗಳಿತ್ತು. ಬಹುಶಃ ಮುಂದಕ್ಕೆ ಶಾಸಕನಾಗಿ ಆಯ್ಕೆಯಾದ ನಂತರವೂ ಕೂಡ, ಅದು ಬಜೆಟ್ ಅಧಿವೇಶನದ ಸಂದರ್ಭವಿರಬಹುದು ಅಥವಾ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ನನ್ನ ಟಿಪ್ಪಣಿಗಳೊಟ್ಟಿಗೆ ಬೆಳಗಿನ ಉಪಹಾರಕ್ಕೆ ಅವರ ಜೊತೆಯಲ್ಲಿ ಇರುತ್ತಿದ್ದೆ. ಸಮಗ್ರವಾಗಿ ಅವುಗಳ ಬಗ್ಗೆ ಚಿಂತನೆ ಮಾಡುವಾಗ ಅವರು ಹೇಳುತ್ತಿದ್ದರು, ನೀವು ಕೇವಲ ನಿಮ್ಮ ಕ್ಷೇತ್ರದ ಬಗ್ಗೆ ಮಾತ್ರ ಚಿಂತನೆ ಮಾಡಬೇಡಿ, ಕ್ಷೇತ್ರದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ಜೊತೆಜೊತೆಯಲ್ಲಿಯೇ ರಾಜ್ಯದ ಅಭಿವೃದ್ಧಿ ಬಗ್ಗೆ ಕೂಡ ಚಿಂತನೆ ಮಾಡುವ ನಿಟ್ಟಿನಲ್ಲಿ ನಿಮ್ಮ ದೃಷ್ಟಿಕೋನವನ್ನು ವಿಸ್ತರಿಸಬೇಕು ಎನ್ನುವ ಮಾತನ್ನು ಅವರು ಹೇಳುತ್ತಿದ್ದರು. ನಿಮ್ಮ ಕ್ಷೇತ್ರದ ಬಗ್ಗೆ ಪ್ರಸ್ತಾವನೆಯನ್ನು ಮಾಡಿ, ಆದರೆ ರಾಜ್ಯಕ್ಕೆ ಬೇಕಾಗಿರುವ ವಿಚಾರದಲ್ಲಿ ನಿಮ್ಮ ಕೊಡುಗೆಯನ್ನು ಏನು ಕೊಡಬಲ್ಲಿರಿ ಎನ್ನುವಂಥ ನಿಟ್ಟಿನಲ್ಲಿ ಯಾವ ಯಾವ ಸಲಹೆಗಳನ್ನು ಕೊಡಬಹುದು ಎನ್ನುವ ಬಗ್ಗೆ ಕೂಡ ಸದನದಲ್ಲಿ ಪ್ರಸ್ತಾವನೆಯನ್ನು ಮಾಡಬೇಕು ಮತ್ತು ಅವುಗಳ ಬಗ್ಗೆ ಅಧ್ಯಯನವನ್ನು ಮಾಡಬೇಕು ಎಂದು ಹೇಳುತ್ತಿದ್ದರು. ಇದಲ್ಲದೇ ಯಾವ ಯಾವ ಮಾಹಿತಿಗಳನ್ನು ಸಂಗ್ರಹಣೆ ಮಾಡಿದರೆ ಒಂದು ಅರ್ಥಪೂರ್ಣವಾಗಿ, ಯಶಸ್ವಿಯಾಗಿ ಸದನದಲ್ಲಿ ಪ್ರಸ್ತಾವನೆಯಲ್ಲಿ ನೀವು ಮಾಡಬಲ್ಲಿರಿ. ಇದಕ್ಕಾಗಿ ಪೂರ್ವಭಾವಿಯಾಗಿ ಏನೆಲ್ಲಾ ತಯಾರಿ ಶಾಸಕರಲ್ಲಿ ಆಗಬೇಕು ಎನ್ನುವ ಬಗ್ಗೆ ಹಂತ ಹಂತವಾಗಿ ಅವರು ಕೊಟ್ಟಿರುವಂಥ ಮಾರ್ಗದರ್ಶನವನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತಿದ್ದೇನೆ. ಬಹುಶಃ ಅನೇಕ ರಾಜಕೀಯ ವ್ಯಕ್ತಿಗಳು ಕೇವಲ ಮುಂದಿನ ಚುನಾವಣೆಯಲ್ಲಿ ಗೆಲ್ಲುವ ತನಕ ರಾಜಕೀಯ ಚಿಂತನೆಗಳು ಮತ್ತು ಅದರ ಬಗ್ಗೆ ಚಿಂತನೆಗಳನ್ನು ಮಾಡತಕ್ಕಂಥ ಪ್ರವೃತ್ತಿಯ ಜೊತೆಗೆ ಇಡೀ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆಯನ್ನು ಮಾಡಬೇಕು ಮತ್ತು ಈ ರಾಜ್ಯದ ಅಭಿವೃದ್ಧಿಯಲ್ಲಿ ನಮ್ಮ ಪಾತ್ರವೇನು ಎನ್ನುವಂಥ ನಿಟ್ಟಿನಲ್ಲಿ ತಮ್ಮ ಕ್ಷೇತ್ರದ ಅಭಿವೃದ್ಧಿಯಲ್ಲಿ ವಿಶೇಷವಾದಂಥ ಚಿಂತನೆಯ ಜೊತೆಯಲ್ಲಿ ಅದರ

ಹಿಂದಿರುವಂಥ ಅಧ್ಯಯನ, ಅದರ ಹಿಂದಿರುವಂಥ ಪರಿಶ್ರಮ, ಅದನ್ನು ಅನುಷ್ಠಾನಕ್ಕೆ ತರಬೇಕೆನ್ನುವುದರಲ್ಲಿ ಇರತಕ್ಕಂಥ ಕಳಕಳಿ, ಬಹುಶಃ ಒಬ್ಬ ದಾರ್ಶನಿಕ ವ್ಯಕ್ತಿತ್ವವಿರುವಂಥವರಲ್ಲಿ ಮಾತ್ರ ಇಂಥದ್ದು ಸಾಧ್ಯವಾಗುತ್ತದೆ. ಬಹುಶಃ ಇವತ್ತಿನ ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಈ ರೀತಿ ಇರುವಂತ ಇಬ್ಬ ವ್ಯಕ್ತಿ ಜೀವಂತರಾಗಿದ್ದರು, ಅವರು ಒಳ್ಳೆಯ ಕಾರ್ಯಗಳನ್ನು ಮಾಡಿದರು, ಅವರ ಒಂದು ವಿಶೇಷವಾಗಿರುವಂಥ ಕಾರ್ಯಚಟುವಟಿಕೆ ಎಲ್ಲ ಕ್ಷೇತ್ರಗಳಲ್ಲಿ ಯಾವ ರೀತಿಯಾಗಿ ಅವರು ಕೊಟ್ಟಿದ್ದರು ಎನ್ನುವಂಥದ್ದನ್ನು ಗಮನಿಸಿದಾಗ ನಿಜವಾಗಿಯೂ ಹೃದಯ ತುಂಬಿ ಬರುತ್ತದೆ. ಅವರು ಪಶು ಸಂಗೋಪನಾ ಇಲಾಖೆಯ ಸಚಿವರಾಗಿದ್ದರು. ಅವರು ಸಚಿವರಾಗಿರುವಂಥ ಸಂದರ್ಭದಲ್ಲಿ ಇಲಾಖೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಮತ್ತು ವೈದ್ಯರುಗಳ ಬಡ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಹಲವಾರು ದಶಕಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ಕ್ಲಿಯರ್ ಆಗದೇ ಉಳಿದಿದ್ದಂಥ ಕಡತಗಳು ಇತ್ತು. ಇಂಥ ಕಡತಗಳನ್ನು ತೆಗೆಸಿ ಭ್ರಷ್ಟಾಚಾರಕ್ಕೆ ಯಾವುದೇ ಅವಕಾಶಗಳಾಗದ ರೀತಿಯಲ್ಲಿ ಬಹಳ ಪಾರದರ್ಶಕವಾಗಿ ಬಡ್ತಿ ಕೊಡುವುದಕ್ಕೆ ಮಾಡಿರುವಂಥ ವಿಧಾನಗಳೇನಿವೆ ಅದನ್ನು ಡಾ: ವಿ.ಎಸ್.ಆಚಾರ್ಯರವರು ಮಾಡಿರುವಂಥದ್ದು. ಇವತ್ತಿಗೂ ಕೂಡ ಆ ಇಲಾಖೆಯ ಸಿಬ್ಬಂದಿಗಳು ಅವರ ಕಾರ್ಯವನ್ನು ಶ್ಲಾಘನೆ ಮಾಡುತ್ತಿದ್ದಾರೆ. ಬಹುಶಃ ಅವರು ವೈದ್ಯಕೀಯ ಶಿಕ್ಷಣದ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ಹಲವಾರು ಮೆಡಿಕಲ್ ಕಾಲೇಜುಗಳು ಸಿಗಬೇಕು ಎನ್ನುವಂಥ ಹಿನ್ನಲೆಯಲ್ಲಿ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೂಡ ಮತ್ತು ಪ್ರತಿ ಇಲಾಖೆಯಲ್ಲಿಯೂ ಕೂಡ ತಮ್ಮದೇ ಆಗಿರುವಂಥ ಛಾಪನ್ನು ಮೂಡಿಸಿರುವಂಥ ಒಬ್ಬ ಶ್ರೇಷ್ಟವಾದಂಥ ಒಬ್ಬ ರಾಜಕಾರಣಿಯಾಗಿದ್ದರು. ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಈ ಪ್ರವಾಹಕ್ಕೆ ವಿರುದ್ಧವಾಗಿ ಈಜುವಂತ ಪ್ರವೃತ್ತಿಯನ್ನು ಅವರು ಇಟ್ಟುಕೊಂಡಿದ್ದರು. ಬಹುಶಃ ಈ ಹಿನ್ನೆಲೆಯಲ್ಲಿ ವೈಯಕ್ತಿಕವಾಗಿ ಅನೇಕ ಸಂಕುಲಗಳ ಬಗ್ಗೆ ಓಪನ್ ಆಗಿ ಹೇಳಿದರೂ ಕೂಡ ಒಂದು ಮಾತನ್ನು ಅವರು ಯಾವಾಗಲೂ ಹೇಳುತ್ತಿದ್ದರು. ಅಂತಿಮವಾಗಿ ನಾವೆಲ್ಲರೂ ಒಂದು ಸಂಘಟನಾತ್ಮಕ ಚೌಕಟ್ಟಿನಲ್ಲಿದ್ದೇವೆ, ಆದುದರಿಂದ ಬಹುಮತಕ್ಕೆ ನಾವು ತಲೆ ಬಾಗಿಸಲೇ ಬೇಕಾಗುತ್ತದೆ ಎಂದು ಹೇಳುತ್ತಿದ್ದರು. ವೈಯಕ್ತಿಕವಾದಂಥ ನಮ್ಮ ಅಭಿಪ್ರಾಯಗಳು ಎಂಥವುಗಳೇ ಆಗಿದ್ದರೂ ಕೂಡ ಸಂಘಟನಾತ್ಮಕವಾಗಿರುವಂಥ ಒಂದು ಚಿಂತನೆಯಲ್ಲಿ ನಾವು ತಲೆ ಬಾಗಿಸಲೇಬೇಕಾಗುತ್ತದೆ ಎನ್ನುವ ನಿಟ್ಟಿನಲ್ಲಿ ಅವರು

ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದರು. ಬಹುಶಃ ಅವರ ಕ್ಷೇತ್ರಗಳಲ್ಲಿರ ಬಹುದು, ಬೇರೆ ಕಡೆಗಳಲ್ಲಿರಬಹುದು, ರಾಜ್ಯದ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಅನೇಕ ಯೋಜನೆಗಳು ಬರುವಂಥ ಸಂದರ್ಭದಲ್ಲಿ ಬರುವಂಥ ಪ್ರತಿಭಟನೆಗಳು, ವಿರೋಧವನ್ನು ವಿಚಾರಾತ್ಮಕವಾಗಿ ಸಕಾರಾತ್ಮಕವಾಗಿ ತೆಗೆದು ಕೊಂಡು, ರಾಜ್ಯದ ಹಿತಾಶಕ್ತಿಗೆ ಏನು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾ ಗುತ್ತದೋ ಅದರಲ್ಲಿ ಬಹುಶಃ ವೈಯಕ್ತಿಕವಾಗಿ ಎಷ್ಟೇ ಅಪಮಾನಗಳು, ಅವಮಾನಗಳು ಬಂದರೂ ಕೂಡ ರಾಜ್ಯದ ಹಿತಾಸಕ್ತಿಯಿಂದ ನಿಷ್ಠುರವಾ ದಂಥ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿರುವಂಥ ಅವರ ಮಾತುಗಳಲ್ಲಿ ಬಹುಶಃ ಹಂತ ಹಂತವಾಗಿ ಅವರ ಜೀವನ ಪದ್ಧತಿ ಆ ರೀತಿಯಲ್ಲಿ ಇತ್ತು.

ನಿರಂತರವಾಗಿರುವಂಥ ಅಧ್ಯಯನಶೀಲತೆ, ಅದು ಕೇವಲ ನಮ್ಮ subject ಗೆ ಸಂಬಂಧಪಟ್ಟಿದ್ದು ಅಥವಾ ಶಾಸಕಾಂಗಕ್ಕೆ ಸಂಬಂಧಪಟ್ಟಿದ್ದಲ್ಲ. ಅವರು ಎಲ್ಲಾ ಇಲಾಖೆಗಳ ಬಗ್ಗೆ ಅತ್ಯಂತ ತಜ್ಞತೆಯಿಂದ, ಅನುಭವ ಪೂರ್ಣವಾಗಿ ಮಾತನಾಡಬಲ್ಲ ವ್ಯಕ್ತಿ ಅಥವಾ ಒಬ್ಬ ಶಾಸಕ ಎಂದರೆ ಡಾ: ವಿ.ಎಸ್. ಆಚಾರ್ಯರವರು. ಅವರು ಈ ರೀತಿ ಎಲ್ಲಾ ಇಲಾಖೆಗಳ ಆಗುಹೋಗುಗಳ ಬಗ್ಗೆ ಮತ್ತು ಅವುಗಳಲ್ಲಿರುವಂತಹ ಕುಂದು ಕೊರತೆಗಳ ಬಗ್ಗೆ ಪರಿಣಾಮಕಾರಿಯಾಗಿ ಪ್ರತಿಪಾದನೆ ಮಾಡುವಂತಹ ಒಂದು ತರ್ಕಶಕ್ತಿ ಅವರಲ್ಲಿತ್ತು. ಅವರ ಚಿಂತನೆಗಳ ಬಗ್ಗೆ ನಾನು ಇಲ್ಲಿ ಸಾಕಷ್ಟು ವಿಚಾರಗಳನ್ನು ಹಂಚಿಕೊಳ್ಳದಿದ್ದರೂ ಕೂಡ ಸಮಯದ ಕೊರತೆಯಿಂದ ಒಂದೆರಡು ಸಂಗತಿಗಳನ್ನು ಹೇಳಬಯಸುತ್ತೇನೆ. ಡಾ: ಆಚಾರ್ಯರವರು ಆಕಸ್ಮಿಕ ನಿಧನವಾಗುವಂತಹ ಒಂದೆರಡು ದಿವಸಗಳ ಹಿಂದೆ ಮಂಗಳೂರಿನಲ್ಲಿ ಬಹಳ ದೊಡ್ಡ ಮಟ್ಟದ ಒಂದು ಕಾರ್ಯಾಗಾರ ನಡೆಯಿತು. ಮಾನ್ಯ ವೀರಪ್ಪಮೊಯ್ಲಿ ಯವರು ಹಾಗೂ ಅನೇಕ ಘಟಾನುಘಟಿಗಳು ಆ ವೇದಿಕೆಯಲ್ಲಿದ್ದರು. ಇಡೀ ರಾಜ್ಯ ಮಟ್ಟದಲ್ಲಿ ಮಾತ್ರ ಅಲ್ಲ, ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಭಾರತದ ರಫ್ತೋದ್ಯಮದಲ್ಲಿ 500 ಬಿಲಿಯನ್ ಡಾಲರ್ ಅನ್ನು ದಾಟಿಸಬೇಕೆನ್ನುವ ಚಿಂತನೆ ಇದ್ದು, ನಮ್ಮ ರಾಜ್ಯದಲ್ಲಿ ಕನಿಷ್ಠ 50 ಬಿಲಿಯನ್ ಡಾಲರ್ ಮಾಡಬೇಕೆನ್ನುವ ನಿಟ್ಟಿನಲ್ಲಿ ನಾವು ಯಾವ ರೀತಿ ನಮ್ಮ ಪಾತ್ರವನ್ನು ವಹಿಸಬೇಕೆನ್ನುವ ಸಂದರ್ಭದಲ್ಲಿ ವಿಚಾರಪೂರ್ಣವಾದಂತಹ ಮತ್ತು ಅಧ್ಯಯನಶೀಲವಾದಂತಹ ಅವರ ಒಂದು ಪ್ರತಿಪಾದನೆ ಇದ್ದು, ಯಾವ ದಿಕ್ಕಿನಲ್ಲಿ ನಮ್ಮ ಕೈಗಾರಿಕಾ ನೀತಿ ಇರಬೇಕು, ಯಾವ ದಿಕ್ಕಿನಲ್ಲಿ ನಮ್ಮ ವ್ಯವಸ್ಥೆ

ಪೂರಕವಾಗಿರಬೇಕು, ರಟ್ಟೆಬಿಸಿ ಹೊರಗೆ ಬರುವಂತಹ ನಿಟ್ಟಿನಲ್ಲಿ ನಾವು ಏನು ಕಾರ್ಯಾಚರಣೆ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಒಂದು ಪ್ರಬುದ್ಧವಾದಂತಹ ಭಾಷಣದಲ್ಲಿ ಒಂದು ಪ್ರಸ್ತಾವನೆ ಆ ಸಂದರ್ಭದಲ್ಲಿ ಆಯಿತು. ಬಹುಷಃ ಮರುದಿವಸ ಎಂದರೆ ಒಂದೇ ದಿವಸದಲ್ಲಿ ಅವರು ನಮ್ಮನ್ನು ಅಗಲಿ ಹೋಗುತ್ತಾರೆಂದು ನಮಗೆ ಯಾರಿಗೂ ಗೊತ್ತಿಲ್ಲ. ಆ ಸಂದರ್ಭದಲ್ಲಿ ಅವರ ಜೊತೆ ಇರುವಂತಹ ಮೂರು ಗಂಟೆ ಅವಧಿಯಲ್ಲಿ ಡಾ: ಮೊಯ್ಲಿಯವರು ಮತ್ತು ನಾವು ಜೊತೆಯಲ್ಲಿ ಸೇರಿಕೊಂಡು ಸಾಕಷ್ಟು ಚಿಂತನೆಗಳನ್ನು ಮಾಡಿದ್ದೇವೆ. ನಮ್ಮಲ್ಲಿರುವ ಕುಂದುಕೊರತೆಗಳೇನು? ನಾವು ಯಾವ ರೀತಿಯಲ್ಲಿ ಮುಂದೆ ಹೋಗಬೇಕೆನ್ನುವ ಹಿನ್ನೆಲೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ರಾಜಕೀಯವನ್ನು ಮೀರಿ, ನಾವು ಅಭಿವೃದ್ಧಿ ಬಗ್ಗೆ ಏನು ಯೋಚನೆಯನ್ನು ಇಟ್ಟುಕೊಳ್ಳಬೇಕೆನ್ನುವುದರ ಬಗ್ಗೆ ಅಲ್ಲಿ ಚರ್ಚೆಯಲ್ಲಿ ಬಂದಿರುವುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತಿದ್ದೇನೆ.

ಕೊನೆಯದಾಗಿ ಡಾ: ವಿ.ಎಸ್. ಆಚಾರ್ಯರವರ ದೇಹಾಂತ್ಯವಾಗಿ ಮಾನ್ಯ ಲಾಲ್ ಕೃಷ್ಣ ಅಡ್ವಾಣಿಯವರ ಜೊತೆಯಲ್ಲಿ ಅವರ ಮನೆಗೆ ಹೋಗುವಂತಹ ಸಂದರ್ಭದಲ್ಲಿ ಮಾನ್ಯ ಲಾಲ್ ಕೃಷ್ಣ ಅಡ್ವಾಣಿಯವರು ಡಾ: ಆಚಾರ್ಯರವರ ಬಗ್ಗೆ ಇಟ್ಟುಕೊಂಡಿರುವಂತಹ ಅಪಾರವಾದ ಅಭಿಮಾನ ಮತ್ತು ಅಭಿಪ್ರಾಯಗಳನ್ನು ಕೇಳಿ ತುಂಬಾ ಸಂತೋಷ ವಾಯಿತು. ಅವರು ಉತ್ತರಪ್ರದೇಶದ ಚುನಾವಣೆಯನ್ನು ಬಿಟ್ಟು ವಿಶೇಷವಾಗಿ ಡಾ:ಆಚಾರ್ಯರವರ ದೇಹಾಂತ್ಯ ಆಗಿರುವಂತಹ ಸಂದರ್ಭದಲ್ಲಿ ಶ್ರದ್ಧಾಂಜಲಿ ಯನ್ನು ಸಮರ್ಪಿಸಬೇಕೆನ್ನುವ ನಿಟ್ಟಿನಲ್ಲಿ ಒಬ್ಬ ಶ್ರೇಷ್ಠ ನಾಯಕನಿಗೆ ಇನ್ನೊಬ್ಬ ಶ್ರೇಷ್ಠ ನಾಯಕ ನೀಡಿರುವಂತಹ ಶ್ರೇಷ್ಠವಾಗಿರುವಂತಹ ಒಂದು ಶ್ರದ್ಧಾಂಜಲಿ ಎಂದು ತಿಳಿದುಕೊಳ್ಳುತ್ತೇನೆ. ಅವರು ದಾರಿಯುದ್ದಕ್ಕೂ ಅವರ ಅನುಭವ ಗಳನ್ನು ಹಂಚಿಕೊಂಡಿದ್ದಾರೆ. ವಿಶೇಷವಾಗಿ ಡಾ: ವಿ.ಎಸ್. ಆಚಾರ್ಯರವರ ಶ್ರೀಮತಿಯವರಾದ ಶಾಂತಕ್ಕರವರ ಜೊತೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಅವರು ಹೇಳಿರುವಂತಹ ಒಂದು ಮಾತು ಏನೆಂದರೆ ಅಡ್ವಾಣಿ ಯವರೆ, ಅವರಿಗೆ ನಾನು ಎರಡನೇ ಪತ್ನಿಯಾಗಿದ್ದೆನು, ಒಂದನೇ ಪತ್ನಿ ಪಾರ್ಟಿಯಾಗಿತ್ತು ಎಂದು ಹೇಳಿದರು. ಅವರು ಸದಾ ಭಾರತೀಯ ಜನತಾ ಪಾರ್ಟಿಯ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವಂತಹ ವಿಚಾರವನ್ನು ಅವರು ಆ ಸಂದರ್ಭದಲ್ಲಿ ನೆನಪಿಸಿದನ್ನು ಗಮನಿಸಿದಾಗ ನಾವೆಲ್ಲರೂ ಕೂಡ

ಆತ್ಮಾವಲೋಕನ ಮಾಡಬೇಕಾಗುತ್ತದೆ. ಪಾರ್ಟಿಯಿಂದಾಗಿ ನಾವು ಈ ಸ್ಥಾನಮಾನದಲ್ಲಿದ್ದೇವೆ, ನಮ್ಮ ಕರ್ತವ್ಯ ಏನು ಎಂದು ಹೇಳುವುದರ ಬಗ್ಗೆ ಬಹುಶಃ ಎಲ್ಲರೂ ಆತ್ಮಾವಲೋಕನ ಮಾಡುವಂತಹ ನಿಟ್ಟಿನಲ್ಲಿ ಡಾ: ಆಚಾರ್ಯ ರವರ ಬದುಕು ಹಾಗಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುವುದಕ್ಕೆ ಇಚ್ಛಿಸುತ್ತೇನೆ. ಇಂತಹ ಒಂದು ಶ್ರೇಷ್ಠವಾದ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಸಲ್ಲಿಸುವ ಮೂಲಕ ಅವರ ಕುಟುಂಬಕ್ಕೆ ಮಾತ್ರವಲ್ಲ, ಇದು ದೇಶಕ್ಕೆ ಮತ್ತು ರಾಜ್ಯಕ್ಕೆ ಆಗಿರುವಂತಹ ನಷ್ಟ ಎಂದು ನಾವು ಖಂಡಿತವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಯಾವುದೇ ರೀತಿಯಲ್ಲಿ ಸ್ಮಾರಕಗಳನ್ನು ಅಪೇಕ್ಷೆ ಪಡುವವರಲ್ಲ. ತರಬೇತಿಗೆ ಸಂಬಂಧ ಪಟ್ಟಂತೆ ಹೇಳುವುದಾದರೆ ಶಾಸಕರಿಗೆ ಒಳ್ಳೆಯ ತರಬೇತಿ ನಡೆಯಬೇಕು, ಅವರಿಗೆ ಒಳ್ಳೆಯ ಪ್ರಬುದ್ಧತೆ ಬರಬೇಕು, ಆಡಳಿತಾತ್ಮಕವಾದ ದೃಷ್ಟಿಯಿಂದ ಇರಬಹುದು ಅಥವಾ ಒಬ್ಬ ಶಾಸಕನಾಗಿ ಪ್ರಬುದ್ಧನಾಗಿ ಬೆಳೆಯುವುದಕ್ಕೆ ಬೇಕಾಗಿರುವಂತಹ ಚಿಂತನೆಗಳನ್ನು ಅಳವಡಿಸುವಂತಹ ನಿಟ್ಟಿನಲ್ಲಿ, ಯಾವ ರೀತಿಯ ವ್ಯವಸ್ಥೆಯಲ್ಲಿ ಅವರ ನೆನಪನ್ನು ಸ್ಮರಣೆ ಮಾಡಬಹುದು, ಉಪಯೋಗ ಮಾಡಿಕೊಳ್ಳಬಹುದು ಎನ್ನುವಂತಹ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಪ್ರತಿಪಕ್ಷ ಕೂಡ ಯೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ **ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ)** : ಮಾನ್ಯ ಅಧ್ಯಕ್ಷರೆ, ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಪಡೆದಿರತಕ್ಕಂಥ ವ್ಯಕ್ತಿ ಈ ಸದನದಲ್ಲಿ ಮುಖ್ಯಮಂತ್ರಿಯಾದದ್ದು ಸುದೈವ ಎಂದು ನಾನು ಹೇಳಿದೆ. ಸಾವು ಮತ್ತು ಪ್ರಕೃತಿ ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಹುಟ್ಟಿದವರೆಲ್ಲ ಸಾಯಲೇಬೇಕು, ಸಾವು ಖಚಿತ. ಆದರೆ ಇವತ್ತು ಒಬ್ಬ ವ್ಯಕ್ತಿಯನ್ನು ಕಳೆದು ಕೊಂಡಿರುವಂತಹ ಸಂದರ್ಭದಲ್ಲಿ ಒಬ್ಬ ಮುಖ್ಯಮಂತ್ರಿಯಾಗಿದ್ದಂಥ ಮಾನ್ಯ ಯಡಿಯೂರಪ್ಪನವರು ಸದನಕ್ಕೆ ಬರದಿರುವುದು ಸದನಕ್ಕೆ ನಿಜಕ್ಕೂ ಅಗೌರವ. ಅವರು ನಿಜವಾಗಲೂ ಕೂಡ ರಾಜಕೀಯ ವೈಷಮ್ಯಗಳನ್ನು ಬಿಟ್ಟು, ಇವತ್ತು ಶ್ರದ್ಧಾಂಜಲಿಯನ್ನು ಸಲ್ಲಿಸುವುದಕ್ಕೆ ಬರಬೇಕಾಗಿತ್ತು. ಇಂತಹ ವ್ಯಕ್ತಿಗಳು ನೂರಕ್ಕೆ ಒಬ್ಬರು ಸಿಗುವುದಿಲ್ಲ. ಅಂತಹ ಸರಳ ಸಜ್ಜನಿಕೆಯ ವ್ಯಕ್ತಿ. ಮಾನ್ಯ ಆಚಾರ್ಯರವರ ಆತ್ಮಕ್ಕೆ ಶಾಂತಿ ಸಿಗಲಿ. ಅವರು ಒಳ್ಳೆಯ ವ್ಯಕ್ತಿ. ಬದುಕು

ಮತ್ತು ಸಾವು, ಇವೆರಡರ ಜಂಜಾಟದ ಮಧ್ಯೆ ನಾವು ಸಾವನ್ನು ಯಾವತ್ತಿಗೂ ಜೊತೆಗೆ ಹೊತ್ತುಕೊಂಡೆ ಮುಂದುವರೆಯುತ್ತೇವೆ. ಜನನ ಎಂಬ ಮೂರಕ್ಷರದಲ್ಲಿ ಜನಿಸಿ, ಜೀವನ ಎಂಬ ಮೂರಕ್ಷರದಲ್ಲಿ ಜೀವಿಸಿ, ಮಾನವ ಎಂಬ ಮೂರಕ್ಷರದಲ್ಲಿ ಮರಣ ಎಂಬ ಮೂರಕ್ಷರ ಬಂದಾಗ ಸಮಾಜ ಎಂಬ ಮೂರಕ್ಷರಕ್ಕೆ ಕೊಡುಗೆ ಎಂಬ ಮೂರಕ್ಷರವನ್ನು ಕೊಟ್ಟಿದ್ದಾರೆ. ಆದರೆ ಯಡಿಯೂರಪ್ಪನವರ ಹಾಗೆ ಕೊಡಲಿ ಹಾಕಿಲ್ಲ, ನಮಸ್ಕಾರ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಡಾ: ವಿ.ಎಸ್. ಆಚಾರ್ಯರವರು ಇಲ್ಲ. ಅದನ್ನು ನೆನೆಸಿಕೊಂಡರೆ ತುಂಬಾ ದುಃಖವಾಗುತ್ತದೆ. ಡಾ: ವಿ.ಎಸ್. ಆಚಾರ್ಯರವರು ಒಂದು ರೀತಿ ಸಾಮಾಜಿಕ ಸುಧಾರಣಾ ದಿಕ್ಕಿನಲ್ಲಿ ಹೋದಂತಹ ವ್ಯಕ್ತಿ. ಸ್ವಾಭಾವಿಕವಾಗಿ ಸತ್ತಂತಹ ಎಲ್ಲಾ ವ್ಯಕ್ತಿಗಳಿಗೂ ಕೂಡ ಶ್ರದ್ಧಾಂಜಲಿ, ಸಂತಾಪ ಸಭೆಗಳನ್ನು ಮಾಡುವುದು ಪದ್ಧತಿ. ಆದರೆ ತಮ್ಮ ಜೀವನದಲ್ಲಿ ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡಬೇಕೆನ್ನುವ ಚಿಂತನೆ ಮಾಡಿ ಒಂದು ಪುರಸಭೆಯಲ್ಲಿ ಅದನ್ನು ನಿರ್ಣಯ ಮಾಡಿ ಇಡೀ ಒಂದು ಸಮಾಜಕ್ಕೆ, ದಲಿತರ ಮೇಲೆ ಆಗುತ್ತಿರುವಂತಹ ಅಮಾನವೀಯ ಕೃತ್ಯವನ್ನು ನಿಲ್ಲಿಸ ಬೇಕೆಂದು ಪ್ರಯತ್ನ ಮಾಡಿದಂತಹ ಒಬ್ಬ ಸಾಮಾಜಿಕ ಸುಧಾರಕ ಎಂದು ನಾವು ಇವತ್ತು ಅವರನ್ನು ನೆನಪು ಮಾಡಿಕೊಳ್ಳಬೇಕು. ದಲಿತರ ಅಭಿವೃದ್ಧಿ ಯಾಗಬೇಕೆನ್ನುವ ಕಲ್ಪನೆ, ಅಪೇಕ್ಷೆಯನ್ನು ನಾವೆಲ್ಲರೂ ಕೂಡ ವ್ಯಕ್ತಪಡಿ ಸುತ್ತೇವೆ. ಆದರೆ ಅವಕಾಶ ಸಿಕ್ಕಾಗ ಅದರ ಪ್ರಯತ್ನ ಮಾಡಿ ಯಶಸ್ವಿ ಯಾದಂತವರು ಡಾ: ವಿ.ಎಸ್. ಆಚಾರ್ಯರವರು. ನಾನು ಇವತ್ತು ದಿವಂಗತ ಬಸವಲಿಂಗಪ್ಪನವರನ್ನು ಕೂಡ ನೆನಪು ಮಾಡಿಕೊಳ್ಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಸ್ವಾಭಾವಿಕವಾಗಿ ದಲಿತ ವಿರೋಧ ಕೃತ್ಯಗಳನ್ನು ಖಡಾಖಂಡಿತವಾಗಿ ಖಂಡನೆ ಮಾಡಿದಂತಹ ಒಬ್ಬ ವ್ಯಕ್ತಿ. ಭಾರತೀಯ ಜನಸಂಘದ ವಿಚಾರವಿರಬಹುದು, ಹಿಂದುತ್ವದ ವಿಚಾರವಿರಬಹುದು, ಇದನ್ನು ಮಾನ್ಯ ಬಸವಲಿಂಗಪ್ಪನವರು ಒಪ್ಪುತ್ತಿರಲಿಲ್ಲ. ಆದರೆ ಯಾವಾಗ ಡಾ: ವಿ.ಎಸ್. ಆಚಾರ್ಯರವರು ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡಬೇಕೆಂದು ತೀರ್ಮಾನವನ್ನು ಮಾಡಿದಾಗ ಅದರ ಬಗ್ಗೆ ನೇರವಾಗಿ ಅಭಿನಂದನೆ ಮಾಡಿದವರು ದಿವಂಗತ ಬಸವಲಿಂಗಪ್ಪನವರು. ಈಗ ಡಾ: ವಿ.ಎಸ್. ಆಚಾರ್ಯ ಇಲ್ಲ, ಅವರು ಕಳೆದ ವಿಧಾನಸಭೆ ಅಧಿವೇಶನದಲ್ಲಿ ಇದ್ದರು.

ಮಡೆ ಸ್ನಾನದ ಬಗ್ಗೆ ಇಲ್ಲಿ ಚರ್ಚೆಯಾಯಿತು. ತಾವೂ ಕೂಡ ಇದ್ದಿರಿ. ಅವರ ನೇರ ಅಭಿಪ್ರಾಯವೇನೆಂದರೆ ಯಾವುದೇ ಕಾರಣಕ್ಕೂ ಕೂಡ ಆ ಒಂದು ಸಂದರ್ಭದಲ್ಲಿ ಮಡೆ ಸ್ನಾನ ನಿಷೇಧವಾಗಬೇಕೆನ್ನುವ ಅಪೇಕ್ಷೆ ಇತ್ತು. ಇವತ್ತು ಆಚಾರ್ಯ ಎಂದ ತಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಒಬ್ಬ ಪ್ರಖರ ರಾಷ್ಟ್ರವಾದಿ. ಬಹಳ ಹಿಂದೆ ನಾವು ಕಾಲೇಜಿನಲ್ಲಿ ಓದುತ್ತಿದ್ದಂತಹ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ಭಾರತೀಯ ಜನಸಂಘದ ಒಂದು ಸಮ್ಮೇಳನ ಇತ್ತು. ಆಗ ನಾನು ಜನಸಂಘದ ಅಧ್ಯಕ್ಷ. ನಾನು ಡಾ: ಆಚಾರ್ಯರವರಿಗೆ phone ಮಾಡಿದಾಗ ಅವರು ಉಡುಪಿಯಲ್ಲಿದ್ದರು. ಜನಸಂಘದ ಅಧಿವೇಶನವನ್ನು ನೀವು ಶಿವಮೊಗ್ಗದಲ್ಲಿ ಮಾಡುತ್ತಿದ್ದೀರಿ, ಯುವಕರಿಗೆ ಮಾರ್ಗದರ್ಶನ ಮಾಡುವಂತಹ ಏನಾದರೂ ಕಾರ್ಯಕ್ರಮ ಇಟ್ಟುಕೊಳ್ಳುತ್ತೀರಾ ಎಂದು phone ಮಾಡಿದೆನು. ಆಗ ನಾನು ಒಂದು ವಿದ್ಯಾರ್ಥಿ ಸಂಘದಲ್ಲಿ ಇದ್ದೆನು. ಅದಕ್ಕೆ ಅವರು phone ಮಾಡಿ ಈ ಅಧಿವೇಶನದಲ್ಲಿ ಯುವಕರಿಗೆ ಸ್ವಾತಂತ್ರ್ಯ ಹೋರಾಟ ಹೇಗಿತ್ತು ಎಂದು ಕಲ್ಪನೆ ಬರುವಂತಹ ರೀತಿಯಲ್ಲಿ ಒಂದು backdrop ನಲ್ಲಿ ಆಗಬೇಕು, ರಾಷ್ಟ್ರೀಯ ವಿಚಾರಗಳನ್ನು ಹೇಳುವುದರ ಜೊತೆಗೆ ಯುವಕರು ಯಾವ ರೀತಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು ಎಂಬ ಕಲ್ಪನೆ ಅವರಿಗೆ ಬರಬೇಕು ಎಂಬ ವಿಚಾರವನ್ನು ನನ್ನ ಗಮನಕ್ಕೆ ತಂದಾಗ ಬಹಳ ಸಂತೋಷವಾಯಿತು. ಏಕೆಂದರೆ ಇವತ್ತು ರಾಜಕಾರಣ ಎಂದ ತಕ್ಷಣ ದುಡ್ಡು, ಜಾತಿ, ಹೆಂಡ ಇಷ್ಟಕ್ಕೆ ಸೀಮಿತ ಆಗಿಹೋಗಿದೆ. ಆದರೆ ಭಾರತೀಯ ಜನಸಂಘದ ಒಬ್ಬ ನಾಯಕರಾಗಿ ಯುವಕರಿಗೆ ಆದರ್ಶವಾಗಿರಬೇಕು. ಯಾವ ರೀತಿ ಆದರ್ಶ ವಾಗಿರಬೇಕೆಂದರೆ ನಾವು ಈ ಮಣ್ಣಿನಲ್ಲಿ ಹುಟ್ಟಿದ್ದೇವೆ. ಈ ಮಣ್ಣಿನ ಋಣವನ್ನು ತೀರಿಸಬೇಕಾದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಟ ಮಾಡಿದಂಥ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದಬೇಕು, ತಿಳಿದುಕೊಳ್ಳಬೇಕು, ಆ ದಿಕ್ಕಿನಲ್ಲಿ ಹೋಗಬೇಕೆಂಬ ಕಲ್ಪನೆಯನ್ನು ಕೊಟ್ಟಂತಹ ಒಬ್ಬ ಮಹಾನ್ ಪುರುಷರಾಗಿದ್ದರು. ಡಾ: ವಿ.ಎಸ್. ಆಚಾರ್ಯರವರನ್ನು ನೋಡುತ್ತಿದ್ದ ಹಾಗೆ, ಇವರು ಸರಳ, ಸಜ್ಜನಿಕೆಯ ವ್ಯಕ್ತಿ, ಇಂಥ ಪದಗಳನ್ನೆಲ್ಲಾ ನಾವು ಬಳಸುತ್ತೇವೆ, ಇದರಲ್ಲಿ ಯಾವುದೇ ಅನುಮಾನವಿಲ್ಲ. ಯಾರೇ ಸತ್ತರೂ ಕೂಡ ಈ ಪದಗಳನ್ನು ಸ್ವಾಭಾವಿಕವಾಗಿ ಬಳಸುತ್ತೇವೆ. ಆದರೆ ಡಾ: ವಿ.ಎಸ್.ಆಚಾರ್ಯ ರವರು ಎಷ್ಟರಮಟ್ಟಿಗೆ ಒಂದೇ ಒಂದು ಕಪ್ಪು ಚುಕ್ಕೆಯನ್ನು ಇಟ್ಟು ಕೊಳ್ಳದೇ

ಇರತಕ್ಕಂಥ ವ್ಯಕ್ತಿ. ನಾನು ಭಾರತೀಯ ಜನತಾ ಪಕ್ಷದ ಅಧ್ಯಕ್ಷನಾದ ಮೇಲೆ ಅವರ ಜಿಲ್ಲೆಗೆ ಒಂದು ಕಾರ್ಯಕ್ರಮ ನಡೆಸುವ ದೃಷ್ಟಿಯಿಂದ ಅವರಿಗೆ ತಾವು ಮಂತ್ರಿಗಳಿದ್ದೀರಿ, ನಮ್ಮ ಪಕ್ಷದ ಕಾರ್ಯಕರ್ತರು ಒಂದು ಕಾರ್ಯ ಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ, ಇದಕ್ಕೆ ಸ್ವಲ್ಪ ಹಣಕಾಸಿನ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಅವರಿಗೆ ಹೇಳಿದಾಗ, ಈ ವಿಷಯವಾಗಿ ನಾನು ಸಂಜೆ ಹೇಳುತ್ತೇನೆಂಬ ಮಾತನ್ನು ಹೇಳಿದರು. ನಾನು ನಮ್ಮ ಕಾರ್ಯಕರ್ತರಿಗೆ ಫೋನ್ ಮಾಡಿ ಆಚಾರ್ಯರವರಿಗೆ ಈ ರೀತಿ ಹೇಳಿದ್ದೇನೆ, ಅವರು ಸಂಜೆ ಹೇಳುತ್ತೇನೆಂದು ಹೇಳಿದ್ದರೆ, ಅವರನ್ನು ನೀವು ಭೇಟಿ ಮಾಡಿ ಎಂದು ಹೇಳಿದೆ. ಅದಕ್ಕೆ ಕಾರ್ಯಕರ್ತರು ಏನು ಹೇಳಿದ ರೆಂದರೆ; ಡಾ: ಆಚಾರ್ಯರವರು ಮಂತ್ರಿಗಳು ಹೌದು, ಆದರೆ ಅವರಿಂದ ಹಣವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಸಾಕಷ್ಟು ಜನರಿಗೆ ಕೆಲಸವನ್ನು ಮಾಡಿಕೊಟ್ಟಿದ್ದಾರೆ, ಆದರೆ ಇಂಥ ಕಾರ್ಯಕ್ರಮಕ್ಕೆ ಹಣವನ್ನು ಕೊಡಬೇಕೆಂದು ಕೇಳುವುದಕ್ಕೆ ನಮ್ಮ ಕೈಯಿಂದ ಸಾಧ್ಯನೇ ಇಲ್ಲ, ಮಾನ್ಯ ಆಚಾರ್ಯರವರು ಸಹಕಾರ ಕೊಡುವುದಿಲ್ಲವೆನ್ನುವ ಮಾತನ್ನು ನೇರವಾಗಿ ನಮ್ಮ ಕಾರ್ಯಕರ್ತರು ಹೇಳಿದರು. ಅನೇಕ ರಾಜಕಾರಣಿಗಳು ಕೆಲಸವನ್ನು ಮಾಡಿಕೊಡುವುದಕ್ಕಿಂತ ಮುಂಚಿತವಾಗಿಯೇ ಹಣವನ್ನು ತೆಗೆದು ಕೊಳ್ಳುತ್ತಾ ರೆಂಬ ಮಾತನ್ನು ಅನೇಕರು ಹೇಳುತ್ತಾರೆ. ಡಾ:ವಿ.ಎಸ್. ಆಚಾರ್ಯರವರು ಅದೆಷ್ಟು ಜನರಿಗೆ ಕೆಲಸ ಮಾಡಿಕೊಟ್ಟಿದ್ದಾರೆನ್ನುವುದಕ್ಕೆ ಪಟ್ಟಿ ಇಲ್ಲ. ಆದರೆ ಕೆಲಸ ಮಾಡಿಕೊಟ್ಟಿರುವ ಒಬ್ಬರ ಹತ್ತಿರವೂ ಕೂಡ ಅವರ ಸ್ವಂತಕ್ಕೂ ಅಲ್ಲ, ಪಕ್ಷಕ್ಕೂ ಕೂಡ ಹಣವನ್ನು ಕೇಳುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಮ್ಮ ಕಾರ್ಯಕರ್ತರು ಹೇಳಬೇಕಾದರೆ, ಇಂಥ ಭ್ರಷ್ಟಾಚಾರದ ಒಂದು ಕಪ್ಪು ಚುಕ್ಕೆ ಕೂಡ ಇಲ್ಲದೇ ಇರುವಂಥ ವ್ಯಕ್ತಿ ಕೂಡ ಇದ್ದಾರಲ್ಲಾ, ಇದು ಆನಂದ ಪಡುವಂತ ಸಂದರ್ಭ. ಡಾ: ಆಚಾರ್ಯರವರನ್ನು ಎಷ್ಟು ಹೊಗಳಿದರೂ ಸಾಕಾಗುವುದಿಲ್ಲ. ಇವರು ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋದರು. ಇವರು ಏಕೆ ಜೈಲಿಗೆ ಹೋದರೆಂದರೆ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹಲ್ಲೆ, ವಾಕ್ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ. ಇಂಥ ಸಂದರ್ಭದಲ್ಲಿ ನಾವು ಇದರ ವಿರುದ್ಧ ಹೋರಾಟ ಮಾಡದಿದ್ದರೆ ಹೇಗೆ ಸಾಧ್ಯವೆಂಬ ಮಾತನ್ನು ಯುವಕ ಡಾ: ಆಚಾರ್ಯರವರು ಅವತ್ತು ಹೇಳುತ್ತಿದ್ದರು. ಇವರು 19 ತಿಂಗಳುಗಳ ಜೈಲು ವಾಸವನ್ನು ಅನುಭವಿಸಿದಂಥ ಡಾ: ಆಚಾರ್ಯರವರ ಹತ್ತಿರ ನಮ್ಮ ಕಾರ್ಯಕರ್ತರು ಜೈಲಿನಲ್ಲಿ ಭೇಟಿ ಮಾಡುವಂಥ ಸಂದರ್ಭದಲ್ಲೂ ಕೂಡ,

ಅವರು ಹೊರಗಡೆ ಪರಿಸ್ಥಿತಿ ಹೇಗಿದೆಯೆಂದು ಕೇಳುತ್ತಿದ್ದರು. ಸಮಾಜ ತುರ್ತು ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ಸ್ವೀಕಾರ ಮಾಡಿದೆ. ಇದರ ವಿರುದ್ಧ ಹೋರಾಟ ಮಾಡಬೇಕು. ಈ ದೇಶಕ್ಕೆ ಮತ್ತೊಮ್ಮೆ ಸ್ವಾತಂತ್ರ್ಯ ಬರುವ ದಿಕ್ಕಿನಲ್ಲಿ ಪ್ರಯತ್ನ ನಡೆಸಬೇಕೆಂದು ಯುವಕರಿಗೆ ಸ್ಫೂರ್ತಿ ಕೊಡುವಂಥ ಮಾತುಗಳನ್ನು ಡಾ: ಆಚಾರ್ಯರವರಿಂದ ನಾನು ಕೇಳಿದ್ದೇನೆ. ತಾವು ಇಲ್ಲಿ ಪ್ರಸ್ತಾಪ ಮಾಡಬೇಕಾದಂಥ ಅಂಶಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದೀರಿ. ಡಾ: ಆಚಾರ್ಯರವರು ಪ್ರಥಮ ಬಾರಿಗೆ ಮಲ ಹೊರುವ ಪದ್ಧತಿಯನ್ನು ನಗರ ಸಭೆಯ ವ್ಯಾಪ್ತಿಯಲ್ಲಿ ನಿಷೇಧಿಸುವ ದಿಕ್ಕಿನಲ್ಲಿ ಯಾವ ರೀತಿಯ ನಿರ್ಣಯವನ್ನು ತಂದರೆಂಬ ಅಂಶವನ್ನು ತಾವೆಲ್ಲಾ ಹೇಳಿದ್ದೀರಿ. ಮತ್ತೆ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಹೋರಾಟ ಮಾಡಿದರೆಂಬ ಅಂಶವನ್ನು ಕೂಡ ನಾವೆಲ್ಲರೂ ಗಮನಿಸಿದ್ದೇವೆ. ಡಾ: ಆಚಾರ್ಯರ ಬಗ್ಗೆ ಮಾತನಾಡುವಾಗ ರಾಷ್ಟ್ರೀಯ ವಿಚಾರವನ್ನು ಪ್ರಸ್ತಾಪ ಮಾಡಿದೆ. ಈ ರೀತಿ ಚರ್ಚೆ ಮಾಡುವಂಥ ಅನೇಕ ಸಂದರ್ಭಗಳಲ್ಲಿ ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳಬೇಕೆಂದರೆ, ಈ ರೀತಿಯ ಹೊಂದಾಣಿಕೆಗೆ ಅವರು ತಯಾರಿರಲಿಲ್ಲ. ಅವರು ಯಾವ ಕಾರಣಕ್ಕೂ ಈ ವಿಚಾರದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಾರದೆಂಬ ಪ್ರಖರವಾದ ಹಿಂದುತ್ವವಾದಿ, ಪ್ರಖರವಾದಂಥ ರಾಷ್ಟ್ರವಾದಿಯಾಗಿದ್ದಂತ ಡಾ: ಆಚಾರ್ಯರವರನ್ನು ನಾವು ಇವತ್ತು ಕಳೆದು ಕೊಂಡಿದ್ದೇವೆ. ಮತ್ತೆ ಎಲ್ಲಿ ಆ ಡಾ: ಆಚಾರ್ಯರವರು ನಮಗೆ ಸಿಗುತ್ತಾರೋ ನನಗೆ ಗೊತ್ತಿಲ್ಲ. ಆದರೆ ಅವರ ಜೀವನವನ್ನು ನಾವು ನೇರವಾಗಿ ಕಂಡಿದ್ದೇವೆ, ಅವರು ಯಾವ ರೀತಿ ಇದ್ದರೆಂಬುದನ್ನು ನೋಡಿದ್ದೇವೆ. ಎಲ್ಲರೂ ಇವರು ಆರ್ಥಿಕ ತಜ್ಞರು ಇನ್ನುಳಿದ ಎಲ್ಲಾ ಅಂಶಗಳನ್ನು ಹೇಳುತ್ತಿದ್ದಾರೆ. ಆದರೆ ರಾಷ್ಟ್ರೀಯ ವಿಚಾರಗಳು ಬಂದಂಥ ಸಂದರ್ಭದಲ್ಲಿ, ಸಮಾಜ ಸುಧಾರಣೆ ಬಂದಂಥ ಸಂದರ್ಭದಲ್ಲಿ, ಭ್ರಷ್ಟಾಚಾರದ ವಿಚಾರಗಳು ಬಂದಂಥ ಸಂದರ್ಭಗಳಲ್ಲಿ, ಡಾ: ವಿ.ಎಸ್. ಆಚಾರ್ಯರವರಂಥ ವ್ಯಕ್ತಿತ್ವ ನಮ್ಮ ಜೀವನಕ್ಕೆ ಒಂದು ಮಾರ್ಗದರ್ಶನ ವೆಂದು ಭಾವಿಸಿಕೊಳ್ಳಬೇಕಾಗುತ್ತದೆ. ಮಾರ್ಗದರ್ಶನವನ್ನು ಭಾವಿಸಿಕೊಂಡು ಅದನ್ನು ಸೀಮಿತ ಮಾಡುವುದಿಲ್ಲ, ನಾವು ಆ ದಿಕ್ಕಿನಲ್ಲಿ ನಡೆದಾಗ ಮಾತ್ರ ಡಾ: ಆಚಾರ್ಯರು ಯಾವ ವಿಚಾರಕ್ಕೆ ಪ್ರಯತ್ನ ಮಾಡಿದರೋ ಆ ವಿಚಾರವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅದನ್ನು ಮುಂದು ವರೆಸಿದಾಗ ಮಾತ್ರ ಡಾ: ವಿ.ಎಸ್. ಆಚಾರ್ಯರವರ ಆತ್ಮಕ್ಕೆ ಶಾಂತಿ

ಸಿಗುತ್ತದೆಂದು ನನಗನಿಸುತ್ತದೆ. ಈ ವಿಧಾನಸಭೆ ಪವಿತ್ರವಾದ ದೇವಾಲಯ, ಪ್ರಜಾಪ್ರಭುತ್ವದ ದೇವಾಲಯ, ಈ ದೇವಾಲಯದಲ್ಲಿ ಡಾ: ವಿ.ಎಸ್. ಆಚಾರ್ಯರಂಥ ಪ್ರಖರ ರಾಷ್ಟ್ರಭಕ್ತನಿಗೆ ಶ್ರದ್ಧಾಂಜಲಿ ಅರ್ಪಣೆ ಮಾಡುತ್ತಿರುವಂಥ ಸಂದರ್ಭದಲ್ಲಿ, ನನಗೆ ಅನಿಸುವುದೇನೆಂದರೆ ಇಡೀ ಸದನ ಅವರ ಜೀವನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಈ ದಿಕ್ಕಿನಲ್ಲಿ ಹೋಗುವಂಥ ಪ್ರಯತ್ನವನ್ನು ನಾವೆಲ್ಲರೂ ಮಾಡೋಣವೆಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ, ಅವರ ಕುಟುಂಬಕ್ಕೆ ಭಗವಂತ ದುಃಖವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ, ಮತ್ತೆ ನಮ್ಮ ಪಕ್ಷಕ್ಕೆ ಆಗಿರುವಂಥ ನಷ್ಟವನ್ನು ಆ ಭಗವಂತನು ತುಂಬಿಕೊಡುತ್ತಾನೆಂಬ ವಿಶ್ವಾಸ ನನಗಿದೆ. ಅದು ಯಾವ ಪ್ರಕಾರವೆಂದರೆ, ಆ ದಿಕ್ಕು ಯಾವುದೆಂದು ನಾನು ಹೇಳಿದೆ. ಇನ್ನು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಯುವಕರನ್ನು ಆ ದಿಕ್ಕಿನಲ್ಲಿ ತೆಗೆದು ಕೊಂಡು ಹೋಗುವಂಥ ಪ್ರಯತ್ನವನ್ನು ಮಾಡಿದಾಗ ಮಾತ್ರ ನಿಜಕ್ಕೂ ಕೂಡ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ. ನಾವು ಆ ದಿಕ್ಕಿನಲ್ಲಿ ನಡೆಯುತ್ತೇವೆ, ಆ ದಿಕ್ಕಿನಲ್ಲಿ ನಾವು ಯಶಸ್ವಿಯಾಗಬೇಕೆಂದು ಹೇಳುತ್ತಾ, ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ರಾಜ್ಯದ ಒಬ್ಬ ಹಿರಿಯ ರಾಜಕಾರಣಿಯಾದ ಡಾ: ವಿ.ಎಸ್. ಆಚಾರ್ಯರವರು ನಿಧನರಾಗಿದ್ದು, ಇವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರ ಜೊತೆಯಲ್ಲಿ ಸುಮಾರು 15 ದಿವಸಗಳು ಪ್ರವಾಸ ಮಾಡಿದ್ದೇನೆ. ಹಿಂದೆ 1996 ರಲ್ಲಿ ಧಾರ್ಮಿಕ ದತ್ತಿ ವಿಚಾರದಲ್ಲಿ ಒಂದು ಸಮಿತಿ ರಚನೆಯಾಗಿತ್ತು. ಆಗ ನಾನು ಪಕ್ಷೇತರ ಸದಸ್ಯನಾಗಿದ್ದೆ. ಧಾರ್ಮಿಕ ದತ್ತಿ ಬಿಲ್ ಹೊಸದಾಗಿ ಇವತ್ತು ಏನು ಇದೆ. ಇದನ್ನು ತಯಾರು ಮಾಡುವಂಥ ಸಂದರ್ಭದಲ್ಲಿ ನಾವು ಸಾಕಷ್ಟು ಬಾರಿ ಪ್ರವಾಸ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಆಗ ಕಾಶ್ಮೀರದಿಂದ ವೈಷ್ಣೋದೇವಿ, ಪೋರ್ಟ್‌ಬ್ಲೇರ್‌ರವರೆಗೂ ಪ್ರವಾಸ ಮಾಡಿದ್ದೇವೆ. ಆಗ ಮಾನ್ಯ ಮುನಿಯಪ್ಪ ಮುದ್ದಪ್ಪನವರು ಮಂತ್ರಿಯಾಗಿದ್ದರು. ಆಗ ಆಚಾರ್ಯರವರೊಂದಿಗೆ ಬಹಳ ಒಡನಾಡವಿತ್ತು, ಅವರನ್ನು ಹತ್ತಿರದಿಂದ ನೋಡಿದ್ದೇನೆ. ಈಗ ನಮ್ಮ ಸ್ನೇಹಿತರು ಏನು ವರ್ಣನೆಯನ್ನು ಮಾಡುತ್ತಿದ್ದರು. ಈ ರಾಜ್ಯಕ್ಕೆ ಸಂಬಂಧಪಟ್ಟಂತೆ ಇವರು ಬಿ.ಜೆ.ಪಿ. ಭೀಷ್ಮ ಎಂದರೆ ತಪ್ಪಾಗಲಾರದು. ಅವರು ಅಂಥ ವ್ಯಕ್ತಿತ್ವವನ್ನು ಹೊಂದಿದ್ದರು.

ಅವರಿಗೆ ಎಲ್ಲರೂ ಕೂಡ ಗೌರವವನ್ನು ಕೊಡುತ್ತಿದ್ದರು. ಇದೇ ಅವಧಿಯಲ್ಲಿ ಅವರು Higher Education Minister ಆಗಿದ್ದಂಥ ಸಂದರ್ಭದಲ್ಲಿ ಒಂದು ಬಿಲ್ ಅನ್ನು ತೆಗೆದುಕೊಂಡು ಬಂದರು. ಆಗ ತರಾತುರಿಯಲ್ಲಿ ಬಿಲ್ ಅನ್ನು ಪಾಸ್ ಮಾಡಿ ಬಿಟ್ಟಿದ್ದರು. ಇದನ್ನು Upper House ನಲ್ಲೂ pass ಮಾಡಿ ಬಿಟ್ಟಿದ್ದರು. ಅದು ಏನೆಂದರೆ ಎಲ್ಲಾ institutions ಗಳನ್ನು Trust ಆಗಿ convert ಮಾಡಬೇಕು, 6% fees ಕೊಡಬೇಕೆಂದು ಇನ್ನಿತರ ವಿಷಯ ಗಳನ್ನು ಸೇರಿಸಿ, ಕೊಟ್ಟಿದ್ದರು. ಇದರಿಂದ ಗಾಬರಿಯಾಗಿ ಒಂದು press conference ಮಾಡಿದ ತಕ್ಷಣ, ಅವರು ನನಗೆ ಏನು ಶಿವಕುಮಾರ್ ಈ ರೀತಿ ಎಂದು ಕೇಳಿದರು. ಇದನ್ನು ನೀವು ನೋಡಿದ್ದಿರೊ, ಇಲ್ಲವೊ ಗೊತ್ತಿಲ್ಲ. ಇಡೀ ರಾಜ್ಯಕ್ಕೆ ನಿಮ್ಮ ಪಕ್ಷವೂ ಸೇರಿಸಿ ಈ ವ್ಯವಸ್ಥೆ ಮುಗಿದು ಹೋಗುತ್ತ ದೆಂದು ಹೇಳಿದ ತಕ್ಷಣ, ಅವರೆಲ್ಲರೂ ಸೇರಿ ಅವರಲ್ಲೇ ಚರ್ಚೆ ಮಾಡಿ, ಮುಂದಿನ ಅಧಿವೇಶನದಲ್ಲಿ Council ನಲ್ಲಿ ಅದನ್ನು withdraw ಮಾಡಿದಂಥ ಸಂದರ್ಭ ಬಂತು. ಅಂದರೆ ಅವರು ಯಾವುದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಅವರಿಗೆ ಯಾರಾದರೂ ಸುರಕ್ಷಿತ ವಾದಂಥ ಸಲಹೆಯನ್ನು ಕೊಟ್ಟರೆ, ಅವರ ಪಕ್ಷ ಒಂದು ಕಡೆ, ಸಿದ್ಧಾಂತ ಒಂದು ಕಡೆ ಇದ್ದರೂ ಸಹಿತ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದರೆ, ಅವರು ಆ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿ ದ್ದುದ್ದನ್ನು ನಾವು ಗಮನಿಸಿದ್ದೇವೆ. ಇವರಿಗೆ ಅಜಾತ ಶತ್ರು ಎನ್ನುವ ಪದವನ್ನು ಇಲ್ಲಿ ಏನು ಉಪಯೋಗಿಸಿದ್ದೀರಿ, ಇದು ಅವರಿಗೆ ರಾಜಕಾರಣದಲ್ಲಿ ಅನ್ವಯಿಸುತ್ತದೆ. ನನಗೆ ಹಿಂದೆ ಕೇಂದ್ರದಲ್ಲಿ ನಿಮ್ಮ ಪಕ್ಷದ ರಾಷ್ಟ್ರ ಮಟ್ಟದ ಹಿರಿಯ ನಾಯಕರು ಬೆಂಗಳೂರಿಗೆ ಬರುತ್ತಿದ್ದರು. ಆಗ ನಾನು ಆಕಸ್ಮಿಕವಾಗಿ ಅವರೊಂದಿಗೆ ಪ್ರವಾಸ ಮಾಡುತ್ತಿದ್ದೆ, ಆಗ ಅವರು ನನ್ನನ್ನು ಕೇಳಿದರು. ಆಗ ಮಾನ್ಯ ಯಡಿಯೂರಪ್ಪನವರು Chief Minister ಆಗಿದ್ದರು. ಆಗ Cabinet ನಲ್ಲಿ best fine Minister ಯಾರು ಎಂದು ಹೇಳುತ್ತೀರಿ? Non corrupt ಯಾರು ಎಂದು ಹೇಳುತ್ತೀರೆಂದು ಅವರು ನನ್ನನ್ನು ಕೇಳಿದರು. ಅವರು National Leader ಅವರ ಹೆಸರನ್ನು ಇಲ್ಲಿ ನಾನು ಹೇಳುವುದಕ್ಕೆ ಇಷ್ಟವಿಲ್ಲ. ಆಗ ನಾನು ಮೊದಲ ಹೆಸರು ಡಾ: ವಿ.ಎಸ್. ಆಚಾರ್ಯ ಎಂದು ಹೇಳಿದೆ. ಅವರ ಜೊತೆಯಲ್ಲಿ ಪಕ್ಷ ಬೇರೆಯಾಗಿದ್ದರೂ ಸಹ ಅನೇಕ ವಿಚಾರಗಳಲ್ಲಿ

ಒಡನಾಟವಿಟ್ಟುಕೊಂಡು ಜೊತೆಯಲ್ಲಿ ಕೆಲಸ ಮಾಡುವಂಥ ಸಂದರ್ಭ ಮತ್ತು ಅವರನ್ನು ಭೇಟಿ ಮಾಡುವಂಥ ಸಂದರ್ಭ ಮತ್ತು ಅವರು Home Minister ಆಗಿದ್ದಂಥ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ತಿಳಿಸುವಂಥ ಸಂದರ್ಭದಲ್ಲಿ ತಕ್ಷಣ ಫೋನ್ ಮಾಡಿ ಸತ್ಯಾಂಶವನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. ಇದೆಲ್ಲವನ್ನು ಗಮನಿಸಿದಾಗ ನಿಜವಾಗಿಯೂ ನಮ್ಮ ಈ ವಿಧಾನ ಸಭೆಯ ವ್ಯವಸ್ಥೆಗೆ, ರಾಜಕಾರಣದ ವ್ಯವಸ್ಥೆಗೆ ಮತ್ತು ಪ್ರಜಾ ಪ್ರಭುತ್ವದ ವ್ಯವಸ್ಥೆಗೆ, ದೊಡ್ಡ ಲಾಸ್ ಎಂದು ನಾನು ತಿಳಿದು ಕೊಂಡಿದ್ದೇನೆ. ಅವರ ಪಕ್ಷಕ್ಕೆ ಒಂದು ದೊಡ್ಡ ಲಾಸ್ ಆಗಿದೆ. ಅವರ ಕುಟುಂಬಕ್ಕೂ ಕೂಡ ಲಾಸ್ ಆಗಿದೆ. ನಮಗೂ ಅವರು ಸ್ನೇಹಿತರಾಗಿದ್ದರು, ನಮಗೂ ಕೂಡ ದೊಡ್ಡ ಲಾಸ್ ಆಗಿದೆ. ಇವೆಲ್ಲವನ್ನು ಭರಿಸುವಂಥ ಶಕ್ತಿಯನ್ನು ಅವರ ಕುಟುಂಬಕ್ಕೆ ಮತ್ತು ಅವರ ಸ್ನೇಹಿತರಿಗೆ ಸಿಗಲಿ ಎಂದು ಹಾರೈಸಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್) ಲೋಕೋಪಯೋಗಿ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಇಲಾಖೆ ಸಚಿವರಾಗಿದ್ದಂಥ ಡಾ: ವಿ.ಎಸ್. ಆಚಾರ್ಯರು ನಿಧನ ಹೊಂದಿರುವುದು ನಮ್ಮೆಲ್ಲರಿಗೂ ಅತ್ಯಂತ ಕಳವಳಕಾರಿಯಾದಂಥ ವಿಚಾರ ಮತ್ತು ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾರದಂಥ ಹಾನಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೇನೆ. ಸನ್ಮಾನ್ಯ ವಿ.ಎಸ್. ಆಚಾರ್ಯರು ಆರ್ಥಿಕ ತಜ್ಞರಲ್ಲದಿದ್ದರೂ ಸಹ, ಎಲ್ಲ ಇಲಾಖೆಗಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅತ್ಯಂತ ಅರ್ಥವತ್ತಾಗಿ ಪ್ರತಿಪಾದನೆ ಮಾಡಬೇಕಾದಂಥ ಸಂದರ್ಭದಲ್ಲಿ ಯಾವ ಯಾವ ಇಲಾಖೆಗೆ ಎಷ್ಟು ಪ್ರಮಾಣದ ಹಣಕಾಸಿನ ನೆರವು ಬೇಕಾಗಬಹುದು, ಯೋಜನೆಗಳನ್ನು ಮಾಡಬೇಕಾದಂಥ ಸಂದರ್ಭದಲ್ಲಿ, ಆ ಯೋಜನೆಯಿಂದ ಆಗಬಹುದಾದಂಥ ದೂರಗಾಮಿ ಪ್ರಭಾವದ ಬಗ್ಗೆ ಅವರಲ್ಲಿದ್ದಂಥ vision ಬಗ್ಗೆ, ನಿಜವಾಗಿಯೂ ನಾನು ನೋಡಿದ ಹಾಗೆ, ಇಷ್ಟೊಂದು ಅಧ್ಯಯನ ಮಾಡಿದಂಥ, ಅವರಿಗೆ ಸಮಾನವಾದಂಥ ವ್ಯಕ್ತಿಯನ್ನು ನಾನು ಇಲ್ಲಿಯವರೆಗೆ ನೋಡಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ಭಾವಿಸಿದ್ದೇನೆ. 1983ರಲ್ಲಿ ನಾನು ಪಕ್ಷೇತರನಾಗಿ ಆಯ್ಕೆಯಾಗಿ

ಮೊದಲ ಬಾರಿಗೆ ವಿಧಾನಸಭೆಗೆ ಬಂದಾಗ, ಅವರೂ ಮೊದಲ ಬಾರಿಗೆ ಆಯ್ಕೆಯಾಗಿ ಬಂದಿದ್ದರು. ಅಲ್ಲಿಂದ ಇಲ್ಲಿಯವರೆಗೆ ಅನೇಕ ವಿಚಾರಗಳಲ್ಲಿ ನಾವು ಚರ್ಚೆ ಮಾಡುತ್ತಿರುವಾಗ, ಅದನ್ನು ಚರ್ಚೆಯ ದೃಷ್ಟಿಯಲ್ಲಿ ವಿಚಾರ ಮಾಡುತ್ತಿರುವಾಗ, ದೇಶದ, ರಾಜ್ಯದ, ಸಮಾಜದ ಹೀಗೆ ಎಲ್ಲರ ಹಿತದೃಷ್ಟಿಯಿಂದ ಏನು ಯೋಜನೆಗಳನ್ನು ಮಾಡಬೇಕು, ಯೋಚನೆಗಳನ್ನು ಮಾಡಬೇಕು, ಅವುಗಳಿಗೆ ಬೇಕಾದಂಥ ಅನುದಾನವನ್ನು ಪಡೆಯುವಂಥ ವಿಚಾರದಲ್ಲಿ, ಅವುಗಳನ್ನು ಅನುಷ್ಠಾನ ಮಾಡಬೇಕಾದಂಥ ವಿಚಾರದಲ್ಲಿ ಕಾಲಕಾಲಕ್ಕೆ ಯಾವ ರೀತಿ ಸಲಹೆಗಳನ್ನು ಕೊಡಬೇಕು ಎನ್ನುವ ವಿಚಾರದಲ್ಲಿ, ಕೇವಲ ಒಂದು ಇಲಾಖೆಯ ಬಗ್ಗೆ ಮಾತ್ರವಲ್ಲ, ಎಲ್ಲ ಇಲಾಖೆಗಳ ಬಗ್ಗೆಯೂ ಅವರು ಅಧ್ಯಯನ ಮಾಡಿದ್ದು ನಿಜವಾಗಿಯೂ ಹೆಮ್ಮೆಪಡುವಂಥ ವಿಚಾರ. ಅವರು ಅಂಥ ಒಬ್ಬ ಪ್ರಖಾಂಡ ಪಂಡಿತರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ ಎನ್ನುವುದು ತುಂಬ ವ್ಯಥೆ ಪಡುವಂಥ ವಿಚಾರ ಎಂದು ನಾನು ಭಾವಿಸಿದ್ದೇನೆ. ಜನವರಿ 1ನೇ ತಾರೀಖಿನಿಂದ ಫೆಬ್ರವರಿ 12ನೇ ತಾರೀಖಿನ ವರೆಗೆ ನಾನು ಮೂರು ಬಾರಿ ಅವರ ಜೊತೆಗೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕಾದಂಥ ಅವಕಾಶ ನನಗೆ ಲಭ್ಯವಾಗಿತ್ತು. ಆಗ ಅವರು ಪದೇಪದೇ ನನ್ನ ಜೊತೆ ಚರ್ಚೆ ಮಾಡುತ್ತಿದ್ದಂಥ ಸಂದರ್ಭದಲ್ಲಿ, ಅವರ ಜಿಲ್ಲೆಗೆ ಆಗಬೇಕಾಗಿರುವಂಥ ಅಭಿವೃದ್ಧಿಯ ವಿಚಾರದಲ್ಲಿ, ರಾಜ್ಯದಲ್ಲಿ ಆಗಬೇಕಾಗಿರುವಂಥ ಅಭಿವೃದ್ಧಿಯ ವಿಚಾರದಲ್ಲಿ, ನನ್ನ ಇಲಾಖೆಗೆ ಸಂಬಂಧಿಸಿದ ವಿಚಾರಗಳ ಜೊತೆಗೆ ಬೇರೆಬೇರೆ ಇಲಾಖೆಗಳ ವಿಚಾರಗಳನ್ನು ಸಹ ಅವರು ಪ್ರಸ್ತಾಪ ಮಾಡಿ, ಹಿಂದೆ ಆಗಿರುವಂಥ ಸಾಧನೆ, ಬೇರೆಬೇರೆ ರಾಜ್ಯಗಳಲ್ಲಿ ಆಗಿರುವಂಥ ಸಾಧನೆ, ಗುಜರಾತ್‌ನ ಮಾದರಿ ಬಗ್ಗೆ, ಉತ್ತರ ಪ್ರದೇಶ, ಬಿಹಾರ, ಮುಂತಾದ ರಾಜ್ಯಗಳಲ್ಲಿ ಆಗಿರುವುದನ್ನು ಹೋಲಿಕೆ ಮಾಡಿ, ಬೇರೆಬೇರೆ ಇಲಾಖೆಗಳಲ್ಲಿ ಆಗಿರುವಂಥ ಕೆಲವು ವಿಚಾರಗಳ ಬಗ್ಗೆ ನನ್ನ ಜೊತೆ ಪ್ರಸ್ತಾಪ ಮಾಡಿ, ಅವುಗಳನ್ನು ಜಾರಿಗೆ ತರಬೇಕಾದಂಥ ವಿಚಾರದಲ್ಲಿ ನಮಗೆ ಸಲಹೆ ಸೂಚನೆಗಳನ್ನು ಕೊಡುವುದನ್ನು ಮತ್ತು ಮಾರ್ಗದರ್ಶನ ಮಾಡುವಂಥ ಕೆಲಸವನ್ನು ಮಾಡಿದ್ದಾರೆ. 12ನೇ ತಾರೀಖಿನ ದಿವಸ ಉಡುಪಿ ಮತ್ತು ಕಾರ್ಕಳದಲ್ಲಿ ಎರಡು ಕಾರ್ಯಕ್ರಮಗಳಲ್ಲಿ ನಾನು ಮತ್ತು ಅವರು ಭಾಗಿಯಾಗಿದ್ದೆವು. ಉಡುಪಿಯಿಂದ ಕಾರ್ಕಳಕ್ಕೆ ಹೋಗುತ್ತಿರ ಬೇಕಾದರೆ ಅವರು ಒಂದು ಮಾತನ್ನು ಪ್ರಸ್ತಾಪ ಮಾಡಿ ಹೇಳುತ್ತಿದ್ದರು.

ಉದಾಸಿಯವರೇ, ನಾವು ಮತ್ತು ನೀವು ಈ ವಯೋಮಾನದಲ್ಲಿ ನಿರಂತರ ವಾಗಿ active ಆಗಿರಬೇಕು, inactive ಆಗಿಬಿಟ್ಟರೆ ನಮ್ಮ ಆರೋಗ್ಯ ಹಾಳಾಗಿಬಿಡುತ್ತದೆ ಎನ್ನುವ ಮಾತನ್ನು ನನಗೆ ಹೇಳಿದ್ದರು. 12ನೇ ತಾರೀಖಿನ ಸಂಜೆ ಐದೂವರೆ--ಆರು ಗಂಟೆಯವರೆಗೂ ನಾನು ಅವರ ಜೊತೆಗೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಆದರೆ 14ನೇ ತಾರೀಖು ಮಧ್ಯಾಹ್ನ ಹನ್ನೊಂದೂವರೆ-ಹನ್ನೆರಡು ಗಂಟೆಗೆ ಅವರು ನಮ್ಮನ್ನು ಅಗಲಿದರು ಎನ್ನುವ ಅತ್ಯಂತ ಆಘಾತಕಾರಿಯಾದ ವಿಚಾರವನ್ನು ಕೇಳಿ ನನಗೆ ದಿಗ್ಭ್ರಮೆಯಾಯಿತು. ರಾಜ್ಯದ ಅಭಿವೃದ್ಧಿಯ ಎಲ್ಲಾ ವಿಚಾರದಲ್ಲಿ ಭಾಗಿಯಾಗಿರುವಂಥ, ಪಕ್ಷದ ಸಂಘಟನೆಯಲ್ಲಿ ಮತ್ತು ಆರ್ಥಿಕ ತಜ್ಞರಾಗಿ ಮಾಡಿರುವಂಥ ಸಲಹೆ ಸೂಚನೆಗಳಲ್ಲಿ, ಅವರು ನಮಗೆ ಬಿಟ್ಟು ಹೋಗಿರುವಂಥ ಅನೇಕ ಸಂಪ್ರದಾ ಯಗಳನ್ನು ಉಳಿಸಿಕೊಂಡು ಹೋಗಬೇಕಾದರೆ, ಆಚಾರ್ಯರಿಗೆ ಸಾಟಿ ಆಚಾರ್ಯರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರು ಸಂತರಂತೆ ಬದುಕಿ, ರಾಜಕೀಯದಲ್ಲಿ ಒಬ್ಬ ಉದ್ದಾಮ ವ್ಯಕ್ತಿಯಾಗಿ ಬಾಳಿ ಹೋಗಿರುವ ಅವರ ಜೀವನ ಚರಿತ್ರೆ ನಮ್ಮ ಮುಂದಿನ ಪೀಳಿಗೆಯವರು ಆದರ್ಶ ರಾಜಕಾರಣಿ ಯಾಗಲು ಒಂದು ಅವಕಾಶವಾಗಲಿ ಎನ್ನುವಂತ ಮಾತನ್ನು ಹೇಳಲು ಬಯಸಿ, ಇವತ್ತು ನಮ್ಮನ್ನು ಅಗಲಿ ಹೋಗಿರುವ ಡಾ:ವಿ.ಎಸ್ ಆಚಾರ್ಯ ರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದರ ಜೊತೆಗೆ, ಮೃತರ ಆತ್ಮಕ್ಕೆ ಶಾಂತಿ ಯನ್ನು ಕೋರಿ, ಅವರ ಕುಟುಂಬದ ಸದಸ್ಯರಿಗೆ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ಪರಮಾತ್ಮ ಕರುಣಿಸಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಭಯಚಂದ್ರ ಜೈನ್ (ಮೂಡಬಿದ್ರೆ) : ಮಾನ್ಯ ಅಧ್ಯಕ್ಷರೆ, ಡಾ: ವಿ.ಎಸ್. ಆಚಾರ್ಯರವರು ಅಜಾತಶತ್ರು. ರಾಜ್ಯ ಕಂಡ ಅಪರೂಪದ ರಾಜಕಾರಣಿ. ಉಡುಪಿ ನಗರಸಭೆಗೆ ಅಧ್ಯಕ್ಷರಾಗಿ ಸಮಾಜ ಸೇವೆಗೆ ತೊಡಗಿಸಿಕೊಂಡ ಆಚಾರ್ಯರವರು 1983ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆರಿಸಿ ಬಂದರು. ರಾಮಕೃಷ್ಣ ಹೆಗಡೆಯವರು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ರಚಿಸಿದಾಗ ಬಾಹ್ಯ ಬೆಂಬಲ ನೀಡಿದ 18 ಶಾಸಕರ ನಾಯಕರಾಗಿದ್ದರು ಅವರು. ರಾಮಕೃಷ್ಣ ಹೆಗಡೆ ಯವರಿಗೂ ಕೂಡ ಆರ್ಥಿಕ ನೀತಿಯಲ್ಲಿ ಉತ್ತಮವಾದಂಥ ಸಲಹೆಗಳನ್ನು ನೀಡಿದಂಥ ಉದಾಹರಣೆಗಳಿವೆ. ತದನಂತರ ಬೇರೆ ಚುನಾವಣೆಗಳಲ್ಲಿ ಗೆಲ್ಲದಿದ್ದರೂ, ವಿಧಾನ ಪರಿಷತ್ತಿನ ಸದಸ್ಯರಾಗಿ ಆರಿಸಿ ಬಂದರು. ಜೆ. ಹೆಚ್.

ಪಟೇಲರು ಮುಖ್ಯಮಂತ್ರಿಯಾದಂಥ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ನಿರ್ಮಾಣದಲ್ಲಿ ಮುಖ್ಯ ಪಾತ್ರ ವಹಿಸಿದರು. ಅತ್ಯಂತ ಅಗಾಧವಾದ ಜ್ಞಾನ, ಸಂಪತ್ತು ಅವರಲ್ಲಿ ಅಡಗಿತ್ತು. ಅವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ ಕೂಡ ಅವರ ಆಸಕ್ತಿಯ subject Finance ಆಗಿತ್ತು. ಆದ್ದರಿಂದ ಯಡಿಯೂರಪ್ಪ ನವರ ಎಲ್ಲ ಬಜೆಟ್‌ಗಳಲ್ಲಿ ಆಚಾರ್ಯರ ಅಪಾರ ಕೊಡುಗೆ ಇದೆ. ಅವರು ತಮ್ಮ ರಾಜಕೀಯ ಜೀವನದಲ್ಲಿ ಎಲ್ಲ ಜನಪ್ರತಿನಿಧಿಗಳನ್ನು ಗೌರವದಿಂದ ನೋಡಿಕೊಳ್ಳುತ್ತಿದ್ದಂಥ ಸೌಜನ್ಯದ ರಾಜಕಾರಣಿಯಾಗಿದ್ದರು. ಅವರ ನಿಧನ ದಿಂದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ನಮ್ಮ ಮಂಗಳೂರಿನಲ್ಲಿ Police Commissionarate ಮಾಡಿದಂಥ ಸಂದರ್ಭದಲ್ಲಿ ನನ್ನ ವಿಧಾನಸಭಾ ಕ್ಷೇತ್ರದ ಅರ್ಧ ಕ್ಷೇತ್ರವನ್ನು Police Commissionarate ಗೆ ಸೇರಿಸಿ, ಅರ್ಧ ಕ್ಷೇತ್ರವನ್ನು Rural S.P. ಕಛೇರಿಗೆ ಸೇರಿಸಿದಂಥ ಸಂದರ್ಭದಲ್ಲಿ ನಾನು ಅವರ ಹತ್ತಿರ ಹೋಗಿ, ಇದರಿಂದ ನಮಗೆ ಅನ್ಯಾಯವಾಗುತ್ತಿದೆ, ಅರ್ಧ ಕ್ಷೇತ್ರ Commissionarate, ಉಳಿದರ್ಧ ಕ್ಷೇತ್ರವನ್ನು S.P. under ಕೊಡುವುದರಿಂದಾಗಿ ನಮ್ಮ ಕ್ಷೇತ್ರದ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದಾಗ, ಕೂಡಲೇ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡಿದರು. ಅಲ್ಲಿಯೇ ಹೊಸ Police Commissionarate ಒಂದು ಆದೇಶವನ್ನು ಕೊಟ್ಟು ಅದನ್ನು ಸರಿಪಡಿ ಸುವಂಥ ಕೆಲಸವನ್ನು ಮಾಡಿದರು. ಅವರು ನಿಧನರಾಗುವ 10 ದಿನಗಳ ಮೊದಲು, ಅವರು ಮತ್ತು ನಮ್ಮ P.W.D. Minister ರವರು, ಕಾರ್ಕಳ–ಪಡುಬಿದ್ರೆ ರಸ್ತೆಯ ಶಂಕು ಸ್ಥಾಪನೆಗಾಗಿ ನನ್ನ ಕ್ಷೇತ್ರಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಮೂಡಬಿದರೆಯ ಜ್ವಲಂತ ಸಮಸ್ಯೆಯನ್ನು ನಾನು ಅವರ ಮುಂದಿಟ್ಟೆ, ಅಲ್ಲಿ National Highway Authority ಯವರು 10 ವರ್ಷ ಗಳಿಂದ ಬೈ–ಪಾಸ್ ರಸ್ತೆಯನ್ನು ಮಾಡಲಿಕ್ಕೆ ಆಗಲಿಲ್ಲ. 1992 ರಲ್ಲಿ P.W.D. ಯವರು ಅಲ್ಲಿ ಬೈ–ಪಾಸ್ ರಸ್ತೆ ಮಾಡಲು ಶಂಕು ಸ್ಥಾಪನೆಯನ್ನು ಮಾಡಿದ್ದರು ಎಂದು ಹೇಳಿದಾಗ, ಅವರು ಉದಾಸಿಯವರಿಗೂ ಅದನ್ನು ತಿಳಿಯಪಡಿಸಿ, ಆ ಸ್ಪಾಟ್‌ಗೆ inspection ಗೆ ಬಂದು, 5 ಕೋಟಿ ರೂಪಾಯಿಯ ವೆಚ್ಚದಲ್ಲಿ ಒಂದು ರಿಂಗ್ ರೋಡ್ ಮಾಡುವಂಥ ಒಂದು ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ

P.W.D. ಮಂತ್ರಿಗಳು ಈಡೇರಿಸಿ ಕೊಡುತ್ತಾರೆ ಎನ್ನುವ ಆಶಯದೊಂದಿಗೆ, ನಮ್ಮ ಮಹಾನ್ ಚೇತನ ಡಾ: ವಿ.ಎಸ್. ಆಚಾರ್ಯರಿಗೆ ಅಶ್ರುತರ್ಪಣವನ್ನು ಅರ್ಪಿಸುತ್ತಿದ್ದೇನೆ.

ಶ್ರೀ ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ಡಾ: ವಿ.ಎಸ್. ಆಚಾರ್ಯರವರ ಸಂತಾಪ ಸೂಚನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಡಾ: ಆಚಾರ್ಯರವರನ್ನು ಕಳೆದುಕೊಂಡಿರುವಂಥ ಹೆಚ್ಚು ದುಃಖ ಮತ್ತು ನೋವು ಇರುವಂಥಾದ್ದು ನಮ್ಮ ಉಡುಪಿಯ ಜನತೆಗೆ ಎಂದು ನಾನು ಭಾವಿಸುತ್ತಿದ್ದೇನೆ. ಇಡೀ ರಾಜ್ಯಕ್ಕೆ ಮತ್ತು ದೇಶಕ್ಕೆ ಅವರ ನಿಧನದಿಂದ ನಷ್ಟವಾಗಿದ್ದರೂ, ಉಡುಪಿಗೆ ವಿಶೇಷವಾದಂಥ ನಷ್ಟವಾಗಿದೆ. ಆದರೆ ಒಂದು ಅಭಿಮಾನವೆಂದರೆ, ಡಾ: ಆಚಾರ್ಯರವರ ನಿರ್ಗಮನ ಬಹಳ ಗೌರವಯುತವಾದ ನಿರ್ಗಮನವಾಗಿದೆ ಎನ್ನುವುದು ಸಂತೋಷದ ಸಂಗತಿ. ಏಕೆಂದರೆ, ಅವರು on duty ಯಲ್ಲಿದ್ದಾಗಲೇ, ಕೆಲಸ ಮಾಡುತ್ತಿದ್ದಾಗಲೇ ನಿಧನ ಹೊಂದಿದ್ದಾರೆ. ಅವರು ಒಂದು ದಿವಸವೂ ಹಾಸಿಗೆ ಹಿಡಿದವರಲ್ಲ. 15 ದಿವಸಗಳ ಕಾಲ ಅವರ ಆರೋಗ್ಯ ಬಹಳ ಹದಗೆಟ್ಟಿದ್ದರೂ ಸಹ, ಆ ಸಂದರ್ಭದಲ್ಲೂ ಸಹ ಅವರ P.S. ಮೂಲಕ ಕಡತಗಳನ್ನು ಉಡುಪಿಗೆ ತರಿಸಿ ಕಡತಗಳನ್ನು clear ಮಾಡುತ್ತಿದ್ದರು. ಅವರ ಇಲಾಖೆಯಲ್ಲಿ ಒಂದೇ ಒಂದು ಕಡತ ಪೆಂಡಿಂಗ್ ಇರಲಿಲ್ಲ. ಹಾಗಾಗಿ, ಅವರು ಹಾಸಿಗೆ ಹಿಡಿದಂಥ ಒಂದೇ ಒಂದು ನಿದರ್ಶನವಿಲ್ಲ. ಕೊನೆಯ ದಿವಸ ಅವರು ಕಾಲೇಜಿನ ಕಾರ್ಯಕ್ರಮಕ್ಕೆ ಹೋದಾಗ ಅವರ ನಿರ್ಗಮನವಾಗಿರುವುದು, ಅವರು on duty ಯಲ್ಲಿದ್ದಾಗ ನಿರ್ಗಮಿಸಿದ್ದಾರೆ. ಉದಾಸಿಯವರು ಹೇಳಿದ ಹಾಗೆ ಅವರು ಯಾವಾಗಲೂ ಹೇಳುತ್ತಿದ್ದುದೂ ಅದನ್ನೇ, ನಮಗೆ ಆರೋಗ್ಯ ಸರಿಯಾಗಿರಬೇಕಾದರೆ ನಾವು ನಿರಂತರವಾಗಿ ಕೆಲಸ ಮಾಡುತ್ತಿದ್ದರೆ ಮಾತ್ರ ಆ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಿದ್ದರು. ಅದನ್ನು ದೇವರು ಅವರಿಗೆ ಕರುಣಿಸಿದ್ದಾರೆ. ಹೀಗಾಗಿ ಅವರದ್ದು ಗೌರವಯುತವಾಗದ ನಿರ್ಗಮನ ವಾಗಿದೆ. ಅವರ ನಿಧನದ ಸುದ್ದಿ ಬಂದಾಗ ನಮಗೆ ಅದನ್ನು ನಂಬಲಿಕ್ಕೆ ಆಗಲಿಲ್ಲ. ಗೌರವಯುತವಾದ ನಿರ್ಗಮನ ಎಂದು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅವರ ಶವವನ್ನು ಒಬ್ಬರು ಮುಖ್ಯಮಂತ್ರಿಗಳು ಊರಿಗೆ ತೆಗೆದು ಕೊಂಡು ಬಂದರು. ಆ ಗೌರವ ಬೇರೆ ಸಾಧಾರಣ ರಾಜಕಾರಣಿಗಳಿಗೆ

ಸಿಗಲಿಕ್ಕಿಲ್ಲ ಮತ್ತು ಕೆಲಸ ಮಾಡುತ್ತಿರುವಾಗಲೇ ಅವರು ನಿಧನ ಹೊಂದಿರುವುದು. ಎರಡನೆಯದಾಗಿ, ಅವರ ಶವಸಂಸ್ಕಾರಕ್ಕೆ ನಮ್ಮ ರಾಷ್ಟ್ರೀಯ ನಾಯಕರು ತಕ್ಷಣ ಆಗಮಿಸಿದರು. ಆಚಾರ್ಯರು ನಿಧನರಾದರು ಎಂದು ಅನಂತ ಕುಮಾರ್‌ರವರು ಅದ್ವಾಣಿಯವರಿಗೆ ತಿಳಿಸಿದ ಕೂಡಲೇ, we should go ಎನ್ನುವ ಮಾತು ಅದ್ವಾಣಿಯವರಿಗೆ ಬಂತಂತೆ. ತಕ್ಷಣವೇ ಅವರು ವಿಶೇಷ ವಿಮಾನದಲ್ಲಿ ಆಗಮಿಸಿ ಆಚಾರ್ಯರ ಶವ ಸಂಸ್ಕಾರದಲ್ಲಿ ಭಾಗವಹಿಸಿದರು. ನಮ್ಮ ಬಿದಿರುಗುಡ್ಡೆಯಲ್ಲಿ ಅವರು ಪುರಸಭಾ ಅಧ್ಯಕ್ಷರಾಗಿದ್ದಾಗ ಅವರೇ ಕಟ್ಟಿಸಿದಂಥ ಸ್ಮಶಾನವಿದೆ. ಅಲ್ಲಿ ಅವರ ಶವ ಸಂಸ್ಕಾರವಾಗುವಾಗ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರಾಗಿದ್ದಂಥ ಜನಾರ್ಧನ ಪೂಜಾರಿಯವರು ಮತ್ತು ಕಾಂಗ್ರೆಸ್‌ನ ಇತರೆ ನಾಯಕರು ರಾತ್ರಿ ಒಂದು ಗಂಟೆವರೆಗೆ ಇದ್ದರು. ಜೊತೆಗೆ, ನಮ್ಮ ಅಡ್ವಾಣಿಯವರು, ನಮ್ಮ ಮುಖ್ಯ ಮಂತ್ರಿಯವರು, ನಮ್ಮ ರಾಜಾಧ್ಯಕ್ಷರು ಎಲ್ಲರೂ ರಾತ್ರಿ 1 ಗಂಟೆವರೆಗೆ ಇದ್ದು, ಸರ್ಕಾರಿ ಗೌರವದೊಂದಿಗೆ ಅಂದರೆ ಈ ರೀತಿಯ ಸಾವು ಪ್ರಾಯಶಃ ಅಂಥ ಸಾರ್ಥಕ ಜೀವನ ನಡೆಸಿದಂಥ ಒಬ್ಬ ರಾಜಕಾರಣಿಗೆ ಮಾತ್ರ ಸಿಗಲಿಕ್ಕೆ ಸಾಧ್ಯತೆ ಇದೆ ಎಂದು ನಮಗೆ ಗೊತ್ತಾಗುತ್ತದೆ. ಅವರ ಸಾವಿನ ನಂತರ ನಾನು ನೋಡಿರುವ ಹಾಗೆ, ಶ್ರೀ ಕೆ. ಅಭಯ ಚಂದ್ರ ಜೈನ್‌ರವರ ಆಚಾರ್ಯರ ರವರ ಕಟ್‌ಔಟ್ ಮಾಡಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಜೈನ್‌ರವರು ಕಾಂಗ್ರೆಸ್ ಪಕ್ಷದ ಸಚೇತಕರಾಗಿದ್ದರೂ ಆಚಾರ್ಯರ ಬಗ್ಗೆ ಎಷ್ಟು ಗೌರವ ವಿಟ್ಟಿದ್ದರು ಎಂದು ನೋಡಿದಾಗ, ಅವರ ಬಗ್ಗೆ ಬೇರೆ ಪಕ್ಷದವರಿಗೂ ಎಷ್ಟು ಅಭಿಮಾನವಿದೆ ಎಂಬುದು ಗೊತ್ತಾಗುತ್ತದೆ. ಉಡುಪಿ ಜಿಲ್ಲೆಯಲ್ಲಿ ಆಸ್ಕರ್ ಫರ್ನಾಂಡಿಸ್‌ರಂಥ ಹಿರಿಯ ಕಾಂಗ್ರೆಸ್ ಪಕ್ಷದವರು ಶ್ರದ್ಧಾಂಜಲಿ ಸಭೆಯನ್ನು ಮಾಡಿದರು. ಅಂದರೆ, ಆಚಾರ್ಯರ ಬಗ್ಗೆ ಎಲ್ಲಾ ಪಕ್ಷದವರಿಗೂ ಅಷ್ಟು ಗೌರವವಿತ್ತು, ಅವರು ಅಜಾತಶತ್ರುವಾಗಿದ್ದರು ಎಂಬುದು ಇದರಿಂದ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಅವರ ನೆರಳಲ್ಲಿ ಬೆಳೆದವನು. ಅವರ ಆತ್ಮೀಯ ಶಿಷ್ಯರಲ್ಲಿ ನಾನೂ ಕೂಡ ಒಬ್ಬ. ಅವರು ಯಾವಾಗಲೂ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ನನ್ನ ನಂತರ ನಮ್ಮ ಒಬ್ಬ ಒಳ್ಳೆಯ ಶಿಷ್ಯನನ್ನು ತಯಾರು ಮಾಡಿದ್ದೇವೆ ಎಂದು ನನ್ನ ಬಗ್ಗೆ ಪ್ರಶಂಸೆ ಮಾಡುತ್ತಿದ್ದರು. ನಾವು ಯಾವ ಕಾರ್ಯಕ್ರಮಗಳನ್ನು, ಯಾವುದಾದರೂ ಚಿಂತನೆಯನ್ನು ಮಾಡುತ್ತಿದ್ದರೆ, ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಒಬ್ಬರು

active ಆದಂಥ ಶಾಸಕರು ನಮ್ಮೊಟ್ಟಿಗೆ ಇದ್ದಾರೆಂದು ಹೇಳುವ ಪ್ರಶಂಸೆ ಮಾತನ್ನು ಜಿಲ್ಲಾಧಿಕಾರಿಗಳ ಸಂಕೀರ್ಣದ ಉದ್ಘಾಟನೆ ಸಂದರ್ಭದಲ್ಲಿ ಹೇಳಿದ್ದರು. ಇದೆಲ್ಲಾ ನನಗೆ ವಿಶೇಷವಾದ ಗೌರವವೆಂದು ನಾನು ಭಾವಿಸುತ್ತೇನೆ. ಪ್ರಾಯಶಃ ಅವರ ನಿರ್ಗಮನದಿಂದ ನನಗೆ ಬಹಳ ನಷ್ಟವಾಗಿದೆ. ನಾನು ಅವರ ಮಾರ್ಗದರ್ಶನದಲ್ಲಿ 2001ರಲ್ಲಿ ನಗರ ಸಭೆಯ ಸದಸ್ಯನಾಗಿದ್ದೆ. ಅವರು 1968ನೇ ಇಸವಿಯಲ್ಲಿ ಕಡಿಯಾಳಿ ವಾರ್ಡ್‌ನ ಸದಸ್ಯರಾಗಿದ್ದರು. ಅದೇ ವಾರ್ಡಿನಲ್ಲಿ ನಾನು ನಗರ ಸಭೆಯ ಸದಸ್ಯನಾಗಿದ್ದೆ. ಅವರು ನಗರಸಭಾ ಸದಸ್ಯರಾಗಿ, ಅಧ್ಯಕ್ಷರಾಗಿ ಮಾಡಿದಂಥ ಕೆಲಸವನ್ನು ಇವತ್ತಿಗೂ ಯಾರೂ ಮರೆಯುವುದಕ್ಕಾಗುವುದಿಲ್ಲ. ಅವರು ಉಡುಪಿಯ ಭಗೀರಥ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಏಕೆಂದರೆ, 1969ನೇ ಇಸವಿಯಲ್ಲಿ ಅವರು ನಗರಸಭಾ ಸದಸ್ಯರಾಗಿದ್ದಾಗ ಸ್ವರ್ಣ ಪ್ರಥಮ ಹಂತ ಯೋಜನೆ ಜಾರಿಗೆ ತಂದಿದ್ದರು. ಆ ಸ್ವರ್ಣ ಯೋಜನೆಯ ಕಲ್ಪನೆ ಮಾಡಿ ಶಿರೂರಿನಲ್ಲಿ ಡ್ಯಾಂ ಕಟ್ಟಿಸಿ, ಅಲ್ಲಿಂದ ಶುದ್ಧೀಕರಿಸಿದ ನೀರನ್ನು ತರುವಂಥ ಯೋಜನೆ ಆ ಕಾಲದಲ್ಲಿ ಯಾವುದೇ ಸರ್ಕಾರದ ನೆರವಿನಿಂದ ಮಾಡಿದಂಥ ಯೋಜನೆಯಲ್ಲ. Syndicate Bank ನಿಂದ ಸಾಲವನ್ನು ಪಡೆದುಕೊಂಡು ಆ ಕಾಲದಲ್ಲಿ ಮಾಡಿರುವಂಥದ್ದು. ಆ ಕಾಲದಲ್ಲಿ ಒಬ್ಬನ ಮೇಲೆ 5 ಸಾವಿರ ರೂಪಾಯಿ ಸಾಲದ ಹೊರೆ ಬರುತ್ತದೆ ಇದನ್ನು ಹೇಗೆ ತೀರಿಸುವುದು ಎಂದು ಕೆಲವರು ಟೀಕೆ ಮಾಡಿದರು. ಆಗ ಟಿ.ಎ. ಪೈರವರು ಸಿಂಡಿಕೇಟ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ಆಚಾರ್ಯರವರು ಸಿಂಡಿಕೇಟ್ ಬ್ಯಾಂಕ್‌ನಿಂದ ಸಾಲ ಪಡೆದುಕೊಂಡು ಆ ಸ್ವರ್ಣ ಯೋಜನೆಯ ಪ್ರಥಮ ಹಂತವನ್ನು ಜಾರಿಗೆ ತಂದರು. ಸ್ವರ್ಣ ಎರಡನೆಯ ಹಂತವನ್ನು ಜಾರಿಗೆ ತರುವ ಸಂದರ್ಭದಲ್ಲಿ ADB ಯ ಸಾಲದ ಸೌಲಭ್ಯ ಬಂದ ಸಂದರ್ಭದಲ್ಲಿ ಆಗ ಅದರ ಬಗ್ಗೆ ಬಹಳ ಚರ್ಚೆಯಾಗಿತ್ತು. ಆಗ ಅಲ್ಲಿನ ನಗರಸಭೆಯ ಆಡಳಿತ ಕಾಂಗ್ರೆಸ್ ಪಕ್ಷದ್ದು ಇತ್ತು. ನಾವು ವಿರೋಧ ಪಕ್ಷದಲ್ಲಿದ್ದೆವು. ಆಗ ವರಾಹಿಯಿಂದ ನೀರನ್ನು ತರಬೇಕೆ ಬೇಡವೇ ಎನ್ನುವ ವಿಚಾರದಲ್ಲಿ ತಕರಾರಿತ್ತು. ಆಗ ಬಹಳ ಪ್ರಬಲರಾಗಿ ವಿರೋಧಿಸಿ, ವರಾಹಿಯಿಂದ ನೀರನ್ನು ತಂದರೆ costly ಆಗುತ್ತದೆ, ನಮಗೆ ನಿರಂತರ ನೀರು ಸಿಗುವುದಿಲ್ಲವೆಂದು ಹೇಳಿ ಸ್ವರ್ಣ ಎರಡನೆಯ ಹಂತದ ಯೋಜನೆಯನ್ನು ಜಾರಿಗೆ ತಂದರು. ಈ ರೀತಿ ನಗರಸಭೆಗೆ ಅವರು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ನಗರಸಭೆಗೆ

ಒಂದು ಸ್ವಂತ ಸಂಪನ್ಮೂಲವನ್ನು ಕ್ರೋಢೀಕರಿಸಬೇಕೆನ್ನುವ ಚಿಂತನೆ ಬಂದಿದ್ದೇ ಅವರ ಕಾಲದಿಂದ. ತಾವು ನೋಡಿದ ಹಾಗೆ, ಇವತ್ತು ಉಡುಪಿ ನಗರ ಸಭೆಯಲ್ಲಿ ವಿಶ್ವೇಶ್ವರಯ್ಯ ಬಿಲ್ಡಿಂಗ್ ಇದೆ. ನಗರಸಭೆ ತನ್ನ ಸ್ವಂತ ಕಾಲ ಮೇಲೆ ನಿಲ್ಲಬೇಕೆನ್ನುವ ಚಿಂತನೆಯಲ್ಲಿ ಆ ಕಟ್ಟಡವನ್ನು ಕಟ್ಟಿಸಿದ್ದು. ಇವತ್ತಿಗೂ ನನಗೆ ನೆನಪಿರುವ ಹಾಗೆ, ಅವರ ಜೊತೆ ಅವರ ಕಾಡಿನಲ್ಲಿ ಪ್ರಯಾಣಿಸುವಾಗ ಯಾವಾಗಲೂ ಕೂಡ ಅವರು ನಗರದ ಬಗ್ಗೆಯೇ ಚಿಂತನೆ ಮಾಡುತ್ತಿದ್ದರು. ನಮಗೆ ಬೆನ್ನು bell-mouth ಬಂದಾಗ ಅಂದರೆ ರೋಡ್ ಅಗಲ ಇದ್ದಲ್ಲಿ ಡಾಂಬರು ಹಾಕಿಲ್ಲದಿದ್ದರೆ ತಕ್ಷಣ ನಗರಸಭೆಯ ಅಧ್ಯಕ್ಷರಿಗೆ, ನಗರಸಭೆಯ ಕಮಿಷನರ್‌ಗೆ ಫೋನ್ ಮಾಡಿ, ನೋಡಿ, ಅಲ್ಲಿನ ತಂತಿ ಕಂಬ shift ಮಾಡಿ, ಅಲ್ಲಿನ ರಸ್ತೆಯನ್ನು ಅಗಲ ಮಾಡಿ ಎನ್ನುವ ಸೂಚನೆಗಳನ್ನು ಕೊಡುತ್ತಿದ್ದರು. ಒಂದು ನಗರದ ಆಡಳಿತದ ಬಗ್ಗೆ ಸಣ್ಣ ಸಣ್ಣ ಸೂಚನೆ ಗಳನ್ನೂ ಸಹ ಅವರು ಕೊಡುತ್ತಿದ್ದುದನ್ನು ನಾವು ನೋಡಿದ್ದೇವೆ. ಅವರು ನಗರ ಸಭೆಗೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಇನ್ನೂ ನಮಗೆ ಅವರ ಮಾರ್ಗದರ್ಶನ ಬೇಕೆನ್ನುವುದು ಇತ್ತು. ಆದರೆ, ಅವರು ಇವತ್ತು ಇಲ್ಲ. ಆದರೆ, ನಿಜವಾಗಿ ಅವರ ಕೊಡುಗೆ ಹಿಂದೆ ಅವರ ಕುಟುಂಬದ ಪಾತ್ರವೂ ಇದೆ. ಅವರ ಪತ್ನಿಯವರಾದ ಶ್ರೀಮತಿ ಶಾಂತಮ್ಮರವರನ್ನು ನಾವು ನೆನಪಿಸಿ ಕೊಳ್ಳಲೇಬೇಕು. ಏಕೆಂದರೆ, ನಿರಂತರವಾಗಿ ಅವರು ಅವರ ಪತಿಗೆ ಸಹಕಾರವನ್ನು ಕೊಡುತ್ತಿದ್ದರು. ಯಾವತ್ತೂ ಅವರ ಪತಿಗೆ ಒತ್ತಡವನ್ನು ಕೊಡಲಿಲ್ಲ. ಅವರಿಗೆ ಹುಷಾರಿಲ್ಲದಿದ್ದರು ಅವರ ಪತಿಗೆ ನಿರಂತರವಾಗಿ ಪ್ರೋತ್ಸಾಹ ಕೊಡುತ್ತಿದ್ದರು. ಅವರಿಗೆ 4 ಜನ ಗಂಡು ಮಕ್ಕಳಿದ್ದು, ಅವರಲ್ಲಿ ಒಬ್ಬರೂ ಸಹ ರಾಜಕೀಯಕ್ಕೆ ಬಂದಿಲ್ಲದಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ರಾಜಕಾರಣವೆಂದರೆ ಅವರ ಮಕ್ಕಳನ್ನು ಬೆಳೆಸುವುದನ್ನು ನೋಡು ತ್ತಿದ್ದೇವೆ. ಇವರ ಮಕ್ಕಳೆಲ್ಲರೂ Doctor, Engineer ಆಗಿರುವುದು ಬಿಟ್ಟರೆ, ಅವರಲ್ಲಿ ಒಬ್ಬರನ್ನೂ ಸಹ ರಾಜಕೀಯಕ್ಕೆ ತರದೆ ಆ ರೀತಿಯಾದಂಥ ಶ್ರೇಷ್ಠ ವಾದಂಥ ಪದ್ಧತಿಯನ್ನು ಇಟ್ಟುಕೊಂಡಿರುವುದನ್ನು ನಾವು ನೋಡಬಹುದು. ನಮ್ಮ ಮುಖ್ಯಮಂತ್ರಿಯವರು, ಡಾ: ಆಚಾರ್ಯರವರು ಲಾಟರಿ ಟಿಕೇಟ್ ಅನ್ನು ಹೆಕ್ಕಿರುವ ಒಂದು ಘಟನೆ ಹೇಳಿದರು. ಅದನ್ನು ಪೂರ್ತಿ ವಿಶ್ಲೇಷಿಸಿ ಹೇಳುವುದಾದರೆ, ಗೀತಾಂಜಲಿ ಟಾಕೀಸ್ ಎದುರಿನಲ್ಲಿ ಮೈಸೂರು ಲಕ್ಷ್ಮಿ ಲಾಟರಿ ಇರುವಂಥ ಸಂದರ್ಭದಲ್ಲಿ ಅಲ್ಲಿ ಲಾಟರಿ ಅಂಗಡಿಗಳ ಸಾಲು ಇತ್ತು.

ಯಾವಾಗ ನೋಡಿದರೂ ಲಾಟರಿ ಟಿಕೇಟುಗಳನ್ನು ಅಲ್ಲಿ ಹರಿದು ಬಿಸಾಕುತ್ತಿದ್ದರಿಂದ ಬಹಳ ಕಸ ಸೇರುತ್ತಿತ್ತು. ಡಾ: ಆಚಾರ್ಯರಿಗೆ ಶುಚಿತ್ವದ ಬಗ್ಗೆ ಬಹಳಷ್ಟು ಕಾಳಜಿ ಇತ್ತು. ಈ ಬಗ್ಗೆ ಅನೇಕ ಸಾರಿ ಕಮಿಷನರ್‌ರವರಿಗೆ, ಇತರರಿಗೆ ಹೇಳಿದರೂ ಕೆಲಸ ಆಗಲಿಲ್ಲ. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ ಒಂದು ಸಲ ಅವರೇ ಅವರ ಕಾರನ್ನು drive ಮಾಡಿ ಕೊಂಡು ಬರುತ್ತಿದ್ದಾಗ, ಕಸ ಇರುವ ಕಡೆ ಕಾರ್ ನಿಲ್ಲಿಸಿ, ಅಲ್ಲಿದ್ದಂಥ ಎಲ್ಲಾ ಲಾಟರಿ ಟಿಕೇಟ್ ಚೂರುಗಳನ್ನು ಹೆಕ್ಕಲಿಕ್ಕೆ ಪ್ರಾರಂಭ ಮಾಡಿದರು. ಆ ಸಂದರ್ಭದಲ್ಲಿ ಪತ್ರಿಕೆಯವರು ಬಂದು ಫೋಟೋ ತೆಗೆದುಕೊಂಡರು. ಅದು ಮಾರನೇ ದಿವಸ ಪತ್ರಿಕೆಗಳಲ್ಲಿಬಂದು ದೊಡ್ಡ ಸುದ್ದಿಯಾಯಿತು. ಆ ನಂತರ, ಅದು ನ್ಯೆಸ್ ಮಾತ್ರ ಆದದ್ದಲ್ಲ, ಪತ್ರಿಕಾ ಪ್ರಚಾರಕ್ಕೋಸ್ಕರ ಮಾಡಿದಂಥದ್ದಲ್ಲ, ಮಾರನೇ ದಿವಸದಿಂದ ಆ street clean ಆಯಿತು. ಏಕೆಂದರೆ, ಅಲ್ಲಿ ಲಾಟರಿ ಟಿಕೇಟ್ ಮಾರುವವರೇ ಬುಟ್ಟಿ ಇಟ್ಟು ಅವರೇ ಕ್ಲೀನ್ ಆಗಿ ಇಟ್ಟುಕೊಳ್ಳುವುದಕ್ಕೆ ಪ್ರಾರಂಭಿಸಿದರು. ವಿಧಾನ ಪರಿಷತ್ ಸದಸ್ಯರಾದ ಒಬ್ಬರು ಈ ರೀತಿ ಮಾಡಿದರು, ಹಾಗಾಗಿ ನಾವು ಕ್ಲೀನ್ ಆಗಿ ಇಟ್ಟುಕೊಳ್ಳಬೇಕೆಂದು ಆ ರೀತಿ ಮಾಡಿದರು. ಅಂದರೆ, ಡಾ: ಆಚಾರ್ಯರ ಸ್ವಭಾವ ಆ ರೀತಿಯಾಗಿತ್ತು. ಇನ್ನು, ಅವರು ಒಂದು ಸಲ ಭರವಸೆ ಕೊಟ್ಟರೆ ಅದನ್ನು ಈಡೇರಿಸದೇ ಬಿಡುತ್ತಿರಲಿಲ್ಲ. ಈಗ ಎಲ್ಲ ಮಂತ್ರಿಗಳು ಭರವಸೆ ಕೊಡುತ್ತಾರೆ. ಆದರೆ, ಆ ಕೆಲಸವಾಗುವುದಿಲ್ಲ. ಇದನ್ನು ನಾವು ನೋಡುತ್ತಿದ್ದೇವೆ. ಆದರೆ, ಆಚಾರ್ಯ ರವರು, ಭರವಸೆ ಕೊಟ್ಟದ್ದನ್ನು ಮಾಡಬೇಕು, ಇಲ್ಲವೆಂದರೆ ನಮಗೆ ಬೆಲೆ ಇಲ್ಲವೆಂದು ನನಗೆ ಹೇಳುತ್ತಿದ್ದರು. ಯಾವುದಾದರೊಂದು ದೇವಸ್ಥಾನಕ್ಕೆ ಹೋದಾಗ ಇಂಥದ್ದು ಮಾಡುತ್ತೇನೆಂದು ಅವರು ಭರವಸೆ ಕೊಟ್ಟರೆ, ಅದೇ ದಿವಸ ಅವರು ಮನೆಗೆ ಹೋಗಿ ಅವರ ಡೈರಿಯಲ್ಲಿ ಬರೆದಿಡುತ್ತಿದ್ದರು. ಆ ರೀತಿ ಡೈರಿಯಲ್ಲಿ ಬರೆದಿಟ್ಟಿದ್ದನ್ನು ಅನುಷ್ಠಾನಕ್ಕೆ ತರುವ ಕೆಲಸವನ್ನು ಮಾಡುತ್ತಿದ್ದರು. ಅಂದರೆ ಕೆಲಸದ ಬಗ್ಗೆ ಅವರಿಗಿರುವ ಕಾಳಜಿಯನ್ನು ನಾವು ನೋಡಿದ್ದೇವೆ. ವಿಶೇಷವಾಗಿ, ನಗರಾಡಳಿತದ ಬಗ್ಗೆ ಅವರ ಕಾಳಜಿ ಹೆಚ್ಚಿತ್ತು. ಏಕೆಂದರೆ, ನಿಮಗೆಲ್ಲ ಗೊತ್ತಿರುವ ಹಾಗೆ, ಈ ರಾಜ್ಯದಲ್ಲಿ 2006ನೇ ಇಸವಿಯಲ್ಲಿ ಸಮ್ಮಿಶ್ರ ಸರ್ಕಾರ ಬರುವುದಕ್ಕೆ ಮೊದಲು ಹಿಂದೆ ನಮಗೆ ಸಂವಿಧಾನದ ಪ್ರಕಾರ ಅಧಿಕಾರಯುತವಾಗಿ ಬರಬೇಕಾದ SFC grant ಬರುತ್ತಿರಲಿಲ್ಲ. ಡಾ: ಆಚಾರ್ಯರವರು ವಿರೋಧ ಪಕ್ಷದಲ್ಲಿರುವಾಗ ಅದನ್ನು

ಪ್ರತಿಪಾದನೆ ಮಾಡಿ, ನಮ್ಮಲ್ಲಿರುವಂಥ ಕಿ.ಮೀ. ಮೇಲೆ, ನಮ್ಮಲ್ಲಿರುವಂಥ ಆಸ್ಪತ್ರೆ ಬೆಡ್ ಆಧಾರದ ಮೇಲೆ ನಮಗೆ ಅಧಿಕಾರಯುತವಾಗಿ ಬರಬೇಕಾದಂಥ ಹಣ ಬರುತ್ತಿಲ್ಲವೆಂದು ಹೇಳುತ್ತಿದ್ದರು. ಇವತ್ತು ಎಲ್ಲಾ ನಗರಸಭೆಗಳಿಗೆ 10 ಕೋಟಿ ರೂ., 6 ಕೋಟಿ ರೂ. ಈ ರೀತಿ ಅವರವರ ಮಾನದಂಡದ ಮೇಲೆ ಬರುತ್ತಿದೆ. ನಮ್ಮ ಸರ್ಕಾರ ಬಂದ ಮೇಲೆ ಪ್ರಥಮವಾಗಿ ಆಗ್ರಹಪೂರ್ವಕವಾಗಿ ಮಾಡಿ SFC grant ಬರಬೇಕಾಗಿದ್ದರೆ ಬರುವಂತೆ ಮಾಡುತ್ತಿದ್ದರು. ನಗರಾಡಳಿತದ ಬಗ್ಗೆ ಅವರಿಗೆ ವಿಶೇಷವಾದ ಕಾಳಜಿ ಇತ್ತು. ನನ್ನ ಕಳಕಳಿ ಏನೆಂದರೆ, ಶಾಶ್ವತವಾಗಿ ಅವರ ಹೆಸರು ಉಳಿಯಬೇಕಾದರೆ, ಡಾ: ಅಬ್ದುಲ್ ನಜೀರ್‌ಸಾಬ್‌ರವರ ಹೆಸರಿನಲ್ಲಿ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಗೆ ಅವರ ಹೆಸರು ಇಟ್ಟಿದ್ದಾರೆ, ಅದೇ ರೀತಿ ನಗರಾಡಳಿತದ ಸ್ಥಳೀಯ ಸಂಸ್ಥೆಗಳ ತರಬೇತಿ ಕೇಂದ್ರ ಸ್ಥಾಪಿಸಿ, ಅದಕ್ಕೆ ಡಾ: ಆಚಾರ್ಯರವರ ಹೆಸರನ್ನು ಇಡುವುದು ಸೂಕ್ತವೆಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಜಿಲ್ಲಾಧಿಕಾರಿ ಕಛೇರಿಗೆ ಹೋಗುವಂಥ ಹೊಸ ರಸ್ತೆ ಏನಿದೆ ಆ ರಸ್ತೆಯನ್ನು 4 ಲೇನ್ ಮಾಡಬೇಕೆಂದು ಅವರು ಮಾನ್ಯ ಉದಾಸಿ ಯವರಿಗೆ ವಿನಂತಿ ಮಾಡಿಕೊಂಡಿದ್ದರು. ನಾವೂ ಸಹ ನಗರಸಭೆಯಿಂದ ಅಭಿವೃದ್ಧಿ ಮಾಡಿ ಆ ರಸ್ತೆಗೆ ಅವರ ಹೆಸರನ್ನಿಡಬೇಕೆಂದು ಈಗಾಗಲೇ ಒಂದು ನಿರ್ಣಯ ಮಾಡಿದ್ದೇವೆ. ನನ್ನ ವಿನಂತಿ ಏನೆಂದರೆ, ಜಿಲ್ಲಾಧಿಕಾರಿ ಸಂಕೀರ್ಣ ಅವರ ಕನಸಾಗಿತ್ತು. ಅವರ ಶವದ ಕೊನೆಯ ದರ್ಶನವನ್ನು ಮಾಡಲು ಅಲ್ಲಿಯೇ ಇಟ್ಟಿದ್ದೆವು. ಜಿಲ್ಲಾಧಿಕಾರಿ ಸಂಕೀರ್ಣ ಉದ್ಘಾಟನಾ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ, ಈ ಜಿಲ್ಲೆಯ ಬಗ್ಗೆ ನನ್ನದು ಎರಡು ಕನಸು ಉಳಿದಿದೆ ಎಂದು ಹೇಳಿದ್ದರು. ಅದನ್ನು ಬಹುಶಃ ನಮ್ಮ ಮುಖ್ಯಮಂತ್ರಿಯವರು ಈಡೇರಿಸುತ್ತಾರೆಂದು ಭಾವಿಸುತ್ತೇನೆ. ಉಡುಪಿಯ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಇವತ್ತು ನಿರ್ಜೀವವಾಗಿದ್ದು, ಅದನ್ನು ಪುನಃಶ್ಚೇತನಗೊಳಿಸಲಿಕ್ಕೆ ಬಜೆಟ್‌ನಲ್ಲಿ 12 ಕೋಟಿ ರೂ.ಗಳನ್ನು ಕೊಡ ಬೇಕೆನ್ನುವ ವಿನಂತಿಯನ್ನು ಸಾರ್ವಜನಿಕವಾಗಿ ಮಾಡಿದ್ದರು. ಎರಡನೆ ಯದಾಗಿ, ಉಡುಪಿ ಜಿಲ್ಲೆಗೆ ಪ್ರತ್ಯೇಕವಾದ ಡಿ.ಸಿ.ಸಿ. ಬ್ಯಾಂಕ್ ಆಗಬೇಕೆನ್ನುವ ಎರಡು ಕನಸು ಇದೆ ಎಂದು ಹೇಳಿದ್ದರು. ಪ್ರಾಯಶಃ ಮುಖ್ಯಮಂತ್ರಿಯವರು ಆ ಕೊಡುಗೆಯನ್ನು ಕೊಡುತ್ತಾರೆನ್ನುವ ವಿಶ್ವಾಸ ನನಗಿದೆ. ಡಾ: ಆಚಾರ್ಯ ರವರ ಬಗ್ಗೆ ಹೇಳುವುದಕ್ಕೆ ಇನ್ನೂ ಸಾಕಷ್ಟು ವಿಷಯಗಳಿವೆ. ಆದರೆ, ಸಮಯಾಭಾವದಿಂದ ಹೆಚ್ಚಿಗೆ ಹೇಳುವುದಕ್ಕೆ ಆಗುವುದಿಲ್ಲ. ವಿಶೇಷವಾಗಿ

ನಾವು ನೆನಪಿಸಿಕೊಳ್ಳಬೇಕಾಗಿರುವುದೇನೆಂದರೆ, ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುವಾಗ ಉಲ್ಲೇಖಿಸಿದ ಹಾಗೆ, ರಘುರಾಮ್ ಶೆಟ್ಟಿರವರು ಕಾರ್ಕಳದಲ್ಲಿ ಜನಸಂಘದ ಪ್ರತಿನಿಧಿಯಾಗಿದ್ದರು. ಡಾ: ಆಚಾರ್ಯರವರು ಜನಸಂಘದಲ್ಲಿ ಚುನಾವಣೆಗೆ ನಿಂತ ಸಂದರ್ಭದಲ್ಲಿ ಅವರ ರಾಜಕೀಯ ಪ್ರವೇಶ ಪ್ರಪ್ರಥಮವಾಗಿತ್ತು. ದೀನದಯಾಳ್ ಉಪಾಧ್ಯಾಯರ ಭಾಷಣವನ್ನು ರೇಡಿಯೋದಲ್ಲಿ ಕೇಳಿದಂಥವರು. ಆ ರಾಷ್ಟ್ರೀಯ ವಿಚಾರದ ಬಗ್ಗೆ ಪ್ರಭಾವಿತರಾಗಿ ಅವರಾಗಿಯೇ ಅವರು ತಮ್ಮ ಸ್ಕೂಟರ್ ತೆಗೆದುಕೊಂಡು ಹೋಗಿ ರಘುರಾವ್ ಶೆಟ್ಟಿರವರ ಪ್ರಚಾರಕ್ಕೆ ಹೋಗಿದ್ದರು. ಅವರು ಯಾವುದೇ ಪಕ್ಷದಲ್ಲಿ ಗುರುತಿಸಿಕೊಂಡಿರಲಿಲ್ಲ. ದೀನದಯಾಳ್ ಉಪಾಧ್ಯಾಯರ ಭಾಷಣ ಕೇಳಿ ಅವರು ಪ್ರಚಾರಕ್ಕೆ ಹೋದವರು. ಅಲ್ಲಿ ಪ್ರಚಾರಕ್ಕೆ ಹೋದಾಗ ನಮ್ಮ ಹಿರಿಯರಾದ ಸೋಮಶೇಖರ್ ಭಟ್‌ರವರು ಒಬ್ಬ ಯುವಕನನ್ನು ಗುರುತಿಸಿ, ಇವರನ್ನು ಜನಸಂಘಕ್ಕೆ ಬನ್ನಿ ಎಂದು ಕರೆದುಕೊಂಡು ಬಂದು 1968ನೇ ಇಸವಿಯಲ್ಲಿ ನಗರಸಭೆಯ ಸದಸ್ಯನನ್ನಾಗಿ ಮಾಡಿದರು. ನಂತರ, ಇವರು ನಗರಸಭೆಯಲ್ಲಿ ಪ್ರಥಮವಾಗಿ ಅಧ್ಯಕ್ಷರಾಗಿದ್ದರು. ಅದರ ನಂತರ ಅವರು ಕಲ್ಮಾಡಿಯಲ್ಲಿ ಪ್ರಖ್ಯಾತ ಮತ್ತು busy ವೈದ್ಯರಾದರು. ಇವತ್ತಿಗೂ ನಾವು ಚುನಾವಣೆ ಸಂದರ್ಭದಲ್ಲಿ ಕಲ್ಮಾಡಿ, ಮಲ್ಪೆ ಭಾಗಗಳಿಗೆ ಹೋದರೆ, ಅವರು ನಮ್ಮ ಜೀವ ಬಚಾವು ಮಾಡಿದರು, ಏನೂ ಫಲಾನುಭವ ಪಡೆಯದೆ ಸೇವೆಯನ್ನು ಮಾಡಿದರು ಎಂದು ಅವರನ್ನು ನೆನಪಿಸಿಕೊಳ್ಳುತ್ತಾರೆ. ಅವರು ಅಷ್ಟು Popular Doctor ಆಗಿದ್ದರೂ ಸಹ ಅವರು ರಾಜಕೀಯಕ್ಕೆ ಬಂದು ವಿಶೇಷವಾದ ಸೇವೆಯನ್ನು ಮಾಡಿದ್ದಾರೆ. ನಾವು ನೋಡಿದ ಹಾಗೆ ಡಾಕ್ಟರ್ ಆಚಾರ್ಯರವರು ಎಷ್ಟು ಮೃದು ಸ್ವಭಾವದವರಾಗಿದ್ದರೋ ಅಷ್ಟೇ ಕಠಿಣ ನಿಲುವು ತೆಗೆದುಕೊಳ್ಳುತ್ತಿದ್ದರು. ಕೆಲವು ಸಲ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಬಹಳ ಕಠಿಣ ನಿಲುವು ತೆಗೆದುಕೊಳ್ಳುತ್ತಿದ್ದರು. ಯಾರಾದರೂ ಟೀಕೆ ಮಾಡುತ್ತರೆಂದು ಅವರು ಗಮನಿಸುತ್ತಿರಲಿಲ್ಲ. ಅದಕ್ಕೆ ಒಂದು ಉದಾಹರಣೆ ಎಂದರೆ ನಾಗಾರ್ಜುನ ಪವರ್ ಕಂಪನಿ ಬರುತ್ತೆ ದೆಂದಾಗ ಅದಕ್ಕೆ ಇಡೀ ಜಿಲ್ಲೆಯ ವಿರೋಧವಿತ್ತು. ಆದರೆ, ರಾಜ್ಯಕ್ಕೆ ಪವರ್ ಬೇಕೆಂದು ಕಠಿಣ ನಿಲುವು ತೆಗೆದುಕೊಂಡಿದ್ದರು. ಕೊನೆಯವರೆಗೂ ಅದಕ್ಕೆ ಬದ್ಧರಾಗಿದ್ದರು. ವಿಶೇಷವಾಗಿ ಯಾರ ಮೇಲಾದರೂ ಸಿಟ್ಟು ಬಂದರೆ ಅವರು ಬಳಸುತ್ತಿದ್ದ ಕಠಿಣ ಶಬ್ಧವೆಂದರೆ ದೊಡ್ಡ ಘಟಿಂಗ ಎಂದು ಆಗಿತ್ತು. ಅದಕ್ಕಿಂತ

ದೊಡ್ಡ ಶಬ್ಧ ಬಳಸಿದ್ದನ್ನು ನಾವು ನೋಡಿಲ್ಲ. ಅವರಂಥ ರಾಜಕಾರಣಿ ಇನ್ನು ಮುಂದೆ ಬರುತ್ತಾರೆಂಬ ವಿಶ್ವಾಸ ನನಗಂತೂ ಖಂಡಿತ ಇಲ್ಲ. ಆದರೆ, ನಮಗೆ ಒಂದು ಸಂತೋಷವೆಂದರೆ, ಅವರ ನೆರಳಲ್ಲಿ, ಮಾರ್ಗದರ್ಶನದಲ್ಲಿ, ಅವರೊಂದಿಗೆ ಕೆಲವಾದರೂ ವಿಷಯಗಳನ್ನು ಹಂಚಿಕೊಳ್ಳುವ ಸಂದರ್ಭ ಅಂದರೆ ಅವರ ಜೊತೆ ಕಾರಿನಲ್ಲಿ ಪ್ರವಾಸ ಮಾಡುವಾಗ ಸಿಗುತ್ತಿತ್ತು. ಅವರು ಕಾಡಿನಲ್ಲಿ ಹೋಗುವಾಗ ಯಾವತ್ತೂ ಸುಮ್ಮನೆ ಕುಳಿತುಕೊಂಡವರಲ್ಲ. ಅಭಿವೃದ್ಧಿ, ಆಡಳಿತದ ಬಗ್ಗೆ ನಿರಂತರವಾಗಿ ಅವರ ಜೊತೆಯಲ್ಲಿದ್ದವರಿಗೆ ಹೇಳುತ್ತಿದ್ದರು, ಹಂಚಿಕೊಳ್ಳುತ್ತಿದ್ದರು. ನನ್ನ ವಿನಂತಿ ಏನೆಂದರೆ, ವಿಶೇಷವಾಗಿ ನಗರಾಡಳಿತದಲ್ಲಿ ಸ್ಥಳೀಯ ಸಂಸ್ಥೆಗಳ ಅಧ್ಯಯನ ಸಂಸ್ಥೆ ಮಾಡಿ ಅದರಲ್ಲಿ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳಿಗೆ ಒಂದು ತರಬೇತಿ ಸಂಸ್ಥೆಯನ್ನು ಮಾಡಿ ಅದಕ್ಕೆ ಡಾ: ಆಚಾರ್ಯರವರ ಹೆಸರನ್ನಿಡಬೇಕು. ಆಚಾರ್ಯರವರು ಉಡುಪಿ ಅಭಿವೃದ್ಧಿಯ ಬಗ್ಗೆ ಯಾವ ಕನಸು ಕಂಡಿದ್ದಾರೆ, ಅದನ್ನು ಅನುಷ್ಠಾನ ಮಾಡಲಿಕ್ಕೆ ಸರ್ಕಾರ ವಿಶೇಷ ಪ್ರಯತ್ನ ಮಾಡಬೇಕೆಂದು ಹೇಳಿ, ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಡಾ: ವಿ.ಎಸ್.ಆಚಾರ್ಯರ ನಿಧನದ ಹಿನ್ನೆಲೆಯಲ್ಲಿ ತಂದಿರುವ ಸಂತಾಪ ಸೂಚನಾ ನಿರ್ಣಯದ ಮೇಲೆ ಆ ಭಾಗದ, ಈ ಭಾಗದ ಎಲ್ಲರೂ ಒಳ್ಳೆಯ ಮಾತನ್ನಾಡಿದ್ದಾರೆ. ಒಬ್ಬೊಬ್ಬರ ಮಾತಿಗೂ ನಾನು ಸಂಪೂರ್ಣವಾಗಿ ಅನುಮೋದನೆ ಮಾಡುತ್ತೇನೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ನಾವು ಮಾತನಾಡಿದ್ದನ್ನು ಅವರು ಕೇಳುವುದಕ್ಕೆ ಸಾಧ್ಯವಿಲ್ಲ. ಆದರೆ, ನಾವು ಮಾತನಾಡುವುದು ಕಡತಕ್ಕೆ ಹೋಗಬೇಕು, ಮುಂದಿನ ಪೀಳಿಗೆ ಅವರ ವಿಚಾರಗಳ ಬಗ್ಗೆ ಅಧ್ಯಯನ ಮಾಡುವುದಕ್ಕೆ, ವಿಚಾರ ಮಾಡುವುದಕ್ಕೆ ಅವಕಾಶವಾಗಬೇಕು ಎನ್ನುವ ಕಾರಣಕ್ಕೋಸ್ಕರ ಕೆಲವು ಮಾತುಗಳನ್ನಾಡಬೇಕಾಗುತ್ತದೆ. ನನ್ನ ಅವರ ವೈಯಕ್ತಿಕವಾದ ಸಂಬಂಧ ಬಹಳ ಚೆನ್ನಾಗಿತ್ತು. ನಾನು ಹಿಂದೆ 1997–98ರಲ್ಲಿ PAC ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಡಾ: ಆಚಾರ್ಯರವರು ಸದಸ್ಯರಾಗಿದ್ದರು. ಆಗ ನಾವು ನಮ್ಮ ಅವಧಿಯಲ್ಲಿ ಚರ್ಚೆ ಮಾಡಿದಂಥ ಎಲ್ಲಾ ವಿಚಾರಗಳಲ್ಲೂ ಅವರ ಆಳವಾದ ಅಧ್ಯಯನ ಇತ್ತು ಮತ್ತು ಸಮರ್ಥ ರೀತಿಯಲ್ಲಿ ಅವರು ವಾದ ಮಾಡುತ್ತಿದ್ದುದ್ದನ್ನು ನಾನು ಮೆಚ್ಚಿಕೊಳ್ಳುತ್ತಿದ್ದೆ. ಆಚಾರ್ಯರವರು ಯಾವ ವಿಚಾರ ಪ್ರಸ್ತಾಪ ಮಾಡಿದರೂ ಕೂಡ ಬಹಳಷ್ಟು ತಯಾರಿ ಮಾಡಿಕೊಂಡು ಹೋಗುತ್ತಿದ್ದೆವು. ಹೀಗೆ ಮಾಡಬೇಕು, ಈ ತರಹ ಆದೇಶ

ಕೊಡಬೇಕೆಂದು ಅವರು ಹೇಳುತ್ತಿದ್ದರು. ಇದೆಲ್ಲದರ ಜೊತೆಗೆ ನಾವು ಒಂದು ಸಲ ಪ್ರವಾಸ ಹೋದೆವು. ಆಗ ನಾವೆಲ್ಲ family ಸಹಿತ ಟೂರ್ ಹೋದ ಸಂದರ್ಭದಲ್ಲಿ ಆ 20 ದಿವಸ ಆಚಾರ್ಯರವರ ಒಡನಾಟ, ಅವರ ಪತ್ನಿಯವರಾದ ಶಾಂತಕ್ಕನವರು ಬಂದಿದ್ದರು. ಈಶ್ವರಪ್ಪನವರೆ, ತಾವು ಮತ್ತು ತಮ್ಮ ಮನೆಯವರ ಜೊತೆ ಆ ಟೂರ್‌ಗೆ ಬಂದಿದ್ದರು. ಆಗ ಯಡಿಯೂರಪ್ಪ ನವರು ಮತ್ತು ಯಡಿಯೂರಪ್ಪನವರ ಮನೆಯವರು ಟೂರ್‌ಗೆ ಬಂದಿದ್ದರು. ಅವು ನಿಜವಾಗಿಯೂ ಮರೆಯಲಾರದ ದಿನಗಳು. ಆ ದಿನಗಳು ನೆನಪಿಸಿ ಕೊಳ್ಳುವ ದಿನಗಳಾಗಿ ನಮ್ಮ ಮನಸ್ಸಿನಲ್ಲಿ ಉಳಿದಿವೆ. ಜಯಚಂದ್ರರವರು ಮಾತನಾಡಿಲ್ಲ ಎಂದು ಗೊತ್ತಾಗಬಾರದೆಂದು ನಾನು ಮಾತನಾಡಲೇ ಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು, ಕಾಂಗ್ರೆಸ್ ಕಛೇರಿಯಲ್ಲಿ ಆಚಾರ್ಯರವರ ಸಂತಾಪ ಸೂಚನೆಗೋಸ್ಕರ ಸಭೆ ಮಾಡಿದ್ದಾರೆಂದು ಹೇಳಿದರು. ಅದು ನಮ್ಮ ಕಾಂಗ್ರೆಸ್‌ನ ಸಂಸ್ಕೃತಿಯೂ ಹೌದು. ಜೊತೆಗೆ, ಅಂಥ ವ್ಯಕ್ತಿತ್ವ, ಬೇರು ಮಟ್ಟದ ವ್ಯಕ್ತಿತ್ವ ಹೊಂದಿದ್ದಂಥವರು ಶ್ರೀಮಾನ್ ಆಚಾರ್ಯ. ಮಾನ್ಯ ಮುಖ್ಯಮಂತ್ರಿಯವರು ಬಹಳ ಸಮರ್ಥನೆ ಮಾಡಿದರು. ಮಾನ್ಯ ಮುಖ್ಯಮಂತ್ರಿಯವರು ಮುಖ್ಯಮಂತ್ರಿಯವರಾಗಿ ಕೇವಲ 8–9 ತಿಂಗಳಾಗಿದೆ. ಅವರನ್ನು ಆಚಾರ್ಯರವರು ಯಾವ ರೀತಿಯಾಗಿ ಸಮರ್ಥನೆ ಮಾಡುತ್ತಿದ್ದರು ಎನ್ನುವುದರ ಜೊತೆಗೆ ಯಡಿಯೂರಪ್ಪನವರನ್ನೂ ಸಹ ಅಷ್ಟೇ ಸಮರ್ಥನೆ ಮಾಡುತ್ತಿದ್ದರು. ಬಹುಶಃ ಎಲ್ಲೋ ಒಂದು ಕಡೆ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಆದರೂ ಕೂಡ ಇವತ್ತು ಯಡಿಯೂರಪ್ಪನವರು ಈ ಸಭೆಗೆ ಬಂದು ಈ ಸಭೆಯಲ್ಲಿ ಭಾಗವಹಿಸಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಅವರು ಬಂದು ಮಾತನಾಡಿದ್ದರೆ ಬಹಳಷ್ಟು ಚೆನ್ನಾಗಿರುತ್ತಿತ್ತು. Parliamentary Affairs Minister ಡಾ: ಆಚಾರ್ಯರವರೇ ಅಥವಾ ಇನ್ಯಾರೋ ಎನ್ನುವಷ್ಟು confuse ಆಗುತ್ತಿತ್ತು. ಯಾವುದೇ ಸಮಸ್ಯೆ ಬಂದರೂ ಆ ಸಮಸ್ಯೆಯನ್ನು ಎದುರಿಸುವ, ಬಗೆಹರಿಸುವ ಪಾಂಡಿತ್ಯ ಅವರಲ್ಲಿತ್ತು. ಕೊನೆಯದಾಗಿ ಅವರು Hindu Religious Endowment Bill ಮಂಡಿಸಿದರು. ಆವತ್ತು ಸಿದ್ದರಾಮಯ್ಯನವರು, ನಾನು ಬರುವವರೆಗೆ ಚರ್ಚೆ ಮಾಡುವುದು ಬೇಡ ಎಂದು ಹೇಳಿದ್ದರು. ಡಾ: ಆಚಾರ್ಯರವರು, ಇವತ್ತು ಏನಾದರೂ ಮಾಡಿ ಈ ಬಿಲ್ ಪಾಸ್ ಮಾಡಬೇಕು, ಹಿಂದೆ ಇದು defeat ಆಗಿದೆ, ದಯಮಾಡಿ ಜಯಚಂದ್ರರವರೆ ಅವಕಾಶ ಮಾಡಿಕೊಡಿ

ಎಂದು ಹೇಳಿದರು. ಸಿದ್ದರಾಮಯ್ಯನವರು ಬೇಡ ಎಂದು ಹೇಳಿದ್ದಾರೆ, ಇನ್ನೊಂದು ದಿವಸ ಚರ್ಚೆ ಮಾಡೋಣ ಎಂದು ಹೇಳಿದೆ. ಅದಕ್ಕೆ ಅವರು, ಇಲ್ಲ, ದಯಮಾಡಿ ನೀವು ಏನು ಹೇಳಬೇಕೋ ಅದನ್ನೆಲ್ಲ ಹೇಳಿ, ನೀವು ಹೇಳಿದ್ದಕ್ಕೆಲ್ಲ ಉತ್ತರ ಕೊಡುತ್ತೇನೆ ಎಂದು ಹೇಳಿದರು. ನಾವು ಅನಿವಾರ್ಯವಾಗಿ ಅವರ ಮಾತಿಗೆ, ಸ್ನೇಹಕ್ಕೆ ಕಟ್ಟುಬಿದ್ದು ಮಾತನಾಡಬೇಕಾಗಿ ಬಂತು. ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ ಮೇಲೆ ಅವರಿಗೆ ಅದು ಏಕೋ ಸಮಾಧಾನ ತರಲಿಲ್ಲವೆಂದು ಕಾಣುತ್ತದೆ. ಅದಾದ ಮೇಲೆ ನನಗೆ phone ಮಾಡಿ ಕೆಲವು documents ಅನ್ನು ನಿಮಗೆ ಕಳುಹಿಸಿಕೊಡುತ್ತೇನೆ, ನೋಡಿ ಎಂದು ಹೇಳಿ bill pass ಆದ ಮೇಲೆ ನನ್ನ ಹತ್ತಿರ ಚರ್ಚೆ ಮಾಡಿ ನನ್ನನ್ನು ಸಮಾಧಾನಪಡಿಸುವ ಕೆಲಸ ಮಾಡಿದ್ದಾರೆ. ಅಂಥ ವ್ಯಕ್ತಿತ್ವ ಇರುವವರನ್ನು ನಾವು ಎಲ್ಲಾ ಕಡೆಯವರೂ ಕೂಡ ಮುಕ್ತಕಂಠದಿಂದ ಹೊಗಳಿರಬೇಕಾದರೆ, ಅವರು ಮುಂದಿನ ಪೀಳಿಗೆಗೆ ಅಥವಾ ಇವತ್ತು ಸಂಸದೀಯ ವ್ಯವಸ್ಥೆಯಲ್ಲಿರುವವರೆಲ್ಲರೂ ಅನುಸರಿಸಬೇಕಾಗುತ್ತದೆಂದು ಹೇಳುತ್ತಾ, ಅವರ ಆತ್ಮಕ್ಕೆ ಶಾಂತಿ ಕೋರಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಉಲ್ಲೇಖ ಮಾಡಿದ ಹಾಗೆ, ಆಚಾರ್ಯರವರು ಬಿಜೆಪಿಯವರ ಜೊತೆಗೆ ಮಾತ್ರ ಸಂಬಂಧ, ವಿಶ್ವಾಸವನ್ನು ಬೆಳೆಸಿಕೊಂಡು ಬಂದಿದ್ದಲ್ಲ. ಅವರು ಉಲ್ಲೇಖಿಸಿದ ಹಾಗೆ ಆಚಾರ್ಯರವರು ನಮಗೆಲ್ಲ ಬಹಳ ಆತ್ಮೀಯರಾಗಿದ್ದರು. ಈ ಆತ್ಮೀಯತೆ ಮತ್ತು ವಿಶ್ವಾಸಕ್ಕೆ ಎಂದೂ ಕೂಡ ಅವರ ಪಕ್ಷ ನಿಷ್ಠೆ ಅಡ್ಡಿಯಾಗಲಿಲ್ಲ. ಅನೇಕ ಬಾರಿ 25 ವರ್ಷಗಳಿಂದ ನನಗೆ ಅವರ ಹತ್ತಿರದ ಸಂಬಂಧವಿತ್ತು. ನಾನು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಅಧ್ಯಕ್ಷನಾಗಿದ್ದೆ. ಅವರು ವಿಧಾನ ಪರಿಷತ್ ಸದಸ್ಯರಾಗಿ ಅವರು ಸಭೆಗೆ ಬರುತ್ತಿದ್ದರು. ಆ ಸಭೆ ಮುಗಿದ ನಂತರ ಅವರ ಹತ್ತಿರ ಮಾರುತಿ 800 ಕಾರು ಇತ್ತು. ಅವರು ಆ ಕಾರಿನಲ್ಲಿ ಕಾಯುತ್ತಿದ್ದರು. ಬಹುಶಃ ಮಾರುತಿ ಸಂಸ್ಥೆಯಿಂದ ಮೊದಲು ಹೊರಬಂದ ಕಾರು ಅದಾಗಿತ್ತು. ಅವರು ತುಳುವಿನಲ್ಲಿ, ಗೋಪಾಲ್ ಭಂಡಾರಿ, ಬಲ್ಲೆ, ಕುಳ್‌ಲೆ, ಒಟ್ಟಿಗೆ ಪೋಯಿ ಎಂದು ಹೇಳುವಂಥ ಅವರ ಆತ್ಮೀಯತೆಯ ಮಾತು ಇತ್ತು. ಜೊತೆಗೆ ಬರುವಾಗ ಅಲ್ಲಿ ಏನು ಚರ್ಚೆ ನಡೆಯಿತು, ಆ ಚರ್ಚೆಯ ಬಗ್ಗೆಯೇ

ಮಾತನಾಡುತ್ತಿದ್ದರೇ ವಿನಃ 20–25 ವರ್ಷಗಳ ಅನೇಕ ಬಾರಿ ಒಟ್ಟಿಗೆ ಪ್ರಯಾಣ ಮಾಡಿದ್ದೇವೆ, ವೇದಿಕೆ ಹಂಚಿಕೊಂಡಿದ್ದೇವೆ. ನಮ್ಮ KSRTC ರಾಜಹಂಸದಲ್ಲಿ ಒಟ್ಟಿಗೆ ಬರುವಾಗ ಅವರು ಅಭಿವೃದ್ಧಿಯ ಬಗ್ಗೆಯೇ ವಿನಃ ಮಾತನಾಡುತ್ತಿದ್ದರೇ ವಿನಃ ರಾಜಕೀಯ ಮಾತನಾಡುತ್ತಿರಲಿಲ್ಲ. ರಾಜಕೀಯ ತಾತ್ವಿಕ ಭಿನ್ನಾಭಿಪ್ರಾಯಗಳಿರಬಹುದೇ ವಿನಃ ಅದನ್ನು ವೈಯಕ್ತಿಕವಾಗಿ ಯಾವತ್ತೂ ಕೂಡ ಪರಿವರ್ತನೆ ಮಾಡದೇ ಇದ್ದ ಅತ್ಯಂತ ಅಪರೂಪದ ವ್ಯಕ್ತಿತ್ವ ಅವರದಾಗಿತ್ತು. ಎಂದೂ ಕೂಡ ನಾನು ಯಾರು, ಯಾವ ಪಕ್ಷದವನು, ಯಾವ ಕಡೆ ಇದ್ದೇನೆ, ಯಾವ ತತ್ವಸಿದ್ಧಾಂತ ಏನು ಎಂಬುದು ಅವರಿಗೆ ಗೊತ್ತಿದೆ. ಆದರೂ, ಅವರು ಒಂದು ದಿವಸವೂ ಸಹ ಅದನ್ನು ಕೆಣಕುವಂತ ಪ್ರಯತ್ನ ಮಾಡಲಿಲ್ಲ, ಜೊತೆಗೆ ಅದರ ಬಗ್ಗೆ ಮಾತನಾಡಲಿಲ್ಲ. ವೇದಿಕೆಯಲ್ಲೂ ಕೂಡ ಹೇಳುತ್ತಿದ್ದರು. ಮಾನ್ಯ ಲೋಕೋಪಯೋಗಿ ಸಚಿವರು ಮೊನ್ನೆ ನಮ್ಮ ತಾಲ್ಲೂಕಿಗೆ ಬಂದಾಗ ಅಲ್ಲೂ ಕೂಡ ಹೇಳಿದ್ದರು. ಈ ಅಭಿವೃದ್ಧಿಯ ಬಗ್ಗೆ ಮಾತನಾಡುವಾಗ ಯಾವುದೇ ಜನಪ್ರತಿನಿಧಿಗಳಿಗೆ ಗೌರವ ಕೊಡುವಲ್ಲಿ ಎಂದೂ ಕೂಡ ಹಿಂದೆ ಬೀಳುತ್ತಿರಲಿಲ್ಲ. Protocol ಬೆಂಬಲಿಸುವಲ್ಲಿ, ಆಚರಿಸುವಲ್ಲಿ ನಮ್ಮ ರಾಜ್ಯದಲ್ಲಿ ಇವರು ಅತ್ಯಂತ ಪ್ರಥಮರು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಅವರು ನನ್ನ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದಾಗ ನನ್ನ ಕ್ಷೇತ್ರದಲ್ಲಿ ಹಾದು ಹೋಗುವಾಗ ಕೂಡ ನನಗೆ ನೇರವಾಗಿ ದೂರವಾಣಿ ಕರೆ ಮಾಡಿ ನಾನು ಈ ಕಡೆ ಬರುತ್ತಿದ್ದೇನೆ ಎಂದು ಹೇಳುವಾಗ ನಮಗೆ ಎಲ್ಲಿಯೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾವು ಅವರ ಜೊತೆ ಸೇರಿಕೊಳ್ಳುತ್ತಿದ್ದೆವು. ನಾವು ಬಹಳ ನೋಡುತ್ತಿದ್ದೇವೆ. ಬಹಳ ಜನ ಕ್ಷೇತ್ರದಲ್ಲಿ ಹಾದು ಹೋಗುವುದು ಬಿಟ್ಟು ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೂ ನಮಗೊಂದು ಸೂಚನೆ ಕೊಡದಿರುವಂಥ ಈ ಕಾಲಘಟ್ಟದಲ್ಲಿ ಇಂಥ ಅಪರೂಪದವರು ಇರುವಂಥದ್ದು ಬಹಳ ಕಡಿಮೆ. ಅದರ ಜೊತೆಗೆ ನಾನು ಕಂಡುಕೊಂಡಿದ್ದೇನೆ. ಅಭಿವೃದ್ಧಿಯ ಬಗ್ಗೆ ಹೆಚ್ಚು ಕಾಳಜಿ. ನಮ್ಮ ಉಡುಪಿ ಜಿಲ್ಲೆಯಲ್ಲಿ ಆದಂಥ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಇದೆ. ಇತ್ತೀಚಿನ ದಿವಸಗಳಲ್ಲಂತೂ ಬಹಳ ವಿಶೇಷವಾದ ಕಾಳಜಿ ವ್ಯಕ್ತಪಡಿಸುವುದರ ಜೊತೆಗೆ ನಮ್ಮಲ್ಲಿ ಎಲ್ಲರ ಆತ್ಮೀಯತೆಯನ್ನು ಉಳಿಸಿಕೊಂಡಿದ್ದರು. ಆದ್ದರಿಂದಲೇ ಬಹುಶಃ ಅವರಿಗಾಗಿ ಎಲ್ಲಾ ಸಭೆಗಳಲ್ಲಿ ಬಹುಶಃ ಉಡುಪಿಯ ಜಿಲ್ಲಾ ಕಾಂಗ್ರೆಸ್‌ನಲ್ಲಿ ಮಾತ್ರ

ಮಾಡಿದ್ದಲ್ಲ. ಎಲ್ಲಾ ಸಭೆಗಳಲ್ಲಿಯೂ ಕೂಡ ಅವರಿಗೆ ಶ್ರದ್ಧಾಂಜಲಿ ಯನ್ನು ಅರ್ಪಿಸತಕ್ಕಂಥ ಒಂದು ದೊಡ್ಡ ಕೆಲಸ ಸಮಾಜ ಮಾಡಿದೆ. ನಾವು ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿರುತ್ತಾರೆ ಎನ್ನುವುದಕ್ಕೆ ಅವರೊಂದು ಜೀವಂತ ವಾದ ಉದಾಹರಣೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಬಹಳಷ್ಟು ಜನರು ಯಾರ್ಯಾರೋ ಮಾಡಿದ್ದನ್ನು ನಾನು ಮಾಡಿದ್ದು ಎಂದು ಬೆನ್ನು ತಟ್ಟಿಸಿಕೊಳ್ಳುವಂಥ ಕೆಲವು ಜನರು ಇದ್ದಾರೆ. ಆದರೆ, ನಮ್ಮಲ್ಲಿ ಅವರು ಮಾಡಿದ್ದನ್ನು ನಾನು ಮಾಡಿದ್ದೇನೆ ಎಂಬುದಾಗಿ ಎಲ್ಲಿಯೂ ಕೂಡ ಹೇಳಿಕೊಳ್ಳುತ್ತಿರಲಿಲ್ಲ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿರುವ ಕೋಟಿ ಚೆನ್ನಯ್ಯ ಥೀಮ್ ಪಾರ್ಕ್ ಇದೆ, ಅಲ್ಲಿ ಪಾಲಿಟೆಕ್ನಿಕ್‌ಗಳಿವೆ, ಅದು ನನಗೆ ಗೊತ್ತಿದೆ. ನಾವು ಕೂಡ ಆ ಭಾಗದ ಆ ವರ್ಗದ ಜನ ಅನೇಕ ಸಾರಿ ಇದು ಬೇಕು ಇದು ಬೇಕೆಂದು ಪ್ರಸ್ತಾಪ ಮಾಡಿದರು. ಅದರ ಅನುಷ್ಠಾನದಲ್ಲಿ ಸಂಪೂರ್ಣ ಅವರ ಪಾತ್ರ ಇದೆ. ಆದರೆ, ಎಂದೂ ಕೂಡ ನಾನು ಮಾಡಿದ್ದೆ ಎಂಬುದಾಗಿ ಹೇಳಲಿಲ್ಲ. ಬೇರೆಯವರು ಅವರ ಮುಂದೆಯೇ ನಾನು ಮಾಡಿದ್ದು ಎಂದರೂ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಆದ್ದರಿಂದ ಅಂತಹ ಒಂದು ದೊಡ್ಡತನ ಮತ್ತು ದೊಡ್ಡ ವ್ಯಕ್ತಿತ್ವ ಅವರಲ್ಲಿತ್ತು. ಅವರನ್ನು ಕಳೆದುಕೊಂಡಿ ರುವುದು ನಮ್ಮ ಜಿಲ್ಲೆಗಂತೂ ಅತ್ಯಂತ ದೊಡ್ಡ ನಷ್ಟ. ರಾಜ್ಯಕ್ಕೆ ಮಾತ್ರವಲ್ಲ ಜಿಲ್ಲೆಗೆ ಬಹಳ ದೊಡ್ಡ ನಷ್ಟವಾಗಿದೆ ಎನ್ನುವ ಮಾತನ್ನು ಹೇಳುತ್ತಾ, ಅವರ ಅಗಲಿಕೆಯನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬಕ್ಕೆ ಆ ಪರಮಾತ್ಮ ಕೊಡಲಿ ಎಂದು ಕೇಳಿಕೊಂಡು ಅವರಿಗೆ ಶ್ರದ್ಧಾಂಜಲಿಯನ್ನು ಇಲ್ಲಿ ಅರ್ಪಿಸುತ್ತಾ, ನನಗೆ ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಗಳು.

ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಅಧ್ಯಕ್ಷರೆ, ಡಾ: ವೇದವ್ಯಾಸ ಶ್ರೀನಿವಾಸ ಆಚಾರ್ಯರವರು ಡಾ: ವಿ.ಎಸ್.ಆಚಾರ್ಯರು ಎಂದು ಖ್ಯಾತಿಹೊಂದಿದವರು. ಅವರ 73 ವರುಷದ ಜೀವನದಲ್ಲಿ ಉಡುಪಿ ಜಿಲ್ಲೆಗೆ ಮತ್ತು ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಅಭಿವೃದ್ಧಿ ಕೆಲಸ ಕಾರ್ಯಗಳ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಅಗಲಿಕೆಯಿಂದ ಬಂಧುಗಳಿಗೆ ಹಾಗೂ ನಮಗೆಲ್ಲರಿಗೂ ಬಹಳ ದುಃಖವಾಗಿದೆ. ಅವರ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸುವುದರ ಜೊತೆಗೆ ಉಡುಪಿಗೆ ಅವರು ಒಂದು ಲೆಕ್ಕದಲ್ಲಿ ಉಡುಪಿಯ ಬ್ರಹ್ಮ ಎಂದು ಕರೆಯಬಹುದು. ಆ ರೀತಿಯ ಅಭಿವೃದ್ಧಿ ಕಾರ್ಯಗಳನ್ನು

ಉಡುಪಿ ಜಿಲ್ಲೆಯಲ್ಲಿ ಹಾಗೂ ಕರ್ನಾಟಕದಲ್ಲಿ ಮಾಡಿದ್ದಾರೆ. ಉಡುಪಿಯ ಜಿಲ್ಲಾಧಿಕಾರಿ ಕಚೇರಿ ಇರಬಹುದು, ಕರಾವಳಿಯ ಮೀನುಗಾರಿಕೆಯ ಬಂದರುಗಳಿಗೆ ಅವರು ಸಾಕಷ್ಟು ಪುನಃಶ್ಚೇತನ ಕೊಟ್ಟು, ಇವತ್ತು ಡೀಸೆಲ್ ಸಬ್ಸಿಡಿ ಇರಬಹುದು, ಸರ್ಕಾರದ ಯಾವುದೇ ಯೋಜನೆಗಳನ್ನು ಅನುಷ್ಠಾನ ಗೊಳಿಸುವಾಗ ಸಾಕಷ್ಟು ಕೊಡುಗೆಗಳನ್ನು ಕೊಟ್ಟಿದ್ದಾರೆ. ನಮ್ಮ ಕಾಪು ಕ್ಷೇತ್ರಕ್ಕೂ ಕೂಡ 2 ಸರ್ಕಾರಿ ಕಾಲೇಜುಗಳಿಗೆ ಸುಮಾರು 4 ಕೋಟಿಯಷ್ಟು ಹಣ ಮಂಜೂರಾತಿ ಮಾಡುವಲ್ಲಿ, ಅದೇ ರೀತಿಯಲ್ಲಿ ನಮ್ಮ ತುಂಬಾ ಬೆಳ್ಳಂಪಾಳಿ ಹಾಗೂ ಆ ಭಾಗದ ಕಡೆ ಇರುವ ಸೇತುವೆಗಳ ನಿರ್ವಹಣೆಗೆ ಮಂಜೂರಾತಿ ಕೊಡುವಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಜೊತೆಗೆ ಹಾಗೂ ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಿ.ವಿ. ಸದಾನಂದಗೌಡರವರ ಜೊತೆ ಹಾಗೂ ನಮ್ಮ ಎಲ್ಲಾ ಜನಪ್ರತಿ ನಿಧಿಗಳು ಸೇರಿ ಅದನ್ನು ತರುವಂಥದ್ದಾಗಿದೆ. ಡಾ: ವಿ.ಎಸ್.ಆಚಾರ್ಯರವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿಯೂ ಕೂಡ ನಮ್ಮೊಂದಿಗೆ ಅವರ ಅನುಭವ ಹಂಚಿಕೊಂಡಿದ್ದರು. ಭಾರತೀಯ ಜನಸಂಘದ ಕಾಲದಿಂದಲೂ ಕೂಡ ಅವರು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಅವಿಭಾಜ್ಯ ಜಿಲ್ಲೆಯ ಬಿಜೆಪಿಯ ಅಧ್ಯಕ್ಷರಾಗಿಯೂ ಸೇವೆ ಮಾಡಿದ್ದಾರೆ. ತುಂಬಾ ಕೊಡುಗೆಗಳನ್ನು ಕೊಟ್ಟಿದ್ದಾರೆ. ನಮ್ಮ ಕಾಪುವಿನಲ್ಲೂ ಕೂಡ ಈಗಾಗಲೇ ಯಜಮಾಡಿ ಬಂದರಿನ ನೀಲಿ ನಕ್ಷೆಯನ್ನು ತಯಾರಿಸಿ ಅದಕ್ಕೆ ಬಜೆಟ್ ಮಂಡಣೆಗೆ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಕಾಪುವಿನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಇರಬಹುದು, ಉಡುಪಿಯ ಜಿಲ್ಲಾಧಿಕಾರಿ ಕಚೇರಿ, ಉಡುಪಿಯ ಮೀನುಗಾರಿಕೆ ಬಂದರು, ಈ ರೀತಿಯಾಗಿ ಕರಾವಳಿ ಜನರೊಂದಿಗೆ ಸತತವಾಗಿ ಸಂಪರ್ಕದಲ್ಲಿದ್ದರು. ಅವರ ಕೊನೆಯ ಕಾರ್ಯಕ್ರಮ ನನ್ನ ಕಾಪುವಿನಲ್ಲಿ ಫೆಬ್ರವರಿ 12 ಕ್ಕೆ ಆಗಿತ್ತು. ಅದೇ ರೀತಿಯಲ್ಲಿ ಸನ್ಮಾನ್ಯ ಉದಾಸಿಯವರು ನಮ್ಮ ಉಡುಪಿಗೆ ಬಂದು ಪಾಲಿಟೆಕ್ನಿಕ್ ಕಾಲೇಜಿಗೂ ಕೂಡ ಶೀಲನ್ಯಾಸದ ಸಮಾರಂಭದಲ್ಲಿ ಭಾಗವಹಿಸಿದ್ದರು. ಡಾ: ವಿ.ಎಸ್.ಆಚಾರ್ಯರವರು ದೂರ ದೃಷ್ಟಿವುಳ್ಳಂಥ ಮುತ್ಸದ್ಧಿ ನಾಯಕರಾಗಿ ಎಲ್ಲಾ ಪಕ್ಷದವರಿಗೂ ಕೂಡ ಅವರೊಬ್ಬ ಆದರ್ಶವಾದ ನಾಯಕರಾಗಿದ್ದರು. ಅವರ ಅಂತ್ಯಸಂಸ್ಕಾರ ದಲ್ಲಿಯೂ ಕೂಡ ಸನ್ಮಾನ್ಯ ಲಾಲ ಕೃಷ್ಣ ಅಡ್ವಾಣಿಯವರು, ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು, ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಿ.ವಿ.

ಸದಾನಂದಗೌಡರವರು, ನಮ್ಮ ಪಕ್ಷದ ರಾಜ್ಯ ಅಧ್ಯಕ್ಷರಾದ ಈಶ್ವರಪ್ಪನವರು, ಮಾನ್ಯ ಜನಾರ್ಧನ ಪೂಜಾರಿಯವರು, ಹೀಗೆ ಬೇರೆ ಬೇರೆ ನಾಯಕರೆಲ್ಲರೂ ಬಂದು ಆ ದಿವಸ ಭಾಗವಹಿಸಿ ಶ್ರದ್ಧಾಂಜಲಿ ಕೋರಿದ್ದಾರೆ. ನಾನು ಕೂಡ ಕಾಪು ಕ್ಷೇತ್ರದ ಜನತೆಯ ಪರವಾಗಿ ಅವರಿಗೆ ನಮನ ಸಲ್ಲಿಸುತ್ತಾ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿ ಆ ಭಗವಂತ ಅವರಿಗೆ ಕೊಡಲಿ, ನಮ್ಮ ಕಾರ್ಯಕರ್ತರಿಗೆ ಹಾಗೂ ಎಲ್ಲಾ ಬಂಧುಗಳಿಗೆ ಮತ್ತು ಎಲ್ಲರಿಗೂ ಕೂಡ ಅವರ ಅಗಲಿಕೆಯ ದುಃಖ ಸಹಿಸುವ ಶಕ್ತಿ ಸಿಗಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸಿ ಅವರ ಆತ್ಮಕ್ಕೆ ಶ್ರದ್ಧಾಂಜಲಿ ಕೋರುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಬೆಲ್ಲದ್‌ರವರು.

ಶ್ರೀ ಚಂದ್ರಕಾಂತ್ ಗುರುಪ್ಪ ಬೆಲ್ಲದ್ (ಹುಬ್ಬಳ್ಳಿ-ಧಾರವಾಡ-ಪಶ್ಚಿಮ) : ಮಾನ್ಯ ಅಧ್ಯಕ್ಷರೆ, ಡಾ: ವಿ.ಎಸ್. ಆಚಾರ್ಯರವರ ಬಗ್ಗೆ ಇವತ್ತಿನ ದಿವಸ ತಾವು ತಂದಂಥ ಸಂತಾಪ ಸೂಚನೆಯ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ರಾಜ್ಯದ ಉನ್ನತ ಶಿಕ್ಷಣ ಸಚಿವರಾದಂಥ ಡಾ: ವಿ.ಎಸ್. ಆಚಾರ್ಯರವರು ಒಬ್ಬ ಸಮಾಜ ಜೀವಿ, ಒಬ್ಬ ಸಮಾಜ ಚಿಂತಕರು, ಒಬ್ಬ ಆದರ್ಶ ರಾಜಕಾರಣಿ, ಅಜಾತ ಶತ್ರುವಾಗಿದ್ದರು ಎಂದು ಹೇಳಬೇಕಾಗುತ್ತದೆ. ಅಂಥ ಒಬ್ಬ ವ್ಯಕ್ತಿಯನ್ನು ನಾವಿಂದು ರಾಜಕಾರಣದಲ್ಲಿ ಕಳೆದುಕೊಂಡಿದ್ದೇವೆ. ಶ್ರೀಯುತರು ಅನೇಕ ವಿಚಾರದಲ್ಲಿ ಆದರ್ಶರಾಗಿರುವಂಥವರು. ಈಗಾಗಲೇ ಅನೇಕ ಜನ ಹಿರಿಯ ಸದಸ್ಯರು ಅವರ ಬಗ್ಗೆ ಮಾತನಾಡಿದ್ದಾರೆ. ಅವರು ಮೊಟ್ಟ ಮೊದಲು ಪ್ರವೇಶ ಮಾಡಿದ್ದು ಉಡುಪಿ ನಗರ ಸಭೆಯ ಒಬ್ಬ ಸದಸ್ಯರಾಗಿ ನಂತರ ಅಧ್ಯಕ್ಷರಾಗಿ ಮಾಡಿದಂಥ ಕಾರ್ಯ ಇಡೀ ರಾಜ್ಯಕ್ಕೆ ಮಾದರಿಯಾಗುವಂಥ ಕಾರ್ಯವನ್ನು ಮಾಡಿದ್ದಾರೆ. ಬಹುಶಃ ಅವರಿಗೆ ನಮಗೆ ಬಹಳ ದಿವಸಗಳ ಸಂಬಂಧ. ಅಂದರೆ ಅವರ ಇಬ್ಬರ ಸಹೋದರಿಯರಲ್ಲಿ ಒಬ್ಬರನ್ನು ಧಾರವಾಡಕ್ಕೆ ಮತ್ತೊಬ್ಬರನ್ನು ಹುಬ್ಬಳ್ಳಿಗೆ ಕೊಟ್ಟಿದ್ದರು. ಕಿದಿವರ್ ಮತ್ತು ಅಲಿವರ್ ಎನ್ನುವ ಫ್ಯಾಮಿಲಿಗಳಿಗೆ ಅವರು ತಮ್ಮ ಸಹೋದರಿಯರನ್ನು ಕೊಟ್ಟಿದ್ದರು. ಹೀಗಾಗಿ ನಮಗೆ ರಾಜಕೀಯಕ್ಕೆ ಬರುವುದಕ್ಕಿಂತ ಮೊದಲಿನಿಂದಲೂ ನಮ್ಮ ಅವರ ಸಂಬಂಧ ಇತ್ತು. ಇಷ್ಟೆ ಅಲ್ಲ ನಾನು 1983 ಕ್ಕೆ ರಾಜಕೀಯ ಪ್ರವೇಶ ಮಾಡಿದ್ದೇನೆ. ಅಂದು ಅವರಾಗಲೇ ರಾಜಕೀಯದಲ್ಲಿದ್ದಂಥ ವ್ಯಕ್ತಿ. ಅವರ ನಡವಳಿಕೆಯನ್ನು ಇವತ್ತು ಎಲ್ಲರೂ ಪ್ರಶಂಸೆ ಮಾಡಿದ್ದಾರೆ. ಒಬ್ಬ ಅಜಾತ

ಶತ್ರು ಎನ್ನುವ ದೃಷ್ಟಿಯಿಂದ ಮತ್ತು ಅವರು ಯಾವುದೇ ಒಂದು ಸ್ಥಾನಮಾನ ದಲ್ಲಿದ್ದರೂ ಕೂಡ ತಮ್ಮದೇ ಆದ ಗುರುತು ನಿಲುವು ಇಟ್ಟು ಕಾರ್ಯ ಮಾಡಿದ್ದಾರೆ. ಎಲ್ಲಾ ಇಲಾಖೆಯೊಳಗೆ ಅವರು ಕೆಲಸ ಮಾಡಿದ್ದಾರೆ. ಎಲ್ಲದರಲ್ಲೂ ಅಭ್ಯಾಸ ಮಾಡಿ ಸದನದಲ್ಲಿ ಮಾತನಾಡಿದಂಥ ಮತ್ತು ಅವರು ದಕ್ಷತೆಯಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದಂಥ ಒಬ್ಬ ವ್ಯಕ್ತಿ ನಮ್ಮ ಆಚಾರ್ಯರವರು. ಆಚಾರ್ಯರವರು ಇವತ್ತಿನ ದಿವಸ ಈ ರಾಜ್ಯಕ್ಕೆ ಅದರಲ್ಲೂ ಮುಖ್ಯವಾಗಿ ಜನತಾ ಪಕ್ಷದಿಂದ ಬಂದಿದ್ದಾರೆ. ನಾನು ರಾಜಕೀಯಕ್ಕೆ ಬಂದಿದ್ದು 1983 ರಿಂದ. ಆದರೆ, ನಾನು ಬಿಜೆಪಿಗೆ ಬಂದಿದ್ದು 1991 ರಿಂದ. ಅಂದಿನಿಂದಲೂ ಸಹ ಅವರ ಒಡನಾಟದಲ್ಲಿ ನಾನು ಬಂದಿದ್ದೇನೆ. ಅವರೊಬ್ಬ ಸಮರ್ಥವಾದ ಶಾಸಕರು, ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಬಹುಶಃ ಈಗ ಎಲ್ಲರೂ ವಿರೋಧ ಪಕ್ಷದವರಾಗಲಿ ಅಥವಾ ಈ ಕಡೆ ಇದ್ದವರಾಗಲಿ ಅವರ ಗುಣಗಾನ ಮಾಡಿದ್ದರೆ. ಅವರ ಆದರ್ಶದಂತೆ ನಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ನಾವು ಎಷ್ಟರಮಟ್ಟಿಗೆ ನಡೆದುಕೊಳ್ಳುತ್ತೇವೆಂದು ನಾವು ನಮ್ಮ ಆತ್ಮ ಪರಿಶೀಲನೆ ಮಾಡಿಕೊಂಡು ಆ ದಾರಿಯಲ್ಲಿ ನಡೆಯಬೇಕಾಗುತ್ತದೆ. ಇವತ್ತಿನ ದಿವಸ ಜನತಾ ಪಕ್ಷದ ಇಂಥ ಒಂದು ಸಂದರ್ಭದಲ್ಲಿಯೂ ಕೂಡ ಅವರು ಭಾರತೀಯ ಜನತಾ ಪಕ್ಷಕ್ಕೆ ನೀಡಿದಂಥ ಒಂದು ಕಾರ್ಯ ನಾವಿಂದು ನೆನಪಿಸಿಕೊಳ್ಳುತ್ತಿದ್ದೇವೆ. ಈ ಒಂದು ಸಂದರ್ಭದಲ್ಲಿ ಅವರು ಇವತ್ತಿನ ಸದನದಲ್ಲಿ ಇರಬೇಕಾಗಿತ್ತು ಎಂದು ನಮಗೆ ಒಮ್ಮೊಮ್ಮೆ ಅನ್ನಿಸುತ್ತದೆ. ಮನುಷ್ಯ ಹುಟ್ಟಿ ಬರುವುದು ಬಹಳ ಅನಿರೀಕ್ಷಿತ, ಆದರೆ ಸಾವು ಮಾತ್ರ ನಿಶ್ಚಿತ. ಆ ಹುಟ್ಟು ಸಾವು ಎರಡರ ಮಧ್ಯದಲ್ಲಿ ಮನುಷ್ಯ ತನ್ನ ಸ್ಥಾನಮಾನಗಳಿಂದ ಹೇಗೆ ನಡೆದುಕೊಂಡ ಎಂಬುದು ಬಹಳ ಮುಖ್ಯವಾದುದು. ಅದನ್ನೆ ನಾವು ಇವತ್ತು ಆ ವ್ಯಕ್ತಿಯ ಗುಣಗಾನ ಮತ್ತು ಅವರು ಮಾಡಿದಂಥ ಕಾರ್ಯ ಅವರು ನಡೆದು ಬಂದ ಮಾದರಿಯನ್ನು ನಾವು ಪ್ರಶಂಸೆ ಮಾಡಬೇಕಾಗುತ್ತದೆ. ಇವತ್ತು ಭಾರತೀಯ ಜನತಾ ಪಾರ್ಟಿಗೆ ಹೇಗೆ ಒಂದು ದೊಡ್ಡ ಸ್ಥಾನವನ್ನು ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ರಾಷ್ಟ್ರ ಮತ್ತು ಅಂತರ ರಾಷ್ಟ್ರಮಟ್ಟದಲ್ಲಿ ತಂದು ಕೊಟ್ಟರೂ ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಇವತ್ತು ಬೆಳೆಯಲಿಕ್ಕೆ ಅವರು ದೊಡ್ಡ ಸಹಾಯ ಮಾಡಿದ್ದಾರೆಂದು ನಾನು ಇವತ್ತು ಸ್ಮರಿಸಿಕೊಳ್ಳಬೇಕಾಗುತ್ತದೆ. ಅವರು ಈ ಕಾಲದಲ್ಲಿ ಇರಬೇಕಾಗಿತ್ತು. ಅವರು ಕೊನೆಯವರೆಗೂ ತಮ್ಮ

ಕಾರ್ಯದಲ್ಲಿ ಇದ್ದುಕೊಂಡು ಕ್ರಿಯಾದಲ್ಲಿದ್ದುಕೊಂಡು ತಮ್ಮ ಸ್ಥಾನಮಾನದ ಜವಾಬ್ದಾರಿಯನ್ನು ಅರಿತು ಕೆಲಸ ಮಾಡುತ್ತಾ ಅವರು ನಮ್ಮಿಂದ ಅಗಲಿದ್ದಾರೆ. ಅವರು ಮಾಡಿದಂಥ ಕಾರ್ಯ ಉಡುಪಿ ಜಿಲ್ಲೆಯಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಸ್ಮರಿಸುವಂತಿದೆ. ಎಲ್ಲಾ ರಾಜಕಾರಣಿಗಳು ಅನುಕರಣೆ ಮಾಡುವಂಥ ಒಬ್ಬ ಅಜಾತಶತ್ರು ರಾಜಕಾರಣಿ ಎಂದು ಹೇಳಬೇಕಾಗುತ್ತದೆ. ಅವರನ್ನು ಕಳೆದುಕೊಂಡಿದ್ದಕ್ಕೆ ಕರ್ನಾಟಕ ರಾಜ್ಯದ ಒಬ್ಬ ಆದರ್ಶ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ, ಅವರ ಆತ್ಮಕ್ಕೆ ಶಾಂತಿ ಸಿಗಬೇಕಾಗಿದೆ. ಅದಕ್ಕಿಂತ ಮುಖ್ಯವಾಗಿ ಈ ಸದನದಲ್ಲಿ ಅವರ ಗುಣಗಾನ ವನ್ನು ಮಾಡಿದಂಥ ನಾವುಗಳೆಲ್ಲರೂ ಆ ದಾರಿಯಲ್ಲಿ ನಡೆದು ರಾಜ್ಯಕ್ಕೆ ರಾಷ್ಟ್ರಕ್ಕೆ ಮಾದರಿಯಾದಂಥ ವ್ಯಕ್ತಿಗಳಾಗಬೇಕೆಂದು ಈ ಒಂದು ಸಂದರ್ಭ ದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಿದ್ದೇನೆ, ಧನ್ಯವಾದಗಳು.

ಅಧ್ಯಕ್ಷರು : ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಈ ಹಂತದಲ್ಲಿ ಸದನದಲ್ಲಿದ್ದವರೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೃತರ ಗೌರವಾರ್ಥ ಮೌನವನ್ನು ಆಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡಿತು. ಪುನಃ ದಿನಾಂಕ: 21–03–2012ರಂದು ಬೆಳಿಗ್ಗೆ 11–00 ಗಂಟೆಗೆ ಸಭೆ ಸೇರಲು ನಿಃಶ್ಚಯಿಸಿತು)

* * * * *